# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಡಿಸೆಂಬರ್, ೨೦೧೪

ಸಂಪುಟ: ೪ ಸಂಚಿಕೆ: ೫

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ :** ವಾರ್ಷಿಕ: ರೂ. ೧೫೦/–(ವ್ಯಕ್ತಿಗಳಿಗೆ) ರೂ.೨೫೦/–(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/–

**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಇದು ನಮ್ಮ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹ್ರೂ ಅವರ ೧೨೫ನೇ ಜನ್ಮದಿನಾಚರಣೆಯ ವರ್ಷ. ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕರಲ್ಲೊಬ್ಬರಾಗಿದ್ದ–ಬಹುಶಃ ಮಹಾತ್ಮ ಗಾಂಧಿ ನಂತರ ಅತ್ಯಂತ ಹೆಚ್ಚು ಜನಪ್ರಿಯರಾಗಿದ್ದ–ನೆಹ್ರೂ ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾಗಿದ್ದು ಸಹಜವೇ ಆಗಿತ್ತು. ಅದಕ್ಕೆ ಜನಸಮ್ಮತಿಯೂ ಇತ್ತು ಎಂಬುದು ಅವರು ಸತತವಾಗಿ ಮೂರು ಮಹಾ ಚುನಾವಣೆಗಳಲ್ಲಿ ತಮ್ಮ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿಕೊಂಡು ೧೭ ವರ್ಷಗಳ ಕಾಲ ಯಾವ ಪ್ರತಿಸ್ಪರ್ಧಿಯೂ ಇಲ್ಲದೆ –ತಮ್ಮ ಕೊನೆಯುಸಿರೆಳೆಯುವವರೆಗೂ–ಪ್ರಧಾನಿಯಾಗಿದ್ದುದೇ ಸಾಕ್ಷಿ. ಸ್ವಾತಂತ್ರ್ಯ ಹೋರಾಟದ ಗಾಂಧಿ ಮೌಲ್ಯಗಳಿಗೆ ಅವರು ಸಾಕ್ಷಿಯಾಗಿದ್ದುದರಿಂದಲೇ ಅವರ ಸರ್ಕಾರ ಹಲವು ಭ್ರಷ್ಟಾಚಾರದ ಹಗರಣಗಳು ಮತ್ತು ಕೆಲವು ತಪ್ಪು ನೀತಿ–ನಿರ್ಧಾರಗಳ ಕಷ್ಟಗಳಿಗೆ ಸಿಕ್ಕಿಹಾಕಿಕೊಂಡರೂ–ಆಚಾರ್ಯ ಕೃಪಲಾನಿ, ಆಚಾರ್ಯ ನರೇಂದ್ರದೇವ, ರಾಜಾಜಿ, ಜಯಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯಾರಂತಹ ಸ್ವಾತಂತ್ರ್ಯ ಹೋರಾಟದ ಮೂಸೆಯಲ್ಲಿ ರೂಪುಗೊಂಡ ಅತಿರಥ ಮಹಾರಥರ ರಾಜಕೀಯ ದಾಳಿಗಳೆದುರಿನಲ್ಲಿಯೂ ಅವರು ನಾಯಕರಾಗಿ ಉಳಿದರು.

ಹಾಗೆ ನೋಡಿದರೆ, ಯಾವುದು ಅವರ ಮಹಾಶಕ್ತಿಯಾಗಿತ್ತೋ ಮತ್ತು ಯಾವುದರ ಆಧಾರದ ಮೇಲೆ ಅವರು ವಿಶ್ವನಾಯಕರಾಗುವ ಮಹತ್ವಾಕಾಂಕ್ಷೆ ಪ್ರದರ್ಶಿಸಿದ್ದರೋ, ಆ ವಿದೇಶಾಂಗ ವ್ಯವಹಾರಗಳ ಪರಿಣಿತಿಯಲ್ಲಿನ ಒಂದು ಲೋಪವೇ ಅವರ ರಾಜಕೀಯ ವರ್ಚಸ್ಸಿನ ಮತ್ತು ದೈಹಿಕ ಆರೋಗ್ಯದ ಅವಸಾನಕ್ಕೆ ಕಾರಣವಾಯಿತು. ಚೀನಾದೊಡನೆಯ ಅವರ ವಿದೇಶಾಂಗ ನೀತಿಯು–ಹಲವರ ಎಚ್ಚರಿಕೆಗಳ ನಡುವೆಯೂ–ಭೋಳೆಭೋಳೆಯಾಗುತ್ತಾ ಹೋಗಿ ಕೊನೆಗೆ ಆ ದೇಶದೊಡನೆ ಗಡಿ ವಿವಾದದ ಸಂಬಂಧವಾಗಿ ಯುದ್ಧ ಅನಿವಾರ್ಯವಾಗಿ ಭಾರತ ಅದರಲ್ಲಿ ಹೀನಾಯವಾಗಿ ಸೋಲಬೇಕಾಯಿತು. ಇದು ನೆಹ್ರೂರ ನಾಯಕತ್ವದ ನೈತಿಕ ಸ್ಥೈರ್ಯವನ್ನು ಉಡುಗಿಸಿತು. ಅದು ಅವರ ಪ್ರಾಣವನ್ನೇ ಬಲಿತೆಗೆದುಕೊಂಡಿತು.

ನಿಜ, ನೆಹ್ರೂ ದೊಡ್ಡ ನಾಯಕರು. ಭಾರತ ಇಂದು ಆಧುನಿಕ ಪ್ರಜಾಪ್ರಭುತ್ವವಾಗಿ ಮತ್ತು ಒಂದು ಸ್ಥಿರ ಆರ್ಥಿಕ ವ್ಯವಸ್ಥೆಯಾಗಿ ಉಳಿದಿದ್ದರೆ, ಅದಕ್ಕೆ ಅವರು ತಮ್ಮ ೧೭ ವರ್ಷಗಳ ಅಧಿಕಾರಾವಧಿಯಲ್ಲಿ ಹಾಕಿಕೊಟ್ಟ ಸಾಂಸ್ಥಿಕ ಮತ್ತು ಸಂಪ್ರದಾಯಗಳ ಅಸ್ತಿವಾರಗಳೇ ಕಾರಣ. ಭಾರತದೊಂದಿಗೇ ವಸಾಹತುಶಾಹಿಯಿಂದ ವಿಮೋಚನೆಗೊಂಡ ಹಲವು ದೇಶಗಳು ಇಂದು ಯಾವ ಸ್ಥಿತಿಯಲ್ಲಿವೆ ಎಂದು ನೋಡಿದರೇ ನೆಹ್ರೂ ಅವರ ಕೊಡುಗೆಯ ಐತಿಹಾಸಿಕ ಮಹತ್ವ ಗೊತ್ತಾಗುತ್ತದೆ. ಅದಕ್ಕಾಗಿ ದೇಶ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕಿದೆ ಮತ್ತು ಅದರ ಸಂಕೇತವಾಗಿ ಅವರ ೧೨೫ನೇ ಜನ್ಮವರ್ಷವನ್ನು ಸಂಭ್ರಮದಿಂದ ಆಚರಿಸಬೇಕಿದೆ. ಆದರೆ ಈ ಆಚರಣೆ ಈಗ ಹಾಗೆ ಆಗುತ್ತಿಲ್ಲವಾದರೆ–ಇನ್ನೂ ಸರಿಯಾಗಿ ಹೇಳುವುದಿದ್ದರೆ, ಹಾಗೆ ಆಗಲು ಸಾಧ್ಯವಾಗಿರದಿದ್ದರೆ–ಅದಕ್ಕೆ ಕಾರಣ, ಅವರ ರಾಜಕೀಯ ವಾರಸುದಾರಿಕೆಯ ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಂಡಿದೆ ಎಂಬುದಷ್ಟೇ ಅಲ್ಲ–ಹಲವು ಬಾರಿ ಅದು ಹಾಗೆ ಕಳೆದುಕೊಂಡಿದೆ–ಅದು ಒಂದು ರಾಜಕೀಯ ಪಕ್ಷವಾಗಿ ಹೀನಾಯ ಸ್ಥಿತಿ ತಲುಪಿರುವುದೂ ಆಗಿದೆ. ಇದಕ್ಕೆ ಮತ್ತೆ ಹಲವಾರು ಕಾರಣಗಳನ್ನು ಹುಡುಕಬಹುದಾದರೂ, ಎದ್ದು ಕಾಣುವ ಒಂದು ಮುಖ್ಯ ಕಾರಣವೆಂದರೆ, ಅದು ತನ್ನೆಲ್ಲ ಪ್ರಜಾಸತ್ತಾತ್ಮಕತೆಯನ್ನು ಕಳೆದುಕೊಂಡು ಒಂದು ಕುಟುಂಬದ ಗುಲಾಮಗಿರಿಗೆ ಸಿಕ್ಕಿಹಾಕಿಕೊಂಡಿರುವುದು. ಜೊತೆಗೆ, ಇತಿಹಾಸದಲ್ಲಿನ ಎಲ್ಲ ಮಹಾಕುಟುಂಬಗಳಂತೆ ಕಾಲಕ್ರಮದಲ್ಲಿ ಅದರ ಎಲ್ಲ ಸತ್ವವೂ ನಷ್ಟವಾಗಿದ್ದು, ಸ್ವತಃ ತಾನೇ ವರ್ಚಸ್ವೀ ಅಥವಾ ಸ್ಫೂರ್ತಿಯುತ ಅಥವಾ ಪ್ರತಿಭಾಶಾಲಿ ನಾಯಕತ್ವವನ್ನು ಒದಗಿಸಲೂ ಆಗದೆ, ತನ್ನ ಒಣಪ್ರತಿಷ್ಠೆಯಲ್ಲಿ ಅನ್ಯ ಮೂಲಗಳ ನಾಯಕತ್ವವೂ ಬೆಳೆಯದಂತೆ ತಡೆಯುತ್ತಾ ಪಕ್ಷವನ್ನು ಒಂದುಪಾಳುಬಿದ್ದ ಕೋಟೆಯನ್ನಾಗಿ ಮಾಡಿಬಿಟ್ಟಿರುವುದು.

ಇದಕ್ಕೆ ಕಾರಣಗಳನ್ನು ನೆಹ್ರೂ ಶೈಲಿಯ ರಾಜಕಾರಣದಲ್ಲಿ ಹುಡುಕಬಹುದು. ರಾಷ್ಟ್ರ ನಿರ್ಮಾಣದ ದಿಕ್ಕನ್ನು ಗಾಂಧಿ ಪಥದಿಂದ ಯಾವುದೇ ವಿಷಾದ, ಪಶ್ಚಾತ್ತಾಪ ಅಥವಾ ಸಮಾಲೋಚನೆ–ಸಮರ್ಥನೆ ಇಲ್ಲದೆ ಸಂಪೂರ್ಣ ವಿಮುಖಗೊಳಿಸಿದ ನೆಹ್ರೂ, ನಾಯಕ ಆರಾಧನೆಯ ರಾಜಕೀಯ ಶೈಲಿಯನ್ನು ಬೆಳೆಸಿದ್ದನ್ನು ಕಾಂಗ್ರೆಸ್ಸಿನ ಇತಿಹಾಸ ಬಲ್ಲ ಯಾರೂ ಅಲ್ಲಗೆಳೆಯಲಾರರು. ಸ್ವಾತಂತ್ರ್ಯ ಹೋರಾಟದಲ್ಲಿ ಅವರಿಗೆ ಸರಿಸಮವಾಗಿ ಭಾಗವಹಿಸಿದ್ದ–ಈ ಹಿಂದೆ ತಿಳಿಸಿದ–ಮಹಾನಾಯಕರ ದಂಡೇ ಅವರ ವಿರುದ್ಧ ತಿರುಗಿ ಬೀಳಲು ಇದೇ ಮುಖ್ಯ ಕಾರಣವಾಗಿತ್ತು. ಲೋಹಿಯಾ ನೆಹ್ರೂ ವಿರುದ್ಧ ವೈಯಕ್ತಿಕ ದಾಳಿ ಮಾಡಲೂ ಇದೇ–ವ್ಯಕ್ತಿ ಕೇಂದ್ರಿತ ರಾಜಕಾರಣವೇ–ಕಾರಣವಾಗಿತ್ತು. ನೆಹ್ರೂ ತಮ್ಮ ತಂದೆ ಮೋತಿಲಾಲ್ ನೆಹ್ರೂ ಸ್ವಾತಂತ್ರ್ಯಪೂರ್ವದಲ್ಲಿ ಪುತ್ರಪ್ರೇಮದಿಂದ ತಮ್ಮನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡುವ ಯಾವ ವಂಶ ರಾಜಕಾರಣವನ್ನು ಮಾಡಿದರೋ ಅದನ್ನು ತಮ್ಮ ಪುತ್ರಿ ಇಂದಿರಾ ಗಾಂಧಿಯವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡುವ ಮೂಲಕ ಮಾಡಿ ಮುಂದುವರೆಸಿದರು. ಇದರ ಮುಂದಿನದೆಲ್ಲವೂ ಇತಿಹಾಸ.

ಈ ರಾಜಕಾರಣದ ಭಾಗವಾಗಿಯೇ, ಅಂದರೆ ಕುಟುಂಬ ರಾಜಕಾರಣವನ್ನು 'ಅಧಿಕೃತ'ಗೊಳಿಸಲೆಂದೇ ಕುಟುಂಬದ ವೈಭವೀಕರಣದ ಯೋಜನೆಯ ಭಾಗವಾಗಿಯೇ, ನೆಹ್ರೂ ಸಮಕಾಲೀನರೇ ಆದ ಎಲ್ಲ ಪ್ರಮುಖ ನಾಯಕರನ್ನು ಹಿನ್ನೆಲೆಗೆ ಸರಿಸಲಾಯಿತು. ಈ ರಾಜಕಾರಣಕ್ಕೆ ಹೇಸಿ ಪಕ್ಷ ಬಿಟ್ಟುಹೋದ ಮೇಲೆ ತಿಳಿಸಿದ ಮಹನೀಯರಿರಲಿ, ಪಕ್ಷದ ಪರಂಪರೆಯ ಭಾಗವಾದ ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ್, ಸರ್ದಾರ್ ಪಟೇಲ್, ಸುಭಾಷ್‌ಚಂದ್ರ ಬೋಸ್, ಮದನಮೋಹನ ಮಾಳವೀಯ, ಗೋವಿಂದ ವಲ್ಲಭ ಪಂತ್ ಮುಂತಾದವರಿಗೆ ಸಾಂಕೇತಿಕ ಮಹತ್ವ ಮಾತ್ರ ನೀಡುವ ಪರಿಪಾಠ ಬೆಳೆಯಿತು. ಇದೇ ಇಂದು ಸುತ್ತಿಕೊಂಡು ಬಂದು ನೆಹ್ರೂ ಸ್ಮರಣೆಯ ಸಂಭ್ರಮದ ಗುಡಾರಗಳನ್ನು ಹಾರಿಸಿಕೊಂಡು ಹೋಗುತ್ತಿರುವುದು.

ಪ್ರಧಾನ ಮಂತ್ರಿ ಮೋದಿ ಔಪಚಾರಿಕತೆಗಾಗಿ ಹಿಂದಿನ ಸರ್ಕಾರ ರಚಿಸಿದ್ದ ನೆಹ್ರೂ ಸ್ಮರಣೆ ಸಮಿತಿಯನ್ನು ತಮ್ಮ ರಾಜಕಾರಣಕ್ಕೆ ತಕ್ಕಂತೆ ಪರಿಷ್ಕರಿಸಿ ಉಳಿಸಿಕೊಂಡಿರುವರಾದರೂ, ಅದು ಕಾಟಾಚಾರದ ಆಚರಣೆಗೆ ಮಾತ್ರ. ಏಕೆಂದರೆ, ಮೋದಿ, ನೆಹ್ರೂ ವಿರುದ್ಧ ಪಟೇಲರನ್ನು ನಿಲ್ಲಿಸಿ ಮಾಡುತ್ತಿರುವ ರಾಜಕಾರಣವನ್ನು ಈಗ ರಾಷ್ಟ್ರ ತಮಾಷೆಯಿಂದ ಗಮನಿಸುತ್ತಿದೆ. ತಮಾಷೆ ಏಕೆಂದರೆ, ರಾಷ್ಟ್ರೀಯತೆಯ ಬಗ್ಗೆ ಯಾವಾಗಲೂ ಉಮ್ಮಳಿಸಿಕೊಂಡೇ ಮಾತಾಡುವ ಬಿಜೆಪಿಗೆ ತನ್ನವರೆಂದು ರಾಷ್ಟ್ರದ ಮುಂದೆ ಇಡಲು ಈಗ ಐತಿಹಾಸಿಕ ನಾಯಕರೇ ಇಲ್ಲವಾಗಿ ಅದು ಪಟೇಲ್, ಸುಭಾಷ್, ಮಾಳವೀಯ, ಜೆಪಿ ಎಂದು ಕಾಂಗ್ರೆಸ್ ಪರಂಪರೆಯ ನಾಯಕರನ್ನೇ ತನ್ನೊಳಕ್ಕೆ ಅನುಸಂಧಾನಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನ ಮತ್ತು ಅದೇ ಸಮಯದಲ್ಲಿ ಅದು 'ಕಾಂಗ್ರೆಸ್ ಮುಕ್ತ ಭಾರತ'ದ ಮಾತನ್ನೂ ಆಡುತ್ತಿರುವುದು! ಆದರೆ ಒಂದು ಮಾತು: ಮಹಾತ್ಯಾಗಗಳ ಓರ್ವ ಬಹುದೊಡ್ಡ ನಾಯಕರಾದ ಸರ್ದಾರ್ ಪಟೇಲರು ನೆಹ್ರೂರಂತೆ ಎಂದೂ

ರಾಷ್ಟ್ರದ ಉದ್ದಗಲಕ್ಕೂ ಮಾನ್ಯತೆ ಪಡೆದ ಜನಪ್ರಿಯ ನಾಯಕರಾಗಿರಲಿಲ್ಲ. ಅಷ್ಟೇ ಅಲ್ಲ, ಕಾಂಗ್ರೆಸ್ ಆಂದೋಲನ ಮತ್ತು ಪಕ್ಷದೊಳಗೂ ಅವರು ತಮ್ಮ ಜಿಗುಟು ಸ್ವಭಾವದಿಂದಾಗಿ ಸರ್ವಮಾನ್ಯ ನಾಯಕರಾಗಿರಲಿಲ್ಲ. ಅವರ ರಾಜಕಾರಣದ ಒಳಹೊಡೆತಗಳನ್ನು ಸೈರಿಸಲಾರದೆಯೇ ಕಾಂಗ್ರೆಸ್ಸಿನೊಳಗಿನ ಎಡಪಂಥೀಯರು–ನಿರ್ದಿಷ್ಟವಾಗಿ ಕಾಂಗ್ರೆಸ್ ಸಮಾಜವಾದಿ ಗುಂಪು– ಪಕ್ಷ ಬಿಟ್ಟು ಹೊರಬರಬೇಕಾಗಿ ಬಂದು ಪಕ್ಷ ಉದ್ಯಮಪತಿಗಳ ಮತ್ತು ಜಮೀನ್ದಾರರ ಪಕ್ಷವೆಂದು ಹೆಸರಾಗಲು ಕಾರಣವಾಯಿತು.

ಬಹುಶಃ ಯಾವುದೇ ಪಕ್ಷ ಕಾಂಗ್ರೆಸ್ಸೀಕರಣ ಎಂಬ ವಿಶಿಷ್ಟತೆಗೆ ಒಳಪಡದೆ ಈ ವಿಶಿಷ್ಟ ರಾಷ್ಟ್ರವನ್ನು ಆಳಲಾಗದೆಂದು ಕಾಣುತ್ತದೆ! ಬಿಜೆಪಿ ಕೂಡ ಈಗ ಪಟೇಲರನ್ನು ತನ್ನ ನಾಯಕ ಪ್ರತೀಕರನ್ನಾಗಿ ಮಾಡಿಕೊಂಡು ಔಪಚಾರಿಕವಾಗಿಯೇ ಈಗ ಕಾಂಗ್ರೆಸ್ಸೀಕರಣದ ಹಾದಿ ತುಳಿದಂತಿದೆ. ಅದರ ಲಕ್ಷಣಗಳು ಒಂದೊಂದಾಗಿ ಹೊರತೋರತೊಡಗಿವೆ: ಅದರೆಲ್ಲ ಭರವಸೆಗಳು ಕಾಂಗ್ರೆಸ್ಸೀಕರಣವಾಗುತ್ತಿವೆ! ವಿದೇಶಗಳಲ್ಲಿರುವ ಕಪ್ಪುಹಣ ವಾಪಸ್ ತರುವ ಭರವಸೆ ಕಾಂಗ್ರೆಸ್ಸಿನಂತಹುದೇ ಕುಂಟುನೆಪದ ಮರೆಯಲ್ಲಿ ಮಸುಕಾಗತೊಡಗಿದೆ. ಅದರ 'ಚಿಕ್ಕ ಸರ್ಕಾರ ಚೊಕ್ಕ ಆಡಳಿತ'ದ ಘೋಷಣೆ ಈಗ ೬೬ ಸಚಿವರ ಸಂಪುಟದ ಭಾರದಲ್ಲಿ ಕುಸಿಯತೊಡಗಿದೆ. ಜೊತೆಗೆ ಅದು ಕಾಂಗ್ರೆಸ್ ಸಂಪುಟದಷ್ಟೇ ಅನುಮಾನಾಸ್ಪದ ವ್ಯಕ್ತಿಗಳಿಗೆ ಆಶ್ರಯದಾಣವಾಗಿದೆ. ಇನ್ನು ಕಾಶ್ಮೀರಕ್ಕೆ ಸಂಬಂಧಿಸಿದ ವಿಧಿ ೩೭೦ರ ನಿರ್ಮೂಲನೆಯ ವೀರಾವೇಶದ ಮಾತುಗಳು ಜಮ್ಮು–ಕಾಶ್ಮೀರ ಚುನಾವಣೆಗಳ ಎದುರಿನಲ್ಲಿ ವಿರುದ್ಧ ದಿಕ್ಕು ಹಿಡಿದು ಕಾಂಗ್ರೆಸ್ಸಿನಂತೆಯೇ ಪ್ರಜಾಸತ್ತಾತ್ಮಕ ತೀರ್ಮಾನದ ಮಾತುಗಳು ಹೊರಟಿವೆ!

ಆದರೆ ಕಾಂಗ್ರೆಸ್ ಏನು ಮಾಡುತ್ತಿದೆ? ಇಂದು ರಾಷ್ಟ್ರಕ್ಕೆ ಒಂದು ಸಮರ್ಥ ವಿರೋಧ ಪಕ್ಷ ಬೇಕಿದೆ. ರಾಷ್ಟ್ರದ ಜನತೆ ಬಹುದೀರ್ಘಕಾಲ ತನ್ನಲ್ಲಿಟ್ಟಿದ್ದ ನಂಬಿಕೆಯ ಋಣ ತೀರಿಸಲಾದರೂ ಕಾಂಗ್ರೆಸ್ ಮೈಕೊಡವಿ ಎದ್ದು ತನ್ನ ಗುರುತನ್ನು ಪುನರನ್ವೇಷಿಸಿಕೊಂಡು ನವ ಚೈತನ್ಯದೊಂದಿಗೆ ಜನರ ಮುಂದೆ ಮತ್ತು ಮಧ್ಯೆ ಬರಬೇಕಿದೆ. ತನ್ನಿಂದ ಕಸಿಯಲ್ಪಡುತ್ತಿರುವ ಗಾಂಧಿ–ನೆಹರೂ–ಪಟೇಲ್‌ರ ಪರಂಪರೆಗೆ ಮತ್ತೆ ಜೀವ ಕೊಟ್ಟು ಹೊಸ ಇತಿಹಾಸ ನಿರ್ಮಿಸುವ ಸಾಹಸಕ್ಕೆ ಕೈಹಾಕಬೇಕಿದೆ.

ಆದರೆ ಇಂದು ಅದರ ಉಳಿದಿರುವ ಏಕೈಕ ನೆಲೆಯಾದ ಕರ್ನಾಟಕದಲ್ಲಿ ಕಾಂಗ್ರೆಸ್‌ನ ಚಾಲೂ ಚಹರೆಗಳು ಆ ಭರವಸೆಯನ್ನೇ ಹುಟ್ಟಿಸುತ್ತಿಲ್ಲ. ಅದು ಎಂದಿನಂತೆ ಅಧಿಕಾರದ ಕಚ್ಚಾಟಗಳಲ್ಲೇ ತೊಡಗಿಕೊಂಡಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಗೋ ದಕ್ಕಿರುವ ತಮ್ಮ ಬಹುದಿನದ ಆಸೆಯ ಮುಖ್ಯಮಂತ್ರಿ ಪದವಿಯನ್ನು ಉಳಿಸಿಕೊಳ್ಳುವ ರಾಜಕಾರಣದಲ್ಲೇ ತೊಡಗಿದ್ದಾರೆ. ಆಡಳಿತದಲ್ಲಿ ತನ್ನದೇ ಛಾಪು ಮೂಡಿಸಿ ಪಕ್ಷಕ್ಕೆ ಪುನಃಶ್ಚೇತನ ನೀಡುವ ಐತಿಹಾಸಿಕ ಹೊಣೆ ತನಗಿದೆ ಎಂಬ ಅರಿವೇ ಅವರಿಗಿದ್ದಂತೆ ಕಾಣುತ್ತಿಲ್ಲ. ಅವರು ಒಂದೂ ಧೀರ ನಡೆ ಇಲ್ಲದೆ, ಯಾರಲ್ಲೂ ಸ್ಫೂರ್ತಿ ಹುಟ್ಟಿಸದವರಾಗಿದ್ದಾರೆ. ಒಂದೂವರೆ ವರ್ಷ ಕೊಸರಾಡಿ ನಗಮ–ಮಂಡಳಿಗಳ ಪದಾಧಿಕಾರಗಳನ್ನು ಅವರು ಅರ್ಧ ಅವಧಿಗೆ ಹಂಚಿರುವ ಮತ್ತು ರಾಜ್ಯದ ಜನತೆಯ ಕಣ್ಣಿಗೆ ರಾಚುವಂತೆ ಕಾಣುತ್ತಿರುವ ಭ್ರಷ್ಟ ಮತ್ತು ಅದಕ್ಷ ಸಚಿವರನ್ನು ಕೈಬಿಟ್ಟು ಸಂಪುಟ ಪುನಾರಚನೆ ಮಾಡಿ ಸರ್ಕಾರದ ಬಿಂಬವನ್ನು ಸುಧಾರಿಸಲು ಹಿಂಜರಿಯುತ್ತಿರುವ ರೀತಿ–ನೀತಿಗಳನ್ನು ನೋಡಿದರೆ ಯಾವ ಆಸೆಯೂ ಹುಟ್ಟದಂತಾಗಿದೆ. ಆದರೆ, ಇದನ್ನೆಲ್ಲ ಯಾರಿಗೆ ಹೇಳುವುದು? ಅದೇ ಇಂದು ದೊಡ್ಡ ಪ್ರಶ್ನೆಯಾಗಿದೆ. **–ಸಂಪಾದಕ**

---

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ' ಚೆನ್ನಾಗಿ ಬರುತ್ತಿದೆ ಎಂದರೆ ಬರಿಯ ಕ್ಲೀಷೆಯ ಮಾತಾದೀತು. ಅದು ಯಾಕೆ ಚೆನ್ನಾಗಿ ಬರುತ್ತಿದೆ ಎಂದು ಕೇಳಿಕೊಂಡಾಗ, ನಾನು ಚಿಕ್ಕವಳಿದ್ದಾಗ ಹಸಿದು ಕಾತುರದಿಂದ ಕಾದು ಓದುತ್ತಿದ್ದ 'ಲಂಕೇಶ್ ಪತ್ರಿಕೆ' ಮೂಡಿಸಿದ ಭಾವವನ್ನು ಮೂಡಿಸಿದ್ದರಿಂದ ಎಂದು ಹೇಳಬಲ್ಲೆ. ಸುಮಾರು ಐದನೇ ತರಗತಿಯಲ್ಲಿ ಓದುತ್ತಿದ್ದ ಸಮಯದಲ್ಲಿ ಬರುತ್ತಿದ್ದ ಆ ಪತ್ರಿಕೆ ಒಂದು ರಾಜಕೀಯ ಪ್ರಜ್ಞೆಯನ್ನು ಬೆಳೆಸಿತು. ಅದು ಆಗ ಮಾಡಿದ ಪರಿಣಾಮವನ್ನು ಇಂದಿನ 'ಹೊಸ ಮನುಷ್ಯ' ಇನ್ನಷ್ಟು ಗಂಭೀರವಾಗಿ ಮಾಡುತ್ತಿದೆ. ಸತ್ಯದ ನಿಷ್ಠುರತೆಗೆ ಜಾಗವೇ ಇಲ್ಲದ ಜಾಗತೀಕರಣದ ದಿನಮಾನದಲ್ಲಿ ಈ ತರದ ಆತ್ಮಸಾಕ್ಷಿಯನ್ನು ಎಚ್ಚರಿಸುವಂತಹ ಪತ್ರಿಕೆಗಳನ್ನು ನಡೆಸುವುದು ಕಷ್ಟವೇ. ಅದರಲ್ಲೂ ಅಂತರ್ಜಾಲಿಗರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವ ದಿನಗಳಲ್ಲಿ ಗಂಭೀರವಾದ ಓದುಗವರ್ಗವನ್ನು ನಿರ್ವಹಿಸಬೇಕೆಂಬ ಆತಂಕದಲ್ಲಿ ಅಳುಕದೆ ನನ್ನ ದನಿಯಲ್ಲಿ ಹಾಡುವೆನೆಂದು ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತಿರುವ ಪತ್ರಿಕೆಗೆ ಅಭಿನಂದನೆಗಳು.

ಮರೆತಿದ್ದೆ; ವಿಶ್ವವಿದ್ಯಾಲಯಗಳ ಸಂಪರ್ಕ ಬಂದಾಗಲೂ ಆಗದ ಅನಿರ್ವಚನೀಯ ವಿಚಾರಗಳ ಪುಳಕ ನನ್ನಲ್ಲಿ ಈ ಪತ್ರಿಕೆಯಿಂದ ಆಗಿದೆ ಎಂದು ಹೇಳಿಕೊಳ್ಳುವುದಕ್ಕೆ ಯಾವ ಸಂಕೋಚವೂ ಇಲ್ಲ. ಈ ಹಿಂದೆ ವಿಶ್ವವಿದ್ಯಾಲಯವೊಂದು ಸಂಪಾದಿಸಿದ ಲೋಹಿಯಾ ಪುಸ್ತಕಕ್ಕಿಂತ ಮೌಲ್ಯಯುತವಾದ ಕೆಲಸವನ್ನು ಪತ್ರಿಕೆ ಮಾಡುತ್ತಿದೆ. 'ಸಮಕಾಲೀನ' ಅಂಕಣ ಇಷ್ಟವಾಗುತ್ತದೆ.

**–ಆರ್.ತಾರಿಣಿ ಶುಭದಾಯಿನಿ**, ಚಿತ್ರದುರ್ಗ

ಪತ್ರಿಕೆಯು ಪ್ರತಿ ತಿಂಗಳೂ ಹೆಚ್ಚು ಹೆಚ್ಚು ಮೌಲಿಕವಾದ ಲೇಖನಗಳಿಂದ ಮತ್ತು ಹಲವು ಒಳನೋಟಗಳಿಂದ ತುಂಬಿದ ತಮ್ಮ ಸಂಪಾದಕೀಯ ಮತ್ತು ಪ್ರಸ್ತಾವನೆಗಳಿಂದ ಸಮೃದ್ಧವಾಗಿ ಮತ್ತು ನಮ್ಮನ್ನು ಆಳವಾಗಿ ಚಿಂತನೆಗೆ ಹಚ್ಚುವ ಹಾಗೂ ಜಾಗೃತವಾಗುವಂತೆ ಹಿಡಿದು ಅಲ್ಲಾಡಿಸುವ ರೀತಿಯಲ್ಲಿ ಬರುತ್ತಿದೆ.

ನವೆಂಬರ್ ಸಂಚಿಕೆಯಲ್ಲಿ ಕನ್ನಡ ಕುರಿತ ತಮ್ಮ ಒಂದು ಪುಟದ ಪ್ರಸ್ತಾವಿಕ ನುಡಿಗಳು ಅತ್ಯಂತ ಆಳವಾದ ತಿಳುವಳಿಕೆ ಮತ್ತು ಚಿಂತನೆಯಿಂದ ಕೂಡಿದ್ದು, ಶಿಕ್ಷಣದಲ್ಲಿ ಮಾತೃಭಾಷೆಯ ಅಗತ್ಯತೆಯನ್ನು ಇನ್ನಿಲ್ಲದಂತೆ ಸ್ಪಷ್ಟಪಡಿಸಿದೆ ಹಾಗೂ ಕನ್ನಡ ಕುರಿತ ನಮ್ಮ ಒಲವು ಮತ್ತು ಬದ್ಧತೆಯನ್ನು ನೂರ್ಪಟ್ಟು ಹೆಚ್ಚಿಸಿದೆ. ಇದಕ್ಕೆ ಪೂರಕವಾಗಿ ಬಂದ ಲೇಖನಗಳಲ್ಲಿ ಎಚ್.ಎಸ್. ರಾಘವೇಂದ್ರ ರಾವ್ ಮತ್ತು ಎಸ್.ಮಂಜುನಾಥ್‌ರ ಲೇಖನಗಳು ಉತ್ತಮವೆನಿಸಿದವು. ತಾವು ಹೇಳಿದಂತೆ ದೊಡ್ಡ ಒಂದು ಹೋರಾಟಕ್ಕೆ ಕನ್ನಡದ ಪ್ರಜ್ಞಾವಂತ ನಾಗರೀಕರು ಮತ್ತು ನಾಯಕರು ಒಂದು ವೇದಿಕೆಯನ್ನು ಸೃಷ್ಟಿಸಬೇಕಿದೆ. ಪ್ರಾಮಾಣಿಕವಾದ, ಪ್ರಜ್ಞಾವಂತಿಕೆಯಿಂದ ಕೂಡಿದ ಚಳುವಳಿಯಲ್ಲಿ ಕೈಜೋಡಿಸಲು ಕಾತುರರರಾಗಿದ್ದೇವೆ.

ಇನ್ನು ಸಂಚಿಕೆಯ ಸಂಪಾದಕೀಯವು ಮೋದಿ ಸರ್ಕಾರದ ಬಗ್ಗೆ ಅತ್ಯಂತ ಸಂಯಮದ ಮತ್ತು ಅರ್ಥಗರ್ಭಿತ ವಿಮರ್ಶೆ ಮತ್ತು ಒಳನೋಟಗಳಿಂದ ಕೂಡಿದೆ

**–ಬಿ.ವಿ. ಸುರೇಂದ್ರ**, ಧಾರವಾಡ

ಕಳೆದ ಸಂಚಿಕೆಯಲ್ಲಿ ನೀನಾಸಂ ಶಿಬಿರ ಮತ್ತು ಅಲ್ಲಿನ ನಾಟಕಗಳ ಬಗ್ಗೆ ನೀವು ಬರೆದ ಟಿಪ್ಪಣಿಗಳನ್ನು ಓದಿದೆ. ಬಹಳ ಮುಖ್ಯವೆನ್ನಿಸುವ ಮತ್ತು ಇಂದಿನ ಸಂದರ್ಭದಲ್ಲಿ ನೀವು ಮಾತ್ರ ಬರೆಯಬಲ್ಲ ಮಾತುಗಳಿಂದ ಕೂಡಿದ ಬರಹವಿದು.

**–ಡಾ. ನಿತ್ಯಾನಂದ ಬಿ.ಶೆಟ್ಟಿ**, ತುಮಕೂರು

ನೀನಾಸಂ ಬೌದ್ಧಿಕ ಸಂಪ್ರದಾಯ ಮತ್ತು ಅದರ ಭಾಗವಾಗಿ ನಡೆಯುವ ನಾಟಕಗಳ ಬಗೆಗಿನ ನಿಮ್ಮ ತೀಕ್ಷ್ಣ ವಿಶ್ಲೇಷಣೆ ಖುಷಿ ನೀಡಿತು. ವಿಮರ್ಶಿಸುವ ಮೂಲಕವೇ ಅದನ್ನು ಕಾಪಾಡಬೇಕಿದೆ ಎಂಬ ನಿಮ್ಮ ಮಾತು, ನೀವೇ ಸೂಚಿಸಿದಂತೆ ನಮ್ಮ ವಿಶ್ವವಿದ್ಯಾಲಯಗಳು ಇಂದು ತಲುಪಿರುವ ದುಃಸ್ಥಿತಿಯ ಹಿನ್ನೆಲೆಯಲ್ಲಿ ಮಹತ್ವದ್ದು ಎನಿಸಿತು.

**–ಡಾ. ಟಿ.ಎಸ್. ಚನ್ನೇಶ್**, ಬೆಂಗಳೂರು

ನವೆಂಬರ್ ಸಂಚಿಕೆಯ ಹಲವು ಲೇಖನಗಳು ಉತ್ತಮವಾಗಿವೆ. ಜಾತ್ಯಾತೀತ ರಾಷ್ಟ್ರದಲ್ಲಿ ಜಾತಿ ಪದ್ಧತಿ ಅಳಿಯದಿರುವುದರ ಸಂಕೇತವಾಗಿ 'ಇನ್‌ಕ್ಯಾಸ್ಟ್, ಔಟ್‌ಕ್ಯಾಸ್ಟ್' ಲೇಖನ ಮಾರ್ಮಿಕವಾಗಿದೆ. ಕನ್ನಡದ ಬಗ್ಗೆ ಬರೆದಿರುವ ಲೇಖನಗಳು ಓದಿಸಿಕೊಳ್ಳುತ್ತವೆ. ಮನತಟ್ಟಿದ ಲೇಖನ 'ಮೌದೂದಿಯ ಧರ್ಮವ್ಯಾಖ್ಯಾನವೂ, ಗೋಲ್ವಾಲ್ಕರ್‌ಗೆ ಭಾರತರತ್ನವೂ.' ಈ ಲೇಖನ ಮಾರ್ಮಿಕವಾಗಿದ್ದು, ಓದುಗರನ್ನು ಚಿಂತನೆಗೆ ಹಚ್ಚುವಂತಿದೆ. ಯುವಜನತೆ ಈ ಬಗ್ಗೆ ಹೆಚ್ಚು ಚಿಂತಿಸಿ, ಸರಿಹೆಜ್ಜೆ ಇಡಬೇಕಾಗಿದೆ.

ಪ್ರಧಾನ ಮಂತ್ರಿ ಮೋದಿಯವರ ಬಗ್ಗೆ ಒಂದಿಷ್ಟು ಒಳ್ಳೆಯ ಮಾತು, ಹಾಗೇ ಒಂದಿಷ್ಟು ಎಚ್ಚರಿಕೆಯ ಮಾತು ಸಂಪಾದಕೀಯದಲ್ಲಿ ಕಾಣಿಸಿದೆ! ಒಳ್ಳೆಯದೇ!


**– ಡಾ. ಎಚ್.ಎಸ್.ರುದ್ರೇಶ್.**, ಶಿವಮೊಗ್ಗ.

ಪತ್ರಿಕೆಯ ಇತ್ತೀಚಿನ ಸಂಚಿಕೆಗಳಲ್ಲಿ ದಿ. ಕೆ.ಎಂ. ಶಂಕರಪ್ಪನವರನ್ನು ಕುರಿತ ಬರಹಗಳು ನನ್ನನ್ನು ಮುವ್ವತ್ತು ವರ್ಷಗಳ ಹಿಂದಕ್ಕೆ ಕೊಡೊಯ್ದಿತು. ಅವರ ಚಿತ್ರದ ಬಗ್ಗೆ ತೇಜಸ್ವಿ ಯಾವಾಗಲೂ ಬಹು ಮೆಚ್ಚುಗೆಯಿಂದ ಮಾತಾಡುತ್ತಿದ್ದುದು ನೆನಪಿಗೆ ಬಂತು. ಹಾಗೇ, ನಾವೊಮ್ಮೆ ಬೆಂಗಳೂರಿಗೆ ಹೋಗಿದ್ದಾಗ ಶಂಕರಪ್ಪನವರು ನನನ್ನು ತಮ್ಮ ಮನೆಗೆ ಕರೆದೊಯ್ದು ತಮ್ಮ ಪತ್ನಿಯಿಂದ ಮುದ್ದೆ–ಕೋಳಿ ಸಾರು ಮಾಡಿಸಿ, ಜೊತೆಗೆ ಜಿಲೇಬಿ ತಂದು ಊಟ ಹಾಕಿದ್ದೂ ನೆನಪಿಗೆ ಬಂದು ಮನಸ್ಸು ಆರ್ದ್ರವಾಯಿತು

–ರಾಜೇಶ್ವರಿ ತೇಜಸಗವಿ, ಮೂಡಿಗೆರೆ.

**(ಮತ್ತಷ್ಟು ಪತ್ರಗಳಿಗಾಗಿ ೫ ಮತ್ತು ೧೬ನೇ ಪುಟಗಳನ್ನೂ ಗಮನಿಸಿ–ಸಂ)**

## ನಮ್ಮ ಸಮಾಜವಾದಿಗಳು | ಕರ್ನಾಟಕದ ಆದಿ ಸಮಾಜವಾದಿ ಸದಾಶಿವ ಕಾರಂತ



**ಕ**ರ್ನಾಟಕದಲ್ಲಿ ಸಮಾಜವಾದದ ಬೇರುಗಳನ್ನು ಹುಡುಕುತ್ತಾ ಹೋದರೆ ಗೋಪಾಲಗೌಡ, ಲೋಹಿಯಾ ಇತ್ಯಾದಿ ಹೆಸರುಗಳು ಜನಮನದ ನಡುವೆ ಪ್ರಚಲಿತಕ್ಕೆ ಬರುವ ಮುನ್ನವೇ ಅವು ಈ ಮಣ್ಣಿನಲ್ಲಿ ನೆಲೆ ಕಾಣುವ ಪ್ರಯತ್ನಗಳು ನಡೆದಿರುವುದು ಗೊತ್ತಾಗುತ್ತದೆ. ಕಳೆದ ಶತಮಾನದ ಮುವ್ವತ್ತು ಮತ್ತು ನಲವತ್ತರ ದಶಕಗಳಲ್ಲೇ ಕಮಲಾದೇವಿ ಚಟ್ಟೋಪಧ್ಯಾಯ, ಶ್ರೀನಿವಾಸ ಮಲ್ಯ, ನೀಲಗಂಗಯ್ಯ ಪೂಜಾರ, ಕೋಣಿ ಸದಾಶಿವ ಕಾರಂತ, ಅಮ್ಮೆಂಬಳ ಬಾಳಪ್ಪ,, ಆನಂದ– ಹೀಗೆ ಹಲವರು ಮಂಗಳೂರು–ಧಾರವಾಡ–ಹುಬ್ಬಳ್ಳಿ ಸುತ್ತಮುತ್ತ ಸಮಾಜವಾದದ ಸಂದೇಶ ಸಾರುವ ಕೆಲಸ ಮಾಡಿದ್ದರು. ೧೯೩೪ರಲ್ಲಿ ಕಾಂಗ್ರೆಸ್‌ನೊಳಗೇ ರಚಿತವಾಗಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದರು. ಇವರಲ್ಲಿ ಸದಾಶಿವ ಕಾರಂತರು ಮುಂದೆ ಲೋಹಿಯಾರ ಆಪ್ತರಲ್ಲಿ ಒಬ್ಬರಾಗಿ ಅವರ ಸಮಾಜವಾದಿ ತತ್ವಗಳ ಪ್ರತಿಪಾದಕ ಮತ್ತು ವಿಶ್ಲೇಷಕರಾಗಿ ಮೂಡಿದ್ದು ಒಂದು ಸಾಹಸದ ಕಥೆಯೇ ಹೌದು.

ಸದಾಶಿವ ಕಾರಂತರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಕೋಣಿ ಎಂಬ ಹಳ್ಳಿಯ ಬಡ ಬ್ರಾಹ್ಮಣ ಕೃಷಿ ಕುಟುಂಬದಲ್ಲಿ. ಹೈಸ್ಕೂಲ್ ವಿದ್ಯಾಭ್ಯಾಸ ಕುಂದಾಪುರದಲ್ಲಿ. ಗಾಢವಾದ ಗಾಂಧಿಯ ಪ್ರಭಾವ; ಹೈಸ್ಕೂಲ್ ಹುಡುಗ ಕಾರಂತ ಗಾಂಧೀಜಿಗೆ 'ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರ' ಕುರಿತು ಪತ್ರ ಬರೆದದ್ದೂ ಆಯಿತು. ಆ ದಿನಗಳಲ್ಲಿಯೇ ಮಾರ್ಕ್ಸ್‌ವಾದ ಓದಿದ ಹುಡುಗ ಎನಿಸಿಕೊಂಡರು. ಕ್ವಿಟ್ ಇಂಡಿಯಾ ಚಳುವಳಿಯ ಕಾವು ಕಾರಂತರನ್ನೂ ಬಿಡಲಿಲ್ಲ. ಆರು ತಿಂಗಳು ಬಳ್ಳಾರಿ ಜೈಲು ವಾಸ. ಕಾಲೇಜಿನ ಓದು ತುಂಡಾಗಿ ಬಿಟ್ಟಿತು. ಆದರೆ ಸಮಾಜವಾದ ಕುರಿತ ಓದು ನಿಲ್ಲಲಿಲ್ಲ. ಬಿಂದು ಮಾಧವ ಬುರ್ಲಿಯವರ 'ಸಮಾಜವಾದ' ಕೃತಿ ಓದಿದಾಗ ಕಾಂಗ್ರೆಸ್‌ಗಿಂತ ಭಿನ್ನ ಗುಣ ಇಲ್ಲಿದೆ ಎನಿಸತೊಡಗಿತು. ಹಾಗೆಯೇ ಜೆ.ಪಿ.ಯವರ 'ಸಮಾಜವಾದ ಏಕೆ?' ಕೃತಿ ಓದಿದಾಗ ಮತ್ತಷ್ಟು ಸಮಾಜವಾದಿ ಚಿಂತನೆಗಳು ಆಕರ್ಷಿಸಿದವು. ೧೯೪೪ರಲ್ಲಿ ಭೂಗತರಾಗಿ ಜೆ.ಪಿ.ಯವರ ರಹಸ್ಯ ಚಟುವಟಿಕೆಗಳನ್ನು ಮುಂದುವರೆಸಲು ತೊಡಗಿದರು. ಓದು ನಿಂತಿದ್ದರ ಬಗ್ಗೆಯೂ ಅಸಮಾಧಾನವಿತ್ತು. ಜೈಲಿನಲ್ಲಿ ಪರಿಚಯವಾದ ಶೇಷಣ್ಣ ಬುರ್ಲಿ ಧಾರವಾಡಕ್ಕೆ ಹೋಗು ಎಂದು ಸಲಹೆ ನೀಡಿದ್ದರು. ಧಾರವಾಡದಲ್ಲಿ ಕಾಲೇಜು ಸೇರಿದ್ದೂ ಆಯಿತು. ಹುಬ್ಬಳ್ಳಿ ಧಾರವಾಡದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ (ಸಿ.ಎಸ್.ಪಿ) ಚಟುವಟಿಕೆಗಳು ಗರಿಗೆದರಿದ್ದವು.

ದಕ್ಷಿಣ ಕನ್ನಡದಲ್ಲಿ ಸಮಾಜವಾದಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಶ್ರೀನಿವಾಸ ಮಲ್ಯರು ಕಮಲಾದೇವಿಯವರನ್ನು(ಆಗಿನ್ನೂ ಅವರು ಚಟ್ಟೋಪಧ್ಯಾಯ ಆಗಿರಲಿಲ್ಲ) ಅಲ್ಲಿಗೆ ಕಳಿಸಿದ್ದರು. ಗದಗದಲ್ಲಿ ಅವರು ಎಡಪಂಥೀಯ ಸಮ್ಮೇಳನ ಆಯೋಜಿಸಿದ್ದರು. ಈ ಸಮ್ಮೇಳನವೇ ಕರ್ನಾಟಕದಲ್ಲಿ ಸಮಾಜವಾದಿ ಚಟುವಟಿಕೆಯ ಆರಂಭಕ್ಕೆ ಚಿಮ್ಮು ಹಲಗೆಯಾಯಿತು. ನೀಲ ಗಂಗಯ್ಯ ಪೂಜಾರರು ಮೊದಲೇ ಅಲ್ಲಿದ್ದರು. ಅಮ್ಮೆಂಬಳ ಆನಂದರು ಅಲ್ಲಿಗೆ ಬಂದು ಸೇರಿದ್ದರು. ಪೂಜಾರರು "ನನಗೆ ಸಮಾಜವಾದ, ಮಾರ್ಕ್ಸ್‌ವಾದ ಕಲಿಸಿದವರೇ ಕಾರಂತರು" ಎಂದು ನೆನಪಿಸಿಕೊಳ್ಳುವಷ್ಟು ಕಾರಂತರು ಅಲ್ಲಿ ಅಧ್ಯಯನ ಶಿಸ್ತನ್ನು ರೂಢಿಸಿಕೊಂಡಿದ್ದರು. ಆನಂದರೂ ಕೂಡ "ನಾನು ಸೋಷಲಿಸ್ಟ್ ಆಗಲು ಓದಲು ಹಚ್ಚಿದವರೇ ಕಾರಂತರು" ಎಂದು ನೆನಪಿಸಿಕೊಳ್ಳುತ್ತಾರೆ.

ರಷ್ಯನ್ ಕ್ರಾಂತಿ, ಕಮ್ಯೂನಿಸಂ ಬಗ್ಗೆಯೂ ಕಾರಂತರು ಆಳವಾಗಿ ಓದಿಕೊಂಡಿದ್ದರು. ಕಮಲಾದೇವಿಯವರಿಗೆ ಈ ಸುಳಿವು ಸಿಕ್ಕಿತ್ತು. ಮುಂದೆ ದಿನಕರ ದೇಸಾಯಿ ದಕ್ಷಿಣ ಕನ್ನಡ ವಿದ್ಯಾರ್ಥಿ ಸಮ್ಮೇಳನ ಸಂಘಟಿಸಿ ಕಾರಂತರಿಂದ ಇಡೀ ದಿನ ಸಮಾಜವಾದಿ ಚಿಂತನೆಗೆ ಅನುವು ಮಾಡಿಕೊಟ್ಟಿದ್ದರು.. ಸಿ.ಎಸ್.ಪಿ. ಕಛೇರಿಯಲ್ಲಿ ಕಾರಂತರು ಕಾರ್ಯದರ್ಶಿ. ಅಮ್ಮೆಂಬಳ ಆನಂದರವರು ಸಹಾಯಕರಾಗಿ ಬಂದರು. ಇವರಿಬ್ಬರೂ ಆಗ ಸೋಷಲಿಸ್ಟ್ ಕಾರಂತ, ಸೋಷಲಿಸ್ಟ್ ಆನಂದ ಎಂದೇ ಪ್ರಸಿದ್ಧರು. ಇಬ್ಬರಿಗೂ ಕಮಲಾದೇವಿ ಒಂದಿಷ್ಟು ಸಂಬಳ ಸಿಗುವ ವ್ಯವಸ್ಥೆ ಮಾಡಿದ್ದರು. ಜಯಪ್ರಕಾಶ್ ನಾರಾಯಣ್ ಮಂಗಳೂರಿಗೆ ಬಂದಾಗ ವಿಭಾಗೀಯ ಸಮ್ಮೇಳನದಲ್ಲಿ ಕಾರಂತರು ಕೆಲಸ ಮಾಡಿದ್ದರು. ಅವರ ಭಾಷಣಗಳನ್ನು ಬರೆದುಕೊಂಡು ಮುದ್ರಿಸಿ ಸದಸ್ಯರಿಗೆ ಹಂಚುತ್ತಿದ್ದರು. ಗರಗದಲ್ಲಿ ಕೃಷಿಕಾರ್ಮಿಕರ ಸಂಘಟನೆ ಹಾಗೂ ಸಮ್ಮೇಳನ ನಡೆಸುವಲ್ಲಿ ಕಾರಂತರ ಕೆಲಸ ದೊಡ್ಡದು. ಕಮಲಾದೇವಿಯವರನ್ನು ಮಂಗಳೂರಿನಿಂದ ಬರಮಾಡಿಕೊಂಡು ಸಮ್ಮೇಳನವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಜೆಪಿ.ಯವರ ಕರ್ನಾಟಕದ ಪ್ರವಾಸ ಸಮಯದಲ್ಲಿ ಶ್ರೀನಿವಾಸ ಮಲ್ಯರು ಜನರಿಂದ ದೇಣಿಗೆ ಸಂಗ್ರಹಿಸಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಹುಬ್ಬಳ್ಳಿಯಲ್ಲಿ ಅವರಿಗೆ ನಿಧಿ ಅರ್ಪಿಸಿದರು. ಜೆ.ಪಿ.ಯವರು ಅದನ್ನು ಸಮಾಜವಾದಿ ಚಟುವಟಿಕೆಗಳಿಗಾಗಿ ಕಮಲಾದೇವಿಯವರಿಗೆ ನೀಡಿದರು. ಅವರು ಅದನ್ನು ಕಾರಂತರ ಸುಪರ್ದಿಗೆ ಕೊಟ್ಟು ಸಮಾಜವಾದಿ ಪತ್ರಿಕೆ 'ಜಾಗೃತಿ'ಯನ್ನು ಬೆಳೆಸಲು ಹೇಳಿದರು. ಆರೋಗ್ಯ ಕೆಟ್ಟು ಕಾರಂತರು ಕೆಲದಿನ ಊರಿಗೆ ಹೋಗಿ ವಾಪಸ್ ಬರುವ ಹೊತ್ತಿಗೆ ಪತ್ರಿಕೆಯ ಸಂಪಾದಕರಾಗಿ ಅದರ ಜವಾಬ್ದಾರಿ ಹೊತ್ತಿದ್ದ ಖಾದ್ರಿ ಶಾಮಣ್ಣ, ಭಾ.ಸು. ಕೃಷ್ಣಮೂರ್ತಿ ಮುಂತಾದವರು ಎಲ್ಲ ಹಣ ಖರ್ಚಾಗಿ ಹೋಯಿತೆಂದರು! ಇದರಿಂದ ಆಘಾತಕ್ಕೊಳಗಾದ ಕಾರಂತರು ಪತ್ರಿಕೆಯ ಆಡಳಿತದಿಂದ ಮುಕ್ತರಾಗ ಬಯಸಿದಾಗ ಆನಂದರು ತಡೆದರಾದರೂ ಅವರು ಹುಬ್ಬಳಿ, ಧಾರವಾಡಗಳಲ್ಲಿ ದೀರ್ಘಕಾಲ ನಿಂತು ಓದು ಮುಂದುವರೆಸಲು ಆಗಲಿಲ್ಲ. ಕಛೇರಿಯಲ್ಲಿ ಬೇರೆಯವರ ಪ್ರವೇಶ, ಹಣಕಾಸಿನ ದುರುಪಯೋಗ, ಕೆಲ ಸಮಾಜವಾದಿಗಳ ಐಷಾರಾಮಿ ಹವ್ಯಾಸಗಳು ಮುಂತಾದ ಕಾರಣಗಳಿಂದ ಹುಬ್ಬಳ್ಳಿ ಕಛೇರಿ ಮಂಕಾಗ ತೊಡಗಿ ಕೊನೆಗೆ  ಮುಚ್ಚಲ್ಪಟ್ಟಿತು. ಹೊಸಪೇಟೆಯಲ್ಲಿ ನಡೆದ ಸಮಾಜವಾದೀ ಸಮಾವೇಶದ ನಂತರ ಕರ್ನಾಟಕಕ್ಕೆ ವಿದಾಯ ಹೇಳಿದ ಕಾರಂತರು ೧೯೪೮ರಲ್ಲಿ ಮುಂಬೈಗೆ ಹೊರಟು ಹೋದರು.

ಮುಂಬೈನಲ್ಲಿ ಸದಾಶಿವ ಕಾರಂತರು ಕಾಲೇಜು ಸೇರಿ ತಮ್ಮ ಪಾಡಿಗೆ ತಾವು ಶಿಸ್ತಿನ ಜೀವನ ನಡೆಸುತ್ತಾ ಅರ್ಥಶಾಸ್ತ್ರದಲ್ಲಿ ಎಂ.ಎ. ಮುಗಿಸಿದ್ದಲ್ಲದೆ ಖ್ಯಾತ ಸಮಾಜವಾದೀ ಚಿಂತಕ ದಾಂತಾವಾಲರ ಶಿಷ್ಯರಾಗಿ ಡಾಕ್ಟರೇಟ್ ಪದವಿಗಳಿಸಿದರು. ಅಲ್ಲಿಯೇ ಗುಜರಾತಿ ಮೂಲದ ಸಮಾಜವಾದಿ ಒಲವಿನ ನಿರ್ಮಲಾರನ್ನು ಪ್ರೇಮಿಸಿ ೧೯೫೮ರಲ್ಲಿ ಮದುವೆಯಾದರು. ಪತ್ನಿಗೆ ಬ್ಯಾಂಕ್ ಉದ್ಯೋಗವಿತ್ತು. ಈ ಮಧ್ಯೆ, ಕಾರಂತರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿದ್ದ ಸಮಾಜವಾದಿ ಗುಣಕ್ಕೆ ಅವಕಾಶ ಒದಗಿಬಂದಿದ್ದು ೧೯೬೪ರಲ್ಲಿ. ಆಗಿನ ಸಮಾಜವಾದಿ ಸಮಾವೇಶಗಳು ಪಕ್ಕಾ ವಿಶ್ವವಿದ್ಯಾನಿಲಯಗಳ ಅಧ್ಯಯನ ಕೇಂದ್ರಗಳಂತೆ ಕೆಲಸ ಮಾಡುತ್ತಿದ್ದವು. ಕಾನ್ಪುರ, ಫೈಜ್‌ಪುರ, ಮೀರತ್, ಇಂತಹ ಕಡೆ ಜರುಗಿದ ಸಮ್ಮೇಳನಗಳಲ್ಲಿ ಕಾರಂತರು ಭಾಗವಹಿಸುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ಚರ್ಚೆಗಳು, ಅನುಮೋದಿತವಾಗುತ್ತಿದ್ದ ನಿರ್ಣಯಗಳು ಮುಂದೆ ಪಕ್ಷದ ಪ್ರಣಾಳಿಕೆಗಳಾಗಿ ರೂಪುಗೊಳ್ಳುತ್ತಿದ್ದವು. ೧೯೬೪ರಲ್ಲಿ ಕಾನ್ಪುರದಲ್ಲಿ ಇಂತಹ ಸಮ್ಮೇಳನ ನಡೆದಾಗ ಕಾರಂತರು ಲೋಹಿಯಾರ ಜನಪರವಾದ ಪ್ರಖರ ಸಮಾಜವಾದಿ ಚಿಂತನೆಗಳಿಗೆ ಮಾರು ಹೋಗಿ ಅವರ ತೀವ್ರ ಅಭಿಮಾನಿಗಳಲ್ಲೊಬ್ಬರಾಗಿ ಮಾರ್ಪಾಟಾದರು. ಅವರೊಂದಿಗೆ ನಿರಂತರ ಸಂಪರ್ಕವಿರಿಸಿಕೊಂಡು ಸಮಾಜವಾದಿ ತತ್ವಗಳ ಬಗ್ಗೆ ಚಿಂತನೆ ಮತ್ತು ಸಮಾಲೋಚನೆಗಳಲ್ಲಿ ನಿರತರಾದರು.

(೫ನೇ ಪುಟಕ್ಕೆ

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೨೯

-ಇಂದಿರಾ ಬಿ. ಕೃಷ್ಣಪ್ಪ

## ದೇವಯ್ಯ ಹರವೆಯವರ ಸಾವು

ಆಕಾಶವಾಣಿಯ ಸುಪ್ರಭಾತದೊಂದಿಗೆ ನನ್ನ ಬೆಳಗು ಆರಂಭವಾಗುತ್ತಿದ್ದಂತೆಯೇ, ಮನೆಯವರೆಲ್ಲರ ದಿನಚರಿ ಪ್ರಾರಂಭವಾಗುತ್ತಿತ್ತು. ದೈನಂದಿನ ಪತ್ರಿಕೆಗಳನ್ನೋದಲು ಬೆಳ್ಳಂಬೆಳಗ್ಗೆಯೇ ಸಮಯವಿಲ್ಲದ್ದರಿಂದ ಆಕಾಶವಾಣಿಯೇ ನನ್ನ ಮಾಧ್ಯಮ ಸಂಗಾತಿಯಾಗಿತ್ತು. ಹಾಗೊಂದು ದಿನ ಬೆಳಗಿನ ಇಂಪಾದ ಹಾಡುಗಳು, ನಂತರ ರಶ್ಮಿ ನುಡಿಗಳು ತದನಂತರ ವಾರ್ತೆಗಳು ಮುಖ್ಯಾಂಶಗಳಲ್ಲಿ, "ಸಾಹಿತಿ ಹಾಗೂ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರೀಡರ್ ಆಗಿರುವ ದೇವಯ್ಯ ಹರವೆಯವರು ನಿಧನರಾಗಿದ್ದಾರೆ" ಎಂದು ಬಿತ್ತರಿಸುತ್ತಿದ್ದಂತೆ, ನನ್ನ ಕೈಲಿದ್ದ ತಟ್ಟೆ ಬಾರಿ ಶಬ್ದದೊಂದಿಗೆ ಬಿದ್ದು ಹೋಯಿತು. ಏನಾಯಿತೋ ಎಂದು ಓಡಿಬಂದ ವೇದಾವತಿ, ತಟಸ್ಥಳಾಗಿದ್ದ ನನ್ನನ್ನು ಕಂಡು ಸೊಲ್ಲೆತ್ತುವುದರೊಳಗೆ, ವಾರ್ತೆಗಳ ವಿವರ ಬಿತ್ತರವಾಗುತ್ತಿತ್ತು. "ದೇವಯ್ಯ ಹರವೆಯವರ ನಿಧನದ ಸುದ್ದಿಯನ್ನು ಹೇಳುತ್ತಾ, ಚಾಮರಾಜನಗರದಲ್ಲಿ ಹರವೆ ಗ್ರಾಮದಲ್ಲಿ ಇಂದೇ ಅಂತ್ಯ ಸಂಸ್ಕಾರವೆಂಬ ಸುದ್ದಿಯನ್ನು ತಿಳಿಸಿದರು.

ಕೃಷ್ಣಪ್ಪ ದಸಂಸಂದ ನಡೆಸುತ್ತಿದ್ದ ದೇವರಸನ ಹಳ್ಳಿ ಭೂಹೋರಾಟ, ತದನಂತರ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಸಲುವಾಗಿ ಮೈಸೂರಿನಲ್ಲೇ ಇದ್ದರು. ಪೋನ್ ಅಥವಾ ಮೋಬೈಲ್ ಸಂಪರ್ಕ ಸಾಧನಗಳಿಲ್ಲದ ದಿನಗಳವು. ಭದ್ರಾವತಿಯ ಸರ್. ಎಂ.ವಿ. ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಗುರುರಾಜ್ ಬೀಡೀಕರ್, ಮೈಸೂರು ಮಾನಸ ಗಂಗೋತ್ರಿಯಲ್ಲಿ ಉಪನ್ಯಾಸಕರಾಗಿ ಆಯ್ಕೆಯಾಗಿದ್ದರಿಂದ ಮೈಸೂರು ವಾಸಿಗಳಾಗಿದ್ದರು. ಕಾಲೇಜಿನಲ್ಲಿನ ಕಾರ್ಯನಿಮಿತ್ತ ಭದ್ರಾವತಿಗೆ ಬಂದಿದ್ದ ಗುರುರಾಜ್ ಮತ್ತು ವೇದಾವತಿಯವರು ನಮ್ಮ ಮನೆಯಲ್ಲಿಯೇ ತಂಗಿದ್ದರು. ಆ ಕ್ಷಣ ನಾವು ಮೂವರು, ಮಕ್ಕಳು ಶಾಲಿನಿ - ಸೀಮಾರನ್ನು ಕರೆದುಕೊಂಡು ಮೈಸೂರಿಗೆ ಹೊರಟೆವು. ಮಾನಸ ಗಂಗೋತ್ರಿಯ ಹರವೆಯೆಂಬ ಪ್ರೀತಿಯ ತೊರೆ, ಅವರ ವಸತಿ ಗೃಹಕ್ಕೆ ತಲುಪುವುದರೊಳಗೆ ಪಾರ್ಥಿವ ಶರೀರವನ್ನು ಅವರ ಹುಟ್ಟಿದೂರಿಗೆ ಅಂತ್ಯ ಸಂಸ್ಕಾರಕ್ಕೆ ತೆಗೆದುಕೊಂಡು ಹೋಗಿದ್ದಾರೆಂಬ ವಿಷಯ ತಿಳಿಯಿತು. ಅಲ್ಲಿಂದ ಚಾಮರಾಜನಗರದ ಬಸ್ಸು ಹತ್ತಿ ಹರವೆ ಗ್ರಾಮದಲ್ಲಿನ ಅವರ ಮನೆ ಬಳಿ ನಾವು ಹೋದಾಗ, ಜನಜಂಗುಳಿ ನೆರೆದಿತ್ತು.

ಜನಗಳ ಮಧ್ಯೆ ದಾರಿಮಾಡಿಕೊಳ್ಳುತ್ತಾ, ಒಳಹೋದರೆ, ಅಲ್ಲಿ ದೇವಯ್ಯ ಹರವೆಯವರನ್ನು ಇರಿಸಿರಲಿಲ್ಲ ಆ ಜಾಗದಲ್ಲಿ ಮಣ್ಣಿನ ಹಣತೆ ಬೆಳಗುತ್ತಿತ್ತು. ಅವರಿವರು ಮಾತನಾಡುತ್ತ "ಪಕ್ಕದ ಹೊಲದಲ್ಲಿ ಮಣ್ಣು ಮಾಡಿರುವುದಾಗಿಯೂ, ಪ್ರೊ ಕೃಷ್ಣಪ್ಪ ಮತ್ತು ದಸಂಸದ ಮೈಸೂರು ಮಿತ್ರರು, ಕಾರ್ಯಕರ್ತರು ಎಲ್ಲರೂ ಸಂಸ್ಕಾರ ಕಾರ್ಯ ನಡೆಸಿಕೊಟ್ಟರೆಂದೂ ತಿಳಿಯಿತು. ಹರವೆಯವರನ್ನು ಕಡೆ ಬಾರಿ ನೋಡಲಾಗದ್ದಕ್ಕೆ, ದುಃಖ ಇನ್ನಷ್ಟು ಹೆಚ್ಚಾಯಿತು. ಪಕ್ಕದಲ್ಲಿ ದುಃಖತಪ್ತಳಾಗಿ ಕುಳಿತ ಹರವೆಯ ಮಡದಿ ಪುಷ್ಪಾ, ಮಗಳು ಪ್ರಕೃತಿ ಮಗ ಧ್ರುವನನ್ನು ತಬ್ಬಿಕೊಂಡು ಸುಮ್ಮನೆ ಮಾತಿಲ್ಲದೆ ಅಳುತ್ತಾ ಕುಳಿತೆವು. ದೇವಯ್ಯನವರ ತಂದೆ ತಾಯಿಯವರು ಮೂಲೆಯಲ್ಲಿ ಕುಳಿತು ರೋದಿಸುತ್ತಿದ್ದುದು ಕರುಳು ಕಿವಿಚುವಂತಿತ್ತು. ಹಿರಿಯರೊಬ್ಬರು ನಮ್ಮನ್ನು ಎಬ್ಬಿಸಿ ಜಗುಲಿಗೆ ಕರೆತಂದರು. ಅಲ್ಲಿಂದ ನಾವು ಹರವೆ ಶಾಶ್ವತ ವಿಶ್ರಾಂತಿಯನ್ನರಸಿ ಮಲಗಿದ್ದ ಅವರ ಹೊಲಕ್ಕೆ ತೆರಳಿದೆವು. ಆ ಸಮಾಧಿ ಸ್ಥಳದಲ್ಲಿ ಕುಳಿತು, ಹರವೆಯವರೊಡನಾಟಗಳನ್ನು ಜ್ಞಾಪಿಸಿಕೊಂಡೆವು. ಪುಷ್ಪಾ, "ಇಂದ್ರಾ, ಇವರು ನನ್ನನ್ನು ಹೀಗೆ ಬಿಟ್ಟು ಹೋಗಿಬಿಟ್ಟರಲ್ಲ, ನಾನ್ಹೇಗೆ ಇನ್ನು ಇರಲಿ" ಎಂದು ರೋದಿಸಲಾರಂಭಿಸಿದ್ದಳು, ಉತ್ತರ ನನ್ನಲ್ಲೂ ಇರಲಿಲ್ಲ ಆಕೆಯ ಕೈ ಹಿಡಿದು "ನಿನ್ನ ದುಃಖದಲ್ಲಿ ನಾವಿದ್ದೇವೆ" ಎಂದು ಸಮಾಧಾನ ಮಾಡಿದೆ. ನಂತರ ಹಚ್ಚಿಟ್ಟ ಹಣತೆಗೆ ನಮಸ್ಕರಿಸಿ, ಅಲ್ಲಿಂದ ತೆರಳಿ, ಮೈಸೂರಿಗೆ ಬಂದೆವು.

ಅಲ್ಲಿಯೂ ಕೃಷ್ಣಪ್ಪನವರ ಭೇಟಿಯಾಗಲಿಲ್ಲ. ಅಂದು ರಾತ್ರಿ, ಗುರುರಾಜ್ ಮನೆಯ ಬಾಲ್ಕನಿಯಲ್ಲಿ ಕುಳಿತು, ನೆರೆಯ ಹರವೆಯ ಮನೆಯನ್ನು ನೋಡುತ್ತಾ ಕುಳಿತಾಗ, "ಕೂಸೇ, ಬಾ ಉಂಬೋಣ; ಮಗಾ, ಇಲ್ಲಿ ಬಾರ್ಲಾ, ಬನ್ನಿ ಎಲ್ಲಾ, ಪುಷ್ಪಾ ಚಹಾ ತಗೊಂಬಾ" ಎಂಬ ಹರವೆಯ ಮಾತುಗಳು ಧ್ವನಿಸಲಾರಂಭಿಸಿತು. ಮರುದಿನ ಎಲ್ಲರೂ ಭದ್ರಾವತಿಗೆ ಹಿಂತಿರುಗಿದೆವು. ಎರಡು ದಿನಗಳ ನಂತರ ವಾಪಸಾದ ಕೃಷ್ಣಪ್ಪ, ತೀವ್ರ ಹತಾಶರಾದಂತೆ ಕಾಣುತ್ತಿದ್ದರು. ಅಂದಿನ ದಸಂಸ



ದೇವಯ್ಯ ಹರವೆ ದಂಪತಿಗಳು ತಮ್ಮ ಮದುವೆ ಸಂದರ್ಭದಲ್ಲಿ

ಮೈಸೂರು ವಿಭಾಗವನ್ನು ಯಶಸ್ವಿಯಾಗಿ ಕಟ್ಟಲು ದೇವಯ್ಯನವರ ತಾಯಿಕರುಳಿನ ವಾತ್ಸಲ್ಯವೇ ಅಡಿಪಾಯವಾಗಿತ್ತು. ಕಾರ್ಯಕರ್ತರ ಹೊಟ್ಟೆಪಾಡು, ಓದು, ಕೆಲಸ, ದುಃಖ ದುಮ್ಮಾನಗಳನ್ನು ಆಲಿಸಿ, ಸಕಾಲದಲ್ಲಿ ಸಕಲ ನೆರವನ್ನೊದಗಿಸುವ ದೇವಯ್ಯ, ದಸಂಸದ ಹೃದಯವೇ ಆಗಿದ್ದರು. ಅಂಥಹ ಕರುಳ ಬಳ್ಳಿಯೊಂದು ಕಡಿದುಕೊಂಡ ಕೃಷ್ಣಪ್ಪ ಚಿಂತೆಗೀಡಾಗಿದ್ದರು.

ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. (ಇತಿಹಾಸ) ದೂರಶಿಕ್ಷಣದ ಮೂಲಕ ಪದವಿ ವ್ಯಾಸಂಗಕ್ಕೆ ತೊಡಗಿದ ಸಂದರ್ಭದಲ್ಲಿ ಬಹಳಷ್ಟು ದಿನಗಳನ್ನು ಹರವೆಯವರ ಮನೆಯಲ್ಲಿ ಕಳೆದಿದ್ದೇನೆ. ಕೆ.ಎ.ಎಸ್. ಪರೀಕ್ಷೆ ಬರೆಯಲು ಮೈಸೂರು ಕೇಂದ್ರ ಆಯ್ಕೆ ಮಾಡಿಕೊಂಡಾಗಲೂ ಅವರ ಮನೆಯಲ್ಲೇ ತಿಂಗಳಾನುಗಟ್ಟಲೆ ಇದ್ದೆ. ಮತ್ತೆ ಹಲವಾರು ಬಾರಿ ಕಾರ್ಯನಿಮಿತ್ತ ಮೈಸೂರಿಗೆ ಹೋದಾಗಲೆಲ್ಲ ಅವರ ಮನೆಯಲ್ಲೇ ಇರುತ್ತಿದ್ದೆ. ಹೀಗಾಗಿ ನಮ್ಮೆರಡು ಕುಟುಂಬಗಳ ನಡುವಿನ ಪ್ರೀತಿ ವಿಶ್ವಾಸ ಹಾಲುಜೇನಿನಂತಿತ್ತು. ಅವರ ಮಕ್ಕಳ ಹಾಗೂ ನಮ್ಮ ಮಕ್ಕಳ ಆಟ-ಊಟ-ನೋಟಗಳನ್ನು ಸವಿಯುತ್ತಾ ಬಹಳ ಸಮಯವನ್ನು ಕಳೆದಿದ್ದೇವೆ. ಒಟ್ಟೊಟ್ಟಿಗೆ ಮೈಸೂರು ಸುತ್ತಿದ್ದೇವೆ. ಕೃಷ್ಣಪ್ಪನವರಿಗೆ, ದೇವಯ್ಯನವರು ಬರೆಯುತ್ತಿದ್ದ ಪ್ರತಿಯೊಂದು ಪತ್ರದಲ್ಲೂ ನನ್ನನ್ನೂ ಮತ್ತು ಮಕ್ಕಳನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಹಾಗೊಂದು ಪತ್ರದಲ್ಲಿನ ಮಾತುಗಳು "ನಿಮ್ಮ ಮಕ್ಕಳು ಶಾಲು - ಸೀಮಾರಿಂದ ಮಗ ಧ್ರುವ ಎದ್ದು ನಿಂತು ಹೆಜ್ಜೆ ಇಡುವುದನ್ನು ಬೇಗ ಕಲಿತ; ಇಲ್ಲವಾದರೆ ಇನ್ನೆಷ್ಟು ದಿನ ತೆಗೆದುಕೊಳ್ಳುತ್ತಿದ್ದನೇನೋ" ಎಂದು ಬರೆದಿದ್ದರು.

ಕೃಷ್ಣಪ್ಪ ಮೈಸೂರಿನಿಂದ ಭದ್ರಾವತಿಗೆ ವಾಪಾಸಾದ ಆ ಸಂಜೆ, ದಸಂಸದ ಕಾಯಕರ್ತರು ಮನೆಯಲ್ಲಿ ಸೇರಿದ್ದರು. ದೇವಯ್ಯನವರು ದಸಂಸ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟವನ್ನು, ಮೈಸೂರು, ಚಾಮರಾಜನಗರ, ಪಿರಿಯಾಪಟ್ಟಣ, ನಂಜನಗೂಡು, ಹೆಗ್ಗಡದೇವನಕೋಟೆ, ಕೊಡಗು, ಮುಂತಾದ ಕಡೆಗಳಲ್ಲಿ ಕಟ್ಟುವಲ್ಲಿ ಗುರುತರ ಜವಾಬ್ದಾರಿಯನ್ನು ಹೊತ್ತಿರುವುದನ್ನೂ, ದಸಂಸದ ತರಬೇತಿ ಶಿಬಿರಗಳಲ್ಲಿ ಮತ್ತು ವಿಚಾರ ಸಂಕಿರಣಗಳಲ್ಲಿ, ಅಂಬೇಡ್ಕರ್ ಚಿಂತನೆಗಳು, ದಲಿತ ಹೋರಾಟಗಳು, ದಲಿತ ವಿದ್ಯಾರ್ಥಿಗಳ ಸಮಸ್ಯೆಗಳು, ಲೋಹಿಯಾ ಹಾಗೂ ಮಾರ್ಕ್ಸ್‌ವಾದಗಳು, ದಲಿತ ಸಾಹಿತ್ಯ ವಿಮರ್ಶೆಗಳನ್ನು ಕುರಿತು ತರ್ಕಬದ್ಧವಾಗಿ ವಿಶ್ಲೇಷಣಾತ್ಮಕವಾಗಿ ತಿಳಿಸಿ ಹೇಳುತ್ತಿದ್ದುದನ್ನು ಸ್ಮರಿಸಲಾಯಿತು. ಹಲವಾರು ಸಂದರ್ಭಗಳಲ್ಲಿ, ಕೃಷ್ಣಪ್ಪನವರ ಕಣ್ಣು ತೇವಗೊಂಡಿದ್ದವು ಮತ್ತು ಧ್ವನಿ ಗದ್ಗದಿತವಾಗಿತ್ತು. ನಾನು ಆರಿಸಿ ಇಟ್ಟಿದ್ದ, ಹರವೆಯವರು ಬರೆದ "ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು" ಪುಸ್ತಕ ಹಿಡಿದುಕೊಂಡು, ಕೃಷ್ಣಪ್ಪ, ಹರವೆಯವರು ಬರೆದ ಸಾಲುಗಳನ್ನು ಓದಿದರು.

'ಎಪ್ಪತ್ತರ ದಶಕ ಸಾಹಿತ್ಯದ ನಡಿಗೆಯ ದೃಷ್ಟಿಯಿಂದ ತುಂಬಾ ಮಹತ್ತರವಾದುದು. ಸಮಾಜದ ಕೊಟ್ಟಕೊನೆಯ ಮನುಷ್ಯ ದನಿ ಎತ್ತರಿಸಿ

ಹಾಡಿದುದು, ಕನ್ನಡ ಭಾಷೆಯನ್ನು ತನ್ನ ಯಾತನಾಮಯ ಜೀವನವನ್ನು ವರ್ಣಿಸಲು ಬಳಸಿದುದು, ಈ ದಶಕದ ಐತಿಹಾಸಿಕ ಕೊಡುಗೆಯಾಗಿದೆ. ಆದ್ದರಿಂದಲೇ ಅಂದಿನವರೆಗೆ ನಡೆದು ಬಂದ ಸಾಹಿತ್ಯಕ್ಕೆ ಸಂಬಂಧಪಟ್ಟ ಪಾರಿಭಾಷಿಕವಾದ ಸಿದ್ಧಾಂತಗಳು, ವಿಮರ್ಶೆಯ ಮಾನದಂಡಗಳು, ಈ ರೀತಿಯ ಸಾಹಿತ್ಯವನ್ನು ಅಳೆಯಲು ಹೋಗಿ ಶುಷ್ಕಪಾಂಡಿತ್ಯವನ್ನು ತೋರಿದುದು ಇಂದು ಇತಿಹಾಸದ ದಾಖಲೆಯಾಗಿದೆ. ಪಾರಂಪರಿಕವಾದ ಸಾಹಿತ್ಯದ ಪ್ರಯೋಜನ, ಭಾಷೆಯ ಬಳಕೆಯ ವಿದ್ವತ್ತು, ವಿಷಯವನ್ನು ಆಯ್ಕೆ ಮಾಡುವಲ್ಲಿನ ಪಕ್ಷಪಾತ, ಕೃತಿಯನ್ನು ನಡೆಸಿಕೊಂಡು ಹೋಗುವಲ್ಲಿ ಇದ್ದ ಪೂರ್ವಗ್ರಹ, ಇವೆಲ್ಲಕ್ಕೂ ಒಂದು ತಿರುವು ತಂದುಕೊಟ್ಟ ಎಪ್ಪತ್ತರ ದಶಕದ ಸಾಹಿತ್ಯ ಬದಲಾಗಬೇಕಾದ ಅನಿವಾರ್ಯತೆಯನ್ನು ಹೇಳುವುದು, ಈ ರೀತಿಯ ಅನಿವಾರ್ಯತೆಯಿಂದ ಮೂಡಿದ ಇಲ್ಲಿನ ಲೇಖನಗಳಲ್ಲಿ ಬದಲಾಗುತ್ತಿರುವ ವಿಮರ್ಶೆಯಲ್ಲಿನ ಮನೋಧರ್ಮ ಎದ್ದು ಕಾಣುವುದೆಂದು ನಾನು ಭಾವಿಸಿದ್ದೇನೆ' ಎಂಬ ಸಾಲುಗಳನ್ನು ಓದಿ, ಆ ಪುಸ್ತಕದಲ್ಲಿನ ವಿಮರ್ಶಾ ಲೇಖನಗಳಾದ 'ದಲಿತ ಸಾಹಿತ್ಯ ಕೆಲವು ತಾತ್ವಿಕ ಚಿಂತನೆಗಳು', 'ಶೂದ್ರಶಾಹಿಯಿಂದ ಪುರೋಹಿತಶಾಹಿಯೆಡೆಗೆ', 'ಮಾರ್ಕ್ಸ್‌ವಾದ ಮತ್ತು ಸಾಹಿತ್ಯ', 'ಭಗವದುಜ್ಜುಕೀಯ ಮತ್ತು ಸೂಳೆ ಸನ್ಯಾಸಿ' ಇತ್ಯಾದಿ ಲೇಖನಗಳ ಕೆಲವು ಸಾಲುಗಳನ್ನು ಕೃಷ್ಣಪ್ಪ ವಿವರಿಸುತ್ತಾ 'ಭವಿಷ್ಯದ ಕನ್ನಡದ ಸಮರ್ಥ ವಿಮರ್ಶಕನೊಬ್ಬನನ್ನು ಕಳೆದುಕೊಂಡೆವು" ಎಂದು ಮರುಗಿದರು.

ಪುಷ್ಪಾರವರು ಕೆಲಸ ಮಾಡುತ್ತಿದ್ದ ಸಮಾಜಕಲ್ಯಾಣ ಇಲಾಖೆಯ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರು. ನಂತರ ಮಾನಸ ಗಂಗೋತ್ರಿಯ ಗ್ರಂಥಾಲಯದಲ್ಲಿ ಸಹಾಯಕರಾಗಿ ಸೇರಿಕೊಳ್ಳಲು ನೆರವಾದ ಹಾ.ಮಾ. ನಾಯಕ್‌ರವರನ್ನು ಸ್ಮರಿಸಬಹುದು ಮತ್ತು ದೇವಯ್ಯನವರ ತಂದೆ ತಾಯಿಯವರು ಈ ಸಂದರ್ಭದಲ್ಲಿ ಕೃಷ್ಣಪ್ಪನವರಿಗೆ ಪತ್ರ ಬರೆದು ಕುಟುಂಬಕ್ಕೆ ಆಧಾರವಾದ ಮಗ ತೀರಿಕೊಂಡ ನಂತರ ಬದುಕಿಗೆ ಆಸರೆ ಬೇಕೆಂದು ಕೋರಿದ್ದರು. ಆಗ ಪುಷ್ಪಾರೊಂದಿಗೆ ಮಾತನಾಡಿ, ದೇವಯ್ಯನವರ ತಂದೆತಾಯಿಯವರಿಗೆ ಕುಟುಂಬ ನಿರ್ವಹಣೆಗಾಗಿ ಹಣ ಕಳುಹಿಸುವ ವ್ಯವಸ್ಥೆ ಮಾಡಿದರು ನಂತರ ಇದರಲ್ಲಿ ವಿಳಂಬವಾಗುವ ಲಕ್ಷಣ ಕಂಡಾಗಲೂ ಅವರು ಪುನಃ ಕೃಷ್ಣಪ್ಪನವರಿಗೆ ಬರೆದುಕೊಂಡಿದ್ದರು. ಆಗಲೂ ಕೃಷ್ಣಪ್ಪನವರು, ಮೈಸೂರಿನ ಸ್ನೇಹಿತರ ನೆರವಿನಿಂದ ಅವರ ದೇಕುರೇಕುಗಳನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿದರು.

ನಂತರದ ದಿನಗಳಲ್ಲಿ ದಸಂಸದ ಕಾರ್ಯಕ್ರಮಗಳಲ್ಲಿ "ದೇವಯ್ಯ ಹರವೆ ವೇದಿಕೆ" ಎಂಬ ಹೆಸರಿನಡಿಯಲ್ಲಿ ಹಲವು ಸಭೆಗಳು ಗೋಷ್ಠಿಗಳನ್ನು ನಡೆಸುತ್ತಿದ್ದರು. ಮೈಸೂರು ದಸರಾ ವಸ್ತು ಪ್ರದರ್ಶನದ ಒಂದು ಮಾರ್ಗಕ್ಕೆ ದೇವಯ್ಯ ಹರವೆಯವರ ಹೆಸರಿಡಲಾಗಿದೆ. ದೇವಯ್ಯ ಹರವೆ ಸ್ಮಾರಕ ಚರ್ಚಾ ಸ್ಪರ್ಧೆಯನ್ನು ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನಲ್ಲಿ, ದಲಿತ ವಿದ್ಯಾರ್ಥಿ ಒಕ್ಕೂಟದವರು ೧೯೮೫ರಲ್ಲಿ ನಡೆಸಿದ್ದು, ಅದರ ಅಧ್ಯಕ್ಷತೆಯನ್ನು ದೇವನೂರು ಮಹಾದೇವರವರು ವಹಿಸಿದ್ದು, ಉದ್ಘಾಟನೆಯನ್ನು ಡಿ.ಎಸ್. ನಾಗಭೂಷಣರವರು ಮಾಡಿದ್ದು, ಮುಖ್ಯ ಅತಿಥಿಗಳಾಗಿ, ರಾಘವೇಂದ್ರ ಪಾಟೀಲ್ ಮತ್ತು ಸಿ.ವಿ.ಪಾಟೀಲ್‌ರವರು ಭಾಗವಹಿಸಿದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ದೇವಯ್ಯ ಹರವೆಯವರ ಬದುಕು – ಬರಹ ಕುರಿತು ಎರಡು ದಿನಗಳ ವಿಚಾರ ಗೋಷ್ಠಿಯನ್ನು ಸೆಪ್ಟಂಬರ್ ೨೦೧೪ರಲ್ಲಿ ಆಯೋಜಿಸಿದ್ದರು.

ಇವೆಲ್ಲವುಗಳ ನೆನೆಕೆಗಳೊಂದಿಗೆ, ಅನಾರೋಗ್ಯದಿಂದ ಬಳಲುತ್ತಿರುವ ದೇವಯ್ಯನವರ ಪತ್ನಿ ಪುಷ್ಪಾ ಬೇಗ ಗುಣಮುಖವಾಗಲಿ ಎಂದು ಹಾರೈಸೋಣ.

(ಮುಂದುವರೆಯುವುದು)

---

೩ನೇ ಪುಟದಿಂದ)

ಲೋಹಿಯಾ ೧೯೬೪ರಲ್ಲಿ ಸಂಸತ್ ಸದಸ್ಯರಾಗಿ ಆಯ್ಕೆಯಾದಾಗ ಅವರು ತಮಗೆ ಸಹಾಯಕರಾಗಿ ಕೆಲಸ ಮಾಡಲು ಕಾರಂತರನ್ನು ದೆಹಲಿಗೆ ಕರೆಸಿಕೊಂಡರು. ಹಾಗಾಗಿ ೧೯೬೪ರಿಂದ ಲೋಹಿಯಾ ೧೯೬೭ರಲ್ಲಿ ನಿಧನರಾಗುವವರೆಗೂ ಕಾರಂತರು ಅವರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಲೋಹಿಯಾರಿಗೆ ಬಂದ ಪತ್ರಗಳಿಗೆ ಉತ್ತರಿಸುವುದು, ದೂರು, ಸಲಹೆ, ಕಾರ್ಯಕ್ರಮ ಬದಲಾವಣೆ ಇತ್ಯಾದಿ ಕಡತಗಳನ್ನು ನೋಡಿಕೊಳ್ಳುವುದು ಇವರ ಕೆಲಸವಾಗಿತ್ತು. ಜೊತೆಗೆ ಲೋಹಿಯಾರೊಂದಿಗೆ ತಾತ್ವಿಕ ಚರ್ಚೆಗಳನ್ನೂ ನಡೆಸುತ್ತಿದ್ದರು. ಲೋಹಿಯಾರೊಂದಿಗೆ ಚರ್ಚಿಸುತ್ತಾ ಕಮ್ಯುನಿಸಂ ಮತ್ತು ಪ್ರಜಾಪ್ರಭುತ್ವಗಳ ಗುಣದೋಷಗಳನ್ನು ಚರ್ಚಿಸುವಾಗ ಇವರ ವೈಚಾರಿಕ ಪ್ರಬುದ್ಧತೆ ಗಮನಿಸಿದ ಲೋಹಿಯಾ ಲೇಖನಗಳನ್ನು ಬರೆಯಲು ಸೂಚಿಸಿದರು. ಅಲ್ಲಿಂದ ಅವರು ಪತ್ರಿಕೆಗಳಿಗೆ ರಾಜಕೀಯ ಬೆಳವಣಿಗೆಗಳ ವ್ಯಾಖ್ಯಾನ–ವಿಮರ್ಶೆಗಳನ್ನು ಬರೆಯಲಾರಂಭಿಸಿದರು. ಸಮಾಜವಾದಿ ಚಿಂತನೆಯ ಮೂರು ಕೃತಿಗಳನ್ನು ರಚಿಸಿರುವ ಇವರು ಮುಂಬೈನ ಸಿಂಧು ಪ್ರಕಾಶನಕ್ಕಾಗಿ ಲೋಹಿಯಾ ನೆನಪಿನ ಮಾಲೆಯ ಪುಸ್ತಕಗಳನ್ನೂ ಸಂಪಾದಿಸಿ ನೀಡಿದ್ದಾರೆ..

ಲೋಹಿಯಾರ ನಿಧನದ ನಂತರ ಮುಂಬೈಗೆ ವಾಪಸಾದ ಕಾರಂತರು ಜೀವನ ನಿರ್ವಹಣೆಗಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಅರ್ಥಶಾಸ್ತ್ರಜ್ಞರಾಗಿ ಕೆಲಸಕ್ಕೆ ಸೇರಿಕೊಂಡರು. ನಂತರ ಅನಾರೋಗ್ಯದಿಂದಾಗಿ ಸ್ವಯಂ ನಿವೃತ್ತಿ ಪಡೆದರು. ಮೂವತ್ತೆರಡು ವಯಸ್ಸಿನ ಏಕೈಕ ತರುಣ ಮಗನ ಅಕಾಲಿಕ ಸಾವಿನಿಂದ ಜರ್ಝರಿತರಾದ ದಂಪತಿಗಳು, ವಿಚಲಿತರಾಗದೆ ಮುಂಬೈನ ಅಪಾರ್ಟ್‌ಮೆಂಟ್ ಒಂದರಲ್ಲಿ ಮೌನವಾಗಿ ಶಾಂತಿಯಿಂದ ದಿನ ದೂಡುತ್ತಿದ್ದಾರೆ. ಕರ್ನಾಟಕ ಅವರಿಗೆ ಕೇವಲ ನೆನಪು. ಕರ್ನಾಟಕದ ಸಮಾಜವಾದಿಗಳಿಗೆ ಅವರೂ ಒಂದು ನೆನಪು!

ದೇವರ ಬಗ್ಗೆ ಕೇಳಿದರೆ–ಹೇಳುವುದು ಕಷ್ಟ ಎನ್ನುವ ಅವರು ಇಂದ್ರಿಯ ಗ್ರಹಿಕೆಯ ಆಚೆ, ನಮ್ಮ ಲೌಕಿಕ ಅಸ್ತಿತ್ವದ ಆಚೆ ನಿಗೂಢವಾದದ್ದೊಂದಿದೆ. ಅದು ಲೋಕ ನಿಯಂತ್ರಿಸುವ ಶಕ್ತಿ. ನಾವು ನಮ್ಮಿಂದಲೇ ಆದವರಲ್ಲ– ಹೀಗೆ ಲೋಹಿಯಾರ ಅಪ್ಪಟ ಭಾರತೀಯ ಸಮಾಜವಾದೀ ಚಿಂತನೆಗಳನ್ನು ಮೈಗೂಡಿಸಿಕೊಂಡು, ಬಾಳಿ, ಯೋಚಿಸಿ, ಹಾಗೇ ಮದುವೆ ಆಗಿ, ಕನ್ನಡ ನಾಡಿನಾಚೆ, ಆರು ದಶಕಗಳನ್ನು ಮೀರಿ ಬದುಕುತ್ತಿರುವ ಈ ಕನ್ನಡಿಗನನ್ನು ಕರ್ನಾಟಕದ ಸಮಾಜವಾದಿಗಳು ನೆನಪಿಸಿಕೊಂಡು ಸೂಕ್ತ ರೀತಿಯಲ್ಲಿ ಕೃತಜ್ಞತೆಗಳನ್ನು ಸಲ್ಲಿಸಬೇಕಾಗಿದೆ.

(ಸಂಗ್ರಹ ಲೇಖನ: **ಪ್ರೊ. ಎಂ. ಚಂದ್ರಶೇಖರಯ್ಯ**)

---

## 'ಅಲ್ಪಸಂಖ್ಯಾತರಲ್ಲಿ ಬದಲಾವಣೆಯ ಗಾಳಿ?':ಒಂದು ಪ್ರತಿಕ್ರಿಯೆ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ'ದ ಅಕ್ಟೋಬರ್ ಸಂಚಿಕೆಯಲ್ಲಿನ 'ಅಲ್ಪಸಂಖ್ಯಾತರಲ್ಲಿ ಬದಲಾವಣೆಯ ಗಾಳಿ?' ಎಂಬ ಲೇಖನ ಓದಿ ಈ ಪತ್ರ.

ಇಸ್ಲಾಮೀ ಶರಿಯತ್ ಕಾನೂನನ್ನು ಮತ್ತು ಫತ್ವಾಗಳನ್ನು ಮುಸ್ಲಿಮರ ಮೇಲೆ ಹೇರುವಂತಿಲ್ಲ. ಅಂತಹ ಹೇರಿಕೆ ಸಂವಿಧಾನವು ಪ್ರಜೆಗಳಿಗೆ ನೀಡಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂಬ ಸರ್ವೋನ್ನತ ನ್ಯಾಯಾಲಯದ ತೀರ್ಪು ಐತಿಹಾಸಿಕ ಮತ್ತು ಸ್ವಾಗತಾರ್ಹ. ಪಾಕಿಸ್ತಾನವೇ 'ಇಸ್ಲಾಂ ಕುಟುಂಬ ಅಧಿನಿಯಮ ೧೯೬೧'ನ್ನು ಜಾರಿಗೆ ತಂದು ನಾಲ್ಕು ವಿವಾಹವಾಗುವುದನ್ನು ನಿಷೇಧಿಸಿದೆ. ಎರಡನೇ ವಿವಾಹವಾಗುವುದಕ್ಕೆ ನಿರ್ಬಂಧನೆಯನ್ನೂ ಹೇರಿ, ತಲ್ಲಾಖ್ ನಿಯಮವನು ಪರಿಷ್ಕರಿಸಿದೆ. ಈ ಕಾನೂನಿನ ಕಲಂ ೬ರ ಪ್ರಕಾರ ಎರಡನೇ ಮದುವೆ ಮಾಡಿಕೊಳ್ಳಬೇಕಿದ್ದರೆ, ಮಧ್ಯಸ್ಥಿಕೆ ಪರಿಷತ್ತಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಆಗ ಪರಿಷತ್ತು ಎರಡೂ ಪಕ್ಷದವರನ್ನು ಸಮಾಲೋಚನೆಗೆ ಕರೆದು, ಎರಡನೇ ಮದುವೆಗೆ ಬಲವಾದ ಕಾರಣಗಳಿವೆಯೇ ಎಂದು ಪರಿಶೀಲಿಸಿದ ನಂತರ ಹೆಂಡತಿಯ ಅಹವಾಲನ್ನೂ ಕೇಳಿ ತನ್ನ ತೀರ್ಮಾನವನ್ನು ನೀಡುತ್ತದೆ. ಅಲ್ಲಿ ಪ್ರತಿ ಮದುವೆಯನ್ನೂ ಕಡ್ಡಾಯವಾಗಿ ನೋಂದಣಿ ಮಾಡಿಸಬೇಕಾದ ಕಾನೂನು ಜಾರಿಯಲ್ಲಿದೆ. ಇದೇ ರೀತಿಯ ಕಾನೂನು ಮುಸ್ಲಿಂ ದೇಶಗಳಾದ ಇಂಡೋನೇಷ್ಯಾ ಮತ್ತು ಮಲೇಷಿಯಾಗಳಲ್ಲೂ ಇದೆಯೆಂದು ಕೇಳಿದ್ದೇನೆ.

ನಮ್ಮ ದೇಶದಲ್ಲಿ ರಾಜಕೀಯ ಕಾರಣಗಳಿಗಾಗಿ ಮುಸ್ಲಿಂ ಜನಾಂಗವನ್ನು ಓಲೈಸುತ್ತಾ ಬಂದ ಕಾರಣದಿಂದಾಗಿ ಮಹಿಳೆಯರು ತೀರಾ ನಿಕೃಷ್ಟ ಸ್ಥಿತಿಗೆ ದೂಡಲ್ಪಟ್ಟಿರುವುದನ್ನು ಇಡೀ ಜನಾಂಗ ಅಸಹಾಯಕವಾಗಿ ನೋಡುವಂತಾಗಿದೆ. ಹೊಸ ಕಾನೂನುಗಳನ್ನಲ್ಲದಿದ್ದರೂ ಪಾಕಿಸ್ತಾನದಲ್ಲಿರುವಂತಹ ಕಾನೂನು ಸುಧಾರಣೆಗಳನ್ನಾದರೂ ಇಲ್ಲಿ ಜಾರಿಗೆ ತಂದಿದ್ದರೆ, ಮುಸ್ಲಿಂ ಹೆಣ್ಣೂ ಮಕ್ಕಳೂ ಇತರ ಧರ್ಮಗಳ ಎಲ್ಲ ಹೆಣ್ಣು ಮಕ್ಕಳಂತೆ ಎಲ್ಲ ಲಭ್ಯ ಮಹಿಳಾ ಹಕ್ಕುಗಳನ್ನು ಪಡೆದು ಶೋಷಣಾಮುಕ್ತ ಬಾಳನ್ನು ನಡೆಸಲು ಸಾಧ್ಯವಾಗುತ್ತಿತ್ತು.

ಇನ್ನಾದರೂ ಈ ಸಮಾಜದ ಸುಧಾರಣಾವಾದಿಗಳು ಮುಂದೆ ಬಂದು ಶರಿಯತ್ ಕಾನೂನನ್ನು ಪರಿಸಮಾಪ್ತಿಗೊಳಿಸಿ ಸಾಮಾನ್ಯ ನಾಗರಿಕ ಸಂಹಿತೆಗೆ ಒತ್ತಾಯಿಸುವ ಮೂಲಕ ಮುಸ್ಲಿಂ ಮಹಿಳೆಯರು ಕೂಡ ಭಾರತದ ಮುಖ್ಯವಾಹಿನಿಯ ಭಾಗವಾಗಿ ಅಭಿವೃದ್ಧಿ ಹೊಂದುವಂತಾಗಲಿ ಎಂದು ಹಾರೈಸೋಣ.

–**ಎಂ.ಸುದರ್ಶನರಾಜ್**, ಧಾರವಾಡ

## ಶಿಕ್ಷಣ ಹಕ್ಕು ಕಾಯಿದೆ ಎಂಬ ಕಪಟ ನಾಟಕ

# ಬಡಮಕ್ಕಳಿಗೆ ಎಟುಕದ ಉತ್ತಮ ಶಿಕ್ಷಣ

–ಪವಿತ್ರಾ ಎಸ್. ರಂಗನ್

**ಈ** ಹಿಂದಿನ ಯು.ಪಿ.ಎ. ಸರ್ಕಾರ ದೇಶದ ಜನತೆಗೆ ತನ್ನ ಹೆಮ್ಮೆಯ ಕೊಡುಗೆಗಳೆಂದು ಹೇಳಿಕೊಳ್ಳುವ ಮೂರು ಜನಹಿತ ಕಾಯಿದೆಗಳ ಪೈಕಿ ಒಂದಾದ ಶಿಕ್ಷಣ ಹಕ್ಕು ಕಾಯ್ದೆ(ಇನ್ನೆರಡೆಂದರೆ ಆಹಾರ ಹಕ್ಕು ಕಾಯ್ದೆ ಮತ್ತು ಮಾಹಿತಿ ಹಕ್ಕು ಕಾಯ್ದೆ) ಜಾರಿಗೆ ಬಂದು ಐದು ವರ್ಷಗಳಾಗುತ್ತಾ ಬಂದರೂ, ಅದರ ಅನುಷ್ಠಾನದ ಬಗ್ಗೆ ದೂರು–ಅಸಮಾಧಾನಗಳು ಕೇಳಿಬರುತ್ತಿವೆಯಲ್ಲದೆ, ಅವು ನಮ್ಮ ಸಮಾಜದಲ್ಲಿರುವ ಪ್ರತಿಷ್ಠಿತ ಶಕ್ತಿಗಳು ಎಷ್ಟು ಪಟ್ಟಭದ್ರವಾಗಿವೆ ಎಂಬುದನ್ನೂ ಸಾರಿಹೇಳುತ್ತಿವೆ.

ಮೊದಲಾಗಿ ಈ ಕಾಯ್ದೆಯೇ ಶಿಕ್ಷಣವನ್ನು ಜನತೆಯ ಹಕ್ಕನ್ನಾಗಿ ಮಾಡಬೇಕಾದ ಪ್ರಜಾಸತ್ತಾತ್ಮಕ ಜವಾಬ್ದಾರಿಯಿಂದ ನಮ್ಮ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ನುಣುಚಿಕೊಳ್ಳುತ್ತಿರುವುದರ ದ್ಯೋತಕವೂ ಆಗಿದೆ. ಏಕೆಂದರೆ, ಶಿಕ್ಷಣದ ಜವಾಬ್ದಾರಿಯ ಬಹುಭಾಗವನ್ನು ಖಾಸಗಿ ವಲಯಕ್ಕೆ ನೀಡಿರುವ ಸರ್ಕಾರ ಈಗ ಅದು ಉಂಟುಮಾಡುತ್ತಿರುವ ಅಸಮಾನತೆ ಮತ್ತು ಅಸಮತೋಲನದ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಬಡವರ ಪರವಾಗಿ ಆ ವಲಯದ ಕೃಪೆಯನ್ನೂ ಈ ಕಾಯಿದೆಯ ಮೂಲಕ ಬೇಡುತ್ತಿದೆ. ನ್ಯಾಯಾಂಗ ಅದನ್ನು ಹಕ್ಕಾಗಿ ಎತ್ತಿ ಹಿಡಿದಿದೆ! ಶಿಕ್ಷಣ ರಾಜ್ಯ ಸರ್ಕಾರಗಳ ಜವಾಬ್ದಾರಿಯಾದುದರಿಂದ ಸಮಸ್ಯೆ ಇನ್ನಷ್ಟು ಜಟಿಲವಾಗಿದೆ.

ನಿಜವಾದ ಜನಪರ ಸರ್ಕಾರ ಜನಪರ ಕಾಯಿದೆಗಳನ್ನು ರೂಪಿಸುವುದರ ಜೊತೆಯಲ್ಲೇ ಅದು ಸುಗಮವಾಗಿ ಅನುಷ್ಠಾನಗೊಳ್ಳುವಂತಹ ಸಾಮಾಜಿಕ ವಾತಾವರಣವನ್ನೂ ನಿರ್ಮಿಸುವ ಜವಾಬ್ದಾರಿ ವಹಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಅಗತ್ಯವಾದದ್ದು ಜನಪ್ರಿಯ ರಾಜಕಾರಣವಲ್ಲ; ಜನತಾ ರಾಜಕಾರಣ. ಅಂತಹ ಜನತಾ ರಾಜಕಾರಣ ಮಾಡುವ ಛಾತಿ ತೋರಿಸಬಲ್ಲ ಸರ್ಕಾರಗಳು ಮಾತ್ರ ಇಂತಹ ಸಾಮಾನ್ಯ ಶಾಲಾ ಶಿಕ್ಷಣ ಕಾಯ್ದೆಯನ್ನು ರೂಪಿಸಬಲ್ಲವು ಎಂದು ಹೇಳುತ್ತಾ ಈ ಅರ್ಧ ಮನಸ್ಸಿನ ಅರೆಬರೆ ಶಿಕ್ಷಣ ಹಕ್ಕಿನ ಕಾಯಿದೆ ಜಾರಿಯಾಗುತ್ತಿರುವ ಜಿಗುಪ್ಸೆಕರ ರೀತಿ ನೀತಿಗಳನ್ನು ವಿವರಿಸುವ ಲೇಖನವೊಂದನ್ನು ಇಲ್ಲಿ ನೀಡುತ್ತಿದ್ದೇವೆ–ಸಂ.



**ನ**ಮ್ಮ ಎಲ್ಲಾ ಸರ್ಕಾರಗಳು ಎದುರಿಸುವ ಕಷ್ಟವೊಂದಿದೆ. ಅದುವೆ ತಾವು ಬಹು ಸಂಖ್ಯಾತ ಬಡವರ ಪರ ಎಂದು ತೋರ್ಪಡಿಸುತ್ತಾ ಪ್ರತಿಷ್ಠಿತ ಶ್ರೀಮಂತ ವರ್ಗದ ಹಿತವನ್ನು ಕಾಯುವುದು. ಶಿಕ್ಷಣ ಕ್ಷೇತ್ರ ಇದಕ್ಕೆ ಹೊರತಲ್ಲ. ವಿದ್ಯೆಯ ವ್ಯಾಪಾರ ಒಂದು ಅತ್ಯಂತ ಲಾಭದಾಯಕ ಉದ್ದಿಮೆಯಾಗಿದ್ದು, ಬಹುತೇಕ ಎಲ್ಲಾ ರಾಜಕಾರಣಿಗಳೂ ತಮ್ಮದೇ ಆದ ವಿದ್ಯಾ ಸಂಸ್ಥೆಗಳನ್ನು ಹೊಂದಿರುತ್ತಾರೆ ಎಂಬುದು ಎಲ್ಲರೂ ಬಲ್ಲ ಗುಟ್ಟು ಜನಪ್ರತಿನಿಧಿಗಳಾಗಿ ಜನಹಿತಕಾಯುವ ಜವಾಬ್ದಾರಿ ಹೊತ್ತವರು ಉದ್ಯಮದಾರರಾಗಿ ತಮ್ಮ ಉದ್ಯಮಗಳನ್ನು ಕಾಪಾಡಿಕೊಳ್ಳಬೇಕಾದ ಒತ್ತಡದಲ್ಲೂ ಇರುತ್ತಾರೆ. ಈ ರೀತಿ ದ್ವಿಪಾತ್ರಗಳಲ್ಲಿ ಕಾರ್ಯ ನಿರ್ವಹಿಸುವ ಜನಪ್ರತಿನಿಧಿಗಳು ಸ್ವಹಿತಪ್ರತಿನಿಧಿಗಳು ಮಾತ್ರ. ತಾವು ಜನಪರವೆಂದು ತೋರ್ಪಡಿಸುವ ಕಸರತ್ತಿನ ಪರಿಣಾಮವಾಗಿ ಎಷ್ಟೋ ಕಾನೂನುಗಳು ನಿರ್ಮಾಣವಾಗುತ್ತವೆ. ೨೦೦೯ನೇಯ ಇಸವಿಯ ಯು.ಪಿ.ಎ ಸರ್ಕಾರದ ಆಳ್ವಿಕೆಯಲ್ಲಿ ಜಾರಿಗೆ ಬಂದ RTE (Right to Education) ಎಂಬ ಶಾಸನ ಇದಕ್ಕೊಂದು ನಿದರ್ಶನ.

ಈ ಶಾಸನದ ಅನ್ವಯ ಖಾಸಗಿ ಶಾಲೆಗಳು ತಮ್ಮಲ್ಲಿ ಲಭ್ಯವಿರುವ ಸೀಟುಗಳ ಪೈಕಿ ಶೇ.೨೫%ರಷ್ಟು ಸೀಟುಗಳನ್ನು ಆರ್ಥಿಕವಾಗಿ ಹಿಂದುಳಿದ ವರ್ಗದ (EWS) ಮಕ್ಕಳಿಗೆ ನೀಡಬೇಕು. ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಈ ಕೋಟಾದ ಅಡಿ ಪ್ರವೇಶ ಪಡೆದ ಮಕ್ಕಳ ಬೋಧನಾ ಶುಲ್ಕವನ್ನು ಭರಿಸಬೇಕು ಎಂಬುದು ಈ ಶಾಸನದ ಸಂಕ್ಷಿಪ್ತ ರೂಪ. ಮೇಲ್ನೋಟಕ್ಕೆ ಕಾಣುವಷ್ಟು ಸರಳವಾಗಿ ಯಾವುದೂ ಇರುವುದಿಲ್ಲ. ಪ್ರತಿಷ್ಠಿತ ಖಾಸಗಿ ಶಾಲೆಗಳು ಈ ಶಾಸನದಿಂದಾಗಿ ಮನಸೋ ಇಚ್ಛೆ ದೋಚುವ ತಮ್ಮ ಹಕ್ಕಿನ ಉಲ್ಲಂಘನೆ ಎಂದು ಭಾವಿಸಿ ಇದರಿಂದ ತಪ್ಪಿಸಿಕೊಳ್ಳುವ ಸರ್ವ ಪ್ರಯತ್ನವನ್ನು ಮಾಡುತ್ತವೆ.

ಈ ಶಾಸನವನ್ನು ಅಸ್ತಿತ್ವಕ್ಕೆ ತಂದ (ಈ ಹಿಂದಿನ)ಕೇಂದ್ರ ಸರ್ಕಾರವು ಇದನ್ನು ಅನುಷ್ಠಾನಗೊಳಿಸಲು ಅಗತ್ಯವಾದ ವಿಧಿವಿಧಾನಗಳನ್ನು ರೂಪಿಸುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ. ಇದರ ಲಾಭ ಪಡೆದ ಖಾಸಗಿ ಶಾಲೆಗಳು ರಾಜ್ಯ ಸರ್ಕಾರಗಳ ನಿಷ್ಕ್ರಿಯತೆಯನ್ನು ಬಳಸಿ ತಮ್ಮ ಹೊಣೆಯಿಇಂದ ಜಾರಿಕೊಳ್ಳುತ್ತಿವೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳ ನಿಷ್ಕ್ರಿಯತೆ ಮುಂದುವರೆಯುವಂತೆಯೂ ಖಾಸಗಿ ವಲಯ ನೋಡಿಕೊಳ್ಳುತ್ತದೆ. RTE ಶಾಸನ ಅಸ್ತಿತ್ವಕ್ಕೆ ಬಂದು ನಾಲ್ಕು ವರ್ಷಗಳ ನಂತರ ಈ ಶಾಸನದ ಪರಿಣಾಮ ಏನಾಗಿದೆ ಎಂಬುದನ್ನು ಪರಿಶೀಲಿಸುವುದೇ ಈ ಲೇಖನದ ಉದ್ದೇಶ.

ಬೆಂಗಳೂರಿನ ಶಾಲೆಯೊಂದು ದಿನಕ್ಕೆ ೨೦೦ರೂ ಸಂಪಾದಿಸುವ ಹಾಲು ಮಾರಾಟದ ಬಡವ್ಯಕ್ತಿಯೊಬ್ಬನ ಮಗಳಿಗೆ ಲಾಟರಿಯ ಮೂಲಕ ಪ್ರವೇಶ ನೀಡುತ್ತದೆ. ಆದರೆ ತಮ್ಮದು ಅಂತರಾಷ್ಟ್ರೀಯ ಶಾಲೆಯಾಗಿರುವುದರಿಂದ ಪೌಂಡ್‌ಗಳ ರೂಪದಲ್ಲಿ ತಮ್ಮ ಶಾಲೆಯ ಶುಲ್ಕವನ್ನು ಭರಿಸಬೇಕಾಗುತ್ತದೆ. ಇದು ಬೋಧನಾ ಶುಲ್ಕವನ್ನು ಹೊರತುಪಡಿಸಿದ ಇತರೆ ಶುಲ್ಕ – ಆದ್ದರಿಂದ ಆ ವ್ಯಕ್ತಿ ಪ್ರತಿ ತಿಂಗಳು ೪೮ ಪೌಂಡ್‌ಗಳಷ್ಟು ಹಣ ಕಟ್ಟಬೇಕಾಗುತ್ತದೆಂದು ತಿಳಿಸುತ್ತದೆ. ಅಂದಿನ ವಿನಿಮಯ ಲೆಕ್ಕಾಚಾರದಲ್ಲಿ ೪೮ ಪೌಂಡ್ ಎಂಬುದು ನಮ್ಮ ೫೦೦೦ ರೂಪಾಯಿಗಳಿಗೆ ಸಮನಾಗಿದ್ದು ಅದು ಆ ಹಾಲು ಮಾರುವ ವ್ಯಕ್ತಿಯ ಮಾಸಿಕ ಆದಾಯದ ಶೇ. ೯೦. ಇಂತಹ ಶಾಲೆಗಳಲ್ಲಿ ನಮ್ಮ ಬಡಮಕ್ಕಳು ವಿದ್ಯಾಭ್ಯಾಸ ಮಾಡುವುದು ಹೇಗೆ? ಬೋಧನಾ ಶುಲ್ಕವನ್ನು ಹೊರತುಪಡಿಸಿ ಪ್ರತಿಷ್ಠಿತ ಖಾಸಗಿ ಶಾಲೆಯೊಂದು ವಸೂಲು ಮಾಡುವ ಇತರೆ ವಾರ್ಷಿಕ ಶುಲ್ಕಗಳು ಹೀಗಿವೆ.

| | |
|---|---|
| ಮಗುವಿನ ಕೈ ಬರಹ ಉತ್ತಮ ಪಡಿಸಲು | ರೂ. ೭,೦೦೦.೦೦ |
| ನಕ್ಷತ್ರ ವೀಕ್ಷಣೆಯ ಶುಲ್ಕ | ೧,೫೦೦.೦೦ |
| ಕಂಪ್ಯೂಟರ್ ಕಲಿಕೆಗೆ | ೪,೦೦೦.೦೦ |
| ಈಜು ಕಲಿಕೆಗೆ | ೨,೦೦೦.೦೦ |
| ಪುಸ್ತಕ ಮತ್ತು ಸಮವಸ್ತ್ರ | ೮,೦೦೦.೦೦ |

ಇದು ಒಂದು ಶಾಲೆಯ ಶುಲ್ಕದ ಮಾದರಿ. ಈ ರೀತಿಯ ಶುಲ್ಕದ ಪಟ್ಟಿಯನ್ನು ಕಂಡ ಯಾವ ಬಡ ಪೋಷಕ ತನ್ನ ಮಗು ಇಂತಹ ಶಾಲೆಯಲ್ಲಿ ಕಲಿಯ ಬೇಕೆಂದು ಬಯಸಿಯಾನು? ಪ್ರತಿಷ್ಠಿತ ಶಾಲೆಗಳು ಬಡಮಕ್ಕಳನ್ನು ದೂರವಿರಿಸಲು ಬಳಸುವ ತಂತ್ರಗಳಲ್ಲಿ ಈ ದುಬಾರಿ ಶುಲ್ಕವೂ ಒಂದು. "ನಮ್ಮ ಶಾಲೆಯಲ್ಲಿ ಏರ್ಪಡಿಸುವ ಅಂತರಾಷ್ಟ್ರೀಯ ಪ್ರವಾಸದ ಖರ್ಚು ೩ ಲಕ್ಷ ರೂಪಾಯಿ, ಅಷ್ಟನ್ನು ಕೊಡಲು ಸಿದ್ಧವಿದ್ದರೆ ನಿಮ್ಮ ಮಗುವನ್ನು ನಮ್ಮ ಶಾಲೆಗೆ ಸೇರಿಸಿ" ಎಂಬುದಾಗಿ ಬಡ ಪೋಷಕನೊಬ್ಬನಿಗೆ ತಿಳಿಸಿದರೆ ಆತನ ಸ್ಥಿತಿ ಹೇಗಿದ್ದೀತು? ಇಂಥ ಪ್ರಶ್ನೆಗಳಿಗೆ ಖಖಇ ಶಾಸನದಲ್ಲಿ ಉತ್ತರವಿರಲು ಸಾಧ್ಯವಿಲ್ಲ.

ಕೇವಲ ಖಾಸಗಿ ಶಾಲೆಗಳು ಮಾತ್ರ ಈ ಕಥೆಯ ಖಳರಲ್ಲ. ಇದರ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ ರಾಜ್ಯ ಸರ್ಕಾರಗಳೂ ಸಹ ಜನವಿರೋಧಿ ಕೆಲಸದಲ್ಲಿ ತಮ್ಮ ಪಾಲು ಸಲ್ಲಿಸಿವೆ. RTE ಅಡಿಯಲ್ಲಿ ಲಭ್ಯವಿರುವ ಒಟ್ಟು ಸೀಟುಗಳ ಪೈಕಿ ಶೇ. ೮೫ರಷ್ಟು ಸೀಟುಗಳಿಗೆ ಪ್ರವೇಶ ನೀಡಿ ಸಾಪೇಕ್ಷವಾಗಿ ಉತ್ತಮ ಸಾಧನೆ ಮಾಡಿರುವ ಕರ್ನಾಟಕವೂ ಸಹ ಈ ಶಾಸನಕ್ಕೆ ತಿದ್ದುಪಡಿಯೊಂದನ್ನು ಈ ವರ್ಷ ಜೂನ್‌ನಲ್ಲಿ ತಂದಿದೆ. ಇನ್ನೂ ಮುಂದೆ




ಒಂದು ಖಾಸಗಿ ಶಾಲೆಯು ತನ್ನ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ೨೫%ರಷ್ಟು ಧಾರ್ಮಿಕ ಅಥವಾ ಭಾಷಿಕ ಅಲ್ಪಸಂಖ್ಯಾತರಿದ್ದರೆ–ಈ ವರೆಗೆ ಇದಕ್ಕೆ ೭೫% ಮಕ್ಕಳ ಅಗತ್ಯವಿತ್ತು–ತನ್ನನ್ನು ಅಲ್ಪ ಸಂಖ್ಯಾತ ಶಾಲೆಯೆಂದು ಘೋಷಿಸಿಕೊಂಡು RTE ನಿರ್ಬಂಧದಿಂದ ವಿನಾಯ್ತಿ ಪಡೆಯಬಹುದಾಗಿದೆ. ಇದರ ಅನ್ವಯ ಸುಮಾರು ೮೦೦೦ ಶಾಲೆಗಳು ತಮ್ಮನ್ನು ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿಕೊಳ್ಳಲು ಸಾಧ್ಯವಿದೆ. ಬೆಂಗಳೂರಿನ ಫ್ರೇಜರ್ ಟೌನ್ ವ್ಯಾಪ್ತಿಯಲ್ಲಿ ಐದು ಶಾಲೆಗಳಿದ್ದು ಅದರ ಸುತ್ತ ಮೂರು ಕೊಳೆಗೇರಿಗಳಿವೆ. ಈ ಐದು ಶಾಲೆಗಳು ಅಲ್ಪ ಸಂಖ್ಯಾತ ಸ್ಥಾನಕ್ಕಾಗಿ ಪ್ರಯತ್ನಿಸುತ್ತಿದ್ದು, ನೆರೆಯ ಮಕ್ಕಳಿಗೆ ಈ ಶಾಲೆಗಳಿಂದ ಯಾವ ಅನುಕೂಲವೂ ಆಗುವುದಿಲ್ಲ.

ಇತರೆ ರಾಜ್ಯಗಳಲ್ಲೂ ಸಹ RTE ವಿಧಿಯ ಅನುಷ್ಠಾನದ ಸ್ಥಿತಿ ತೀರಾ ಹೀನಾಯ ಮಟ್ಟದಲ್ಲಿದೆ. ಈ ವಿಧಿಯ ವಿರೋಧಿ ರಾಜ್ಯಗಳ ಪಟ್ಟಿಯೇನಾದರೂ ಇದ್ದಲ್ಲಿ. ಅದರ ಪ್ರಥಮ ಸ್ಥಾನ ಆಂಧ್ರ ಪ್ರದೇಶಕ್ಕೆ ಸಲ್ಲಬೇಕು (ತೆಲಂಗಾಣ, ಸೀಮಾಂಧ್ರ ಎರಡೂ ರಾಜ್ಯಗಳು ಸೇರಿ). ಅಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಒಂದೇ ಒಂದು ಪ್ರತಿಷ್ಠಿತ ಶಾಲೆಯೂ ಒಂದು ಮಗುವಿಗೂ RTE ಅಡಿಯಲ್ಲಿ ಪ್ರವೇಶ ನೀಡಿಲ್ಲ. ಬೋಧನಾ ಶುಲ್ಕ ಮರುಪಾವತಿಯಾಗುವುದರಿಂದ ಕೆಲವು ಶಾಲೆಗಳು ಬಡಮಕ್ಕಳಿಗೆ ಅವಕಾಶ ಕಲ್ಪಿಸಲು ಸಿದ್ಧವಿದ್ದರೂ ಸರ್ಕಾರವೇ ಇದಕ್ಕೆ ಸಿದ್ಧವಿಲ್ಲ. ಪ್ರತಿವರ್ಷ RTE ಅಡಿಯಲ್ಲಿ ೫೭,೦೦೦ ಸೀಟುಗಳು ಸೃಷ್ಟಿಯಾಗುತ್ತಿದ್ದು ಸರ್ಕಾರಕ್ಕೆ ಪ್ರಥಮ ವರ್ಷವೇ ೩೪೦೭ ಕೋಟಿ ರೂ. ಹೊರೆ ಬೀಳಲಿದ್ದು ಅದು ಪ್ರತಿ ವರ್ಷ ಇದೇ ಪ್ರಮಾಣದಲ್ಲಿ ಹೆಚ್ಚಲಿರುವುದರಿಂದ ಸರ್ಕಾರ ಈ ಹೊಣೆ ಹೊರಲು ಸಿದ್ಧವಿಲ್ಲ. ಈ ಖರ್ಚು ಭರಿಸುವುದಷ್ಟೇ ಅಲ್ಲದೇ ಇತರೆ ಸರ್ಕಾರಿ ಶಾಲೆಗಳನ್ನು ತಾವು ನಡೆಸಬೇಕಿದೆ. RTE ಅಡಿಯಲ್ಲಿ ಖಾಸಗಿ ಶಾಲೆಗಳಿಗೆ ಮಕ್ಕಳು ಪ್ರವೇಶ ಪಡೆದರೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುವ ಆತಂಕವೂ ತಮಗಿದೆ ಎಂಬುದು ಅಲ್ಲಿನ ಸರ್ಕಾರಿ ವಕ್ತಾರರ ವಿವರಣೆ.

ಉತ್ತರ ಪ್ರದೇಶದ ಸ್ಥಿತಿಯಾದರೂ ಇತರೆಡೆಗಿಂತ ಭಿನ್ನವಾಗಿಲ್ಲ. ಅಲ್ಲಿ ೬೦,೦೦೦ ಸೀಟುಗಳು ಲಭ್ಯವಿದ್ದು ಈವರೆಗೆ ಪ್ರವೇಶ ಪಡೆದಿರುವ ಮಕ್ಕಳ ಸಂಖ್ಯೆ ಕೇವಲ ೬೦. ೨೦೧೨ನೇ ಇಸವಿಯಲ್ಲಿ ಉತ್ತರ ಪ್ರದೇಶದ ಸರ್ಕಾರ ಹೊರಡಿಸಿರುವ ಆಜ್ಞೆಯ ಪ್ರಕಾರ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಖಾಸಗಿ ಶಾಲೆಗಳಲ್ಲಿನ ಸೀಟುಗಳು ಭರ್ತಿಯಾದ ನಂತರವಷ್ಟೇ RTE ಅಡಿ ಮಕ್ಕಳನ್ನು ಶಾಲೆಗಳಿಗೆ ಸೇರಿಸಬಹುದಾಗಿದೆ. RTE ಅಡಿಯಲ್ಲಿ ಉತ್ತರ ಪ್ರದೇಶ ಸರ್ಕಾರ ಖಾಸಗಿ ಶಾಲೆಯೊಂದಕ್ಕೆ ಒಬ್ಬ ಮಗುವಿಗೆ ನೀಡಬಹುದಾದ ಶುಲ್ಕ ಮಾಸಿಕ ರೂ.೪೫೦.೦೦. ಸರಾಸರಿ ಒಂದು ಮಗುವಿಗೆ ಮಾಸಿಕ ೨೦೦೦ ರಿಂದ ೩೦೦೦ ರವರೆಗೆ ವಸೂಲು ಮಾಡುವ ಶಾಲೆಯೊಂದು RTE ಅಡಿ ಮಕ್ಕಳಿಗೆ ಪ್ರವೇಶ ನೀಡಿ ನಷ್ಟ ಅನುಭವಿಸಲು ಹೇಗೆ ತಾನೆ ಸಿದ್ಧವಿದ್ದೀತು. ಹಾಗಾಗಿ ಈ ಶಾಲೆಗಳು RTE ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳ ಮೇಲೆ ಭಾರೀ ಒತ್ತಡ ಹೇರುತ್ತಿವೆ.

ಈ ಕಾನೂನಿನಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಗುಜರಾತ್‌ನ ಜಾಣತನವೇನೂ ಕಡಿಮೆಯಲ್ಲ. ಕೇಂದ್ರದ ಶಾಸನವನ್ನು ತಲೆಕೆಳಗು ಮಾಡಿ RTE ಅಡಿ ಮಕ್ಕಳಿಗೆ ಪ್ರಾಯೋಗಿಕ ನೆಲೆಯಲ್ಲಿ ಪ್ರವೇಶ ನೀಡುತ್ತಿರುವ ಏಕೈಕ ರಾಜ್ಯ ಗುಜರಾತ್. ಇದರ ಅರ್ಥ ಬೇಡದ ಮಕ್ಕಳನ್ನು ಪ್ರತಿಷ್ಠಿತ ಖಾಸಗಿ ಶಾಲೆಗಳಿಂದ ದೂರವಿರಿಸುವುದಷ್ಟೇ ಹೊರತು ಬೇರೇನಲ್ಲ. ೨೦೧೩–೧೪ರಲ್ಲಿ ಗುಜರಾತ್‌ನಲ್ಲಿರುವ ಸಹಸ್ರಾರು ಖಾಸಗಿ ಶಾಲೆಗಳ ಪೈಕಿ ಕೇವಲ ೧೦೦ ಶಾಲೆಗಳನ್ನು ಯಾವ ಮಾನದಂಡವೂ ಇಲ್ಲದೆ, ಈ ಉದ್ದೇಶಕ್ಕಾಗಿ ಗುರುತಿಸಲಾಗಿದೆ. ಡೆಲ್ಲಿ ಪಬ್ಲಿಕ್ ಸ್ಕೂಲ್ ಅಥವಾ ಖ್ಯಾತ ಏಕಲವ್ಯ ಪ್ರತಿಷ್ಠಾನದ ಒಂದು ಶಾಲೆಯೂ ಈ ಪಟ್ಟಿಯಲ್ಲಿಲ್ಲ. ೨೦೧೪ರಲ್ಲಿ ಯಾವ ಪಾರದರ್ಶಕ ಮಾನದಂಡವೂ ಇಲ್ಲದೆ ಈ ಸಂಖ್ಯೆಯನ್ನು ೨೦೦ಕ್ಕೆ ಹೆಚ್ಚಿಸಲಾಗಿದೆ. ಇತರೆ ಹಲವು ರಾಜ್ಯಗಳ ಹಾಗೆ ಗುಜರಾತ್‌ನಲ್ಲೂ ಸಹ ಸಂಬಂಧಿತ ಕುಂದುಕೊರತೆಯ ನಿವಾರಣೆಯ ಯಾವ ವ್ಯವಸ್ಥೆಯೂ ಇಲ್ಲ. ಈ ಕಾನೂನು ಜಾರಿಯಾಗುವುದನ್ನು ಖಚಿತಪಡಿಸುವ ಯಾವ ಘಟಕವೂ ಇಲ್ಲ.

ಈ ವಿಚಾರದಲ್ಲಿ ಮಹಾರಾಷ್ಟ್ರ ಮತ್ತೊಂದು ರೀತಿಯ ಜಾಣತನ ಪ್ರದರ್ಶಿಸಿದೆ. RTE ಅಡಿ ಖಾಸಗಿ ಶಾಲೆಗಳಿಗೆ ಪ್ರವೇಶದ ಪ್ರಕ್ರಿಯೆಯನ್ನು ಆನ್‌ಲೈನ್ ಮಾಡಿರುವ ಏಕೈಕ ರಾಜ್ಯ ಮಹಾರಾಷ್ಟ್ರ. ಮನೆಗಳಲ್ಲಿ ಕಂಪ್ಯೂಟರ್, ಅಂತರ್ಜಾಲದ ವ್ಯವಸ್ಥೆಯನ್ನು ಎಂದೂ ಕಾಣದ ಜನ ಈ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲಾರದೆ ಖಾಸಗಿ ಶಾಲೆಗಳತ್ತ ಮುಖ ಹಾಕುವುದನ್ನೇ ಕಡಿಮೆ ಮಾಡಿರುವುದರ ಪರಿಣಾಮವಾಗಿ ೨೦೧೩ರಲ್ಲಿ ೪೪% ಇದ್ದ ಆಕಾಂಕ್ಷಿಗಳ ಪ್ರಮಾಣ ೨೦೧೩ರಲ್ಲಿ ೩೬%ಗೆ ಇಳಿದು ಬಿಟ್ಟಿತು.

ಅಪಾರದರ್ಶಕವಾದ, ಶಾಲೆಗಳ ಜವಾಬ್ದಾರಿಯನ್ನು ಖಚಿತಪಡಿಸದ ನಿಯಮಗಳು ಖಾಸಗಿ ಶಾಲೆಗಳಿಗೆ ಒಂದು ಮಟ್ಟದ ಸುರಕ್ಷತೆಯನ್ನು ಗಳಿಸಿಕೊಟ್ಟವು. ಆನ್‌ಲೈನ್‌ನಲ್ಲಿ ಸೀಟು ನಿಗದಿಯಾದ ಎಷ್ಟೋ ಮಕ್ಕಳಿಗೆ ಶಾಲೆಗಳು ಪ್ರವೇಶವನ್ನೇ ನೀಡಲಿಲ್ಲ. RTE ಅಡಿ ಮಕ್ಕಳ ಪ್ರವೇಶಕ್ಕಾಗಿ ಗುರುತಿಸಲ್ಪಟ್ಟ ೩೦೦೦ ಶಾಲೆಗಳ ಪೈಕಿ ಕೇವಲ ೩೧೨ ಶಾಲೆಗಳು ಮಾತ್ರ ಸೀಟುಗಳನ್ನು ನೀಡಲು ಮುಂದೆ ಬಂದವು. ಮಹಾರಾಷ್ಟ್ರದಲ್ಲಿ ಖಾಸಗಿ ಅನುದಾನಿತ ಶಾಲೆಗಳ ಸಂಖ್ಯೆ ಒಟ್ಟು ಶಾಲೆಗಳ ಸಂಖ್ಯೆಯ ಅರ್ಧದಷ್ಟಿದ್ದು ಈ ಅನುದಾನಿತ ಶಾಲೆಗಳಿಗೆ RTE ಅಡಿ ಜವಾಬ್ದಾರಿ ವಹಿಸುವ ಯಾವ ನಿಯಮವೂ ಅಲ್ಲಿ ಇಲ್ಲದಿರುವುದರಿಂದ ಈ ಶಾಲೆಗಳ ಜವಾಬ್ದಾರಿ ಹೊರುವ ಆಸಕ್ತಿಯನ್ನೇ ತೋರಿಲ್ಲ.


ಇದು ಆರ್ಥಿಕ ದುರ್ಬಲ ವರ್ಗದ ಮಕ್ಕಳನ್ನು ಖಾಸಗಿ ಶಾಲೆಗಳು ದೂರವಿರಿಸಲು ಮಾಡುವ ಪ್ರಯತ್ನ ಒಂದೆಡೆಯಾದರೆ ಪ್ರವೇಶ ನೀಡಿದ ಎಷ್ಟೋ ಶಾಲೆಗಳು ಈ ಮಕ್ಕಳನ್ನು ಇತರರಿಂದ ಪ್ರತ್ಯೇಕಿಸಲು ಹಲವಾರು ದುಷ್ಟ ಉಪಾಯಗಳನ್ನು ಕಂಡುಕೊಂಡಿರುವುದು ಮತ್ತೊಂದು ಕಥೆ. ಪುಣೆಯ ಪ್ರತಿಷ್ಠಿತ ಶಾಲೆಯೊಂದು ಬೆಳಗ್ಗೆ ೭.೩೦ ರಿಂದ ೧೨.೩೦ರ ವರೆಗೆ ಒಂದು ಪಾಳಿಯಾದರೆ ಮಧ್ಯಾಹ್ನ ಊಟದ ನಂತರ ೪.೩೦ರವರೆಗೆ ಮತ್ತೊಂದು ಪಾಳಿಯಲ್ಲಿ ನಡೆಯುತ್ತದೆ. ಬೆಳಗಿನ ಪಾಳಿಯಲ್ಲಿ ಪಾಠ ಪ್ರವಚನ. ಅಲ್ಲಿಗೆ ಮಾತ್ರ RTE ಅಡಿ ಪ್ರವೇಶ ಪಡೆದ ಮಕ್ಕಳಿಗೆ ಅವಕಾಶ. ನಂತರದ ಪಾಳಿಯಲ್ಲಿ ವ್ಯಕ್ತಿ ವಿಕಸನ ಚಟುವಟಿಕೆಗಳು, ಕ್ರೀಡೆ ಮತ್ತಿತರ ಪಠ್ಯೇತರ ಚಟುವಟಿಕೆಗಳು ನಡೆಯುತ್ತವೆ ಅಲ್ಲಿಗೆ ಈ ಬಡಮಕ್ಕಳಿಗೆ ಪ್ರವೇಶ ನಿರಾಕರಣೆ. ಪ್ರಥಮ ಪಾಳಿಯ ನಂತರ ಈ ಮಕ್ಕಳು ಮನೆಗೆ ತೆರಳಬೇಕು. ಮಗುವೊಂದು ತನ್ನ ಇಡೀ ಭವಿಷ್ಯವನ್ನು ರೂಪಿಸುವ ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ಅಮೂಲ್ಯ ಹಂತವೇ ಬಾಲ್ಯ. ಅದಕ್ಕೆ ಪ್ರಶಸ್ತವಾದ ಸ್ಥಳವೇ ಶಾಲೆ. ಅಲ್ಲಿಯೇ ಈ ಬಗೆಯ ಅಮಾನವೀಯ ತಾರತಮ್ಯ ನೀತಿಗೆ ಒಳಗಾಗುವ ಮಗುವಿನ ಮನಸ್ಸು ಹೇಗೆ ರೂಪುಗೊಳ್ಳಬಹುದು?

ತಮ್ಮ ಮಗುವಿಗೆ ಪ್ರವೇಶ ದೊರೆಯಿತೆಂದು ಪೋಷಕರು ನಿರಾಳವಾಗಿರುವಂತಿಲ್ಲ. ಆಗಾಗ್ಗೆ ಶಾಲೆಯಿಂದ ಬರುವ ಕರೆಯನ್ನು ಅವರು ನಿರೀಕ್ಷಿಸಬೇಕಾಗುತ್ತದೆ. ನಿಮ್ಮ ಮಗು ಸ್ವಚ್ಛವಾಗಿರುವುದಿಲ್ಲ. ಸರಿಯಾಗಿ ಓದುವುದಿಲ್ಲ. ಅವನಿಗೆ ಶಿಸ್ತಿಲ್ಲ ಎಂಬಂತಹ ದೂರುಗಳನ್ನು ಕೇಳುತ್ತಿರಬೇಕಾಗುತ್ತದೆ. ಯಾವ್ಯಾವುದೋ ತಂತ್ರ ಬಳಸಿ, ಹೆತ್ತವರನ್ನು ಹೆದರಿಸಿ ಮಕ್ಕಳನ್ನು ಹೊರದೂಡುವ ಪ್ರಯತ್ನವನ್ನು ಶಾಲೆಗಳು ಮುಂದುವರೆಸುತ್ತಲೇ ಇರುತ್ತವೆ. ಪ್ರಾರಂಭದ ದಿನಗಳಲ್ಲಿ ದೆಹಲಿಯ ಕೆಲವು ಶಾಲೆಗಳು ಮಕ್ಕಳ ಗುರುತಿನ ಚೀಟಿಯಲ್ಲಿ ಅವರನ್ನು ಆರ್ಥಿಕ ಹಿಂದುಳಿದ ವರ್ಗದವರೆಂದು ಸೂಚಿಸಲು W ಎಂಬುದಾಗಿ ಗುರುತು ಮಾಡುತ್ತಿದ್ದವು. ಕೆಲವು ಶಾಲೆಗಳು ಈ ಮಕ್ಕಳಿಗೆ ಬೇರೆಯದೇ ಆದ ಸಮವಸ್ತ್ರವನ್ನು ನಿಗದಿಪಡಿಸಿದ್ದವು. ಕೆಲವು ಶಾಲೆಗಳಂತೂ ಈ ಮಕ್ಕಳಿಗಾಗಿ ಪ್ರತ್ಯೇಕ ವೇಳಾಪಟ್ಟಿಯನ್ನೂ ಮಾಡಿ ಪ್ರತ್ಯೇಕ ತರಗತಿಗಳನ್ನೇ ನಡೆಸಿದವು.

ಯಾವುದೇ ಸರ್ಕಾರಿ ಯೋಜನೆಯ ಯಶಸ್ಸು ಅದರ ಫಲಾನುಭವಿಗಳ ಪ್ರಯತ್ನ, ಪ್ರಭಾವ, ಸಂಘಟನೆಗಳನ್ನು ಅವಲಂಬಿಸಿರುತ್ತದೆ. ಈ RTE ಯೋಜನೆಯಾದರೂ ಇದಕ್ಕೆ ಹೊರತಾಗಿರಲು ಸಾಧ್ಯವಿಲ್ಲ. ಇತರೆ ರಾಜ್ಯಗಳಲ್ಲಿ ಯಶಸ್ವಿಯಾಗದ ಈ ಯೋಜನೆ ದೆಹಲಿಯಲ್ಲಿ ಮಾತ್ರ ಶೇ ೯೩ ರಷ್ಟು ಯಶಸ್ಸನ್ನು ಕಾಣಲು ಏನು ಕಾರಣ ಎಂಬುದನ್ನು ತುಸು ಪರಿಶೀಲಿಸೋಣ.

‘Founders of Social Jurists’ ಎಂಬ ವಕೀಲರ ಸಂಘಟನೆಯ ಅಶೋಕ್ ಅಗರವಾಲ್ ಅವರ ಪ್ರಯತ್ನ ದೆಹಲಿಯ ಯಶಸ್ಸಿಗೆ ಮುಖ್ಯ ಕಾರಣ. RTE ಎಂಬ ಶಾಸನ ಜಾರಿಯಾಗುವುದಕ್ಕಿಂತ ಬಹಳ ಮೊದಲು ಅಂದರೆ ೨೦೦೫ ರಲ್ಲೇ ಅವರು ಈ ರೀತಿಯ ಪ್ರಯತ್ನದಲ್ಲಿ ಕ್ರಿಯಾಶೀಲರಾಗಿದ್ದರು.

೧೯೯೭ ರಲ್ಲಿ ದೆಹಲಿಯ ಅನುದಾನರಹಿತ ಖಾಸಗಿ ಶಾಲೆಗಳು



ಐದನೆಯ ವೇತನ ಆಯೋಗಕ್ಕೆ ಮೊದಲೇ ಶುಲ್ಕವನ್ನು ೪೦ ರಿಂದ ೪೦೦% ವರೆಗೆ ಹೆಚ್ಚಿಸಲು ನಿರ್ಧರಿಸಿದಾಗ ವಕೀಲರ ಸಂಘಟನೆಯ ಮೂಲಕ ಖಾಸಗಿ ಶಾಲೆಗಳ ನಿರ್ಧಾರದ ವಿರುದ್ಧ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ಹೂಡಲು ನಿರ್ಧರಿಸಲಾಯಿತು. ಸರ್ಕಾರದಿಂದ ಹೆಚ್ಚೂ ಕಡಿಮೆ ಪುಕ್ಕಟೆಯಾಗಿ ಭೂಮಿಯನ್ನು ಪಡೆದಿದ್ದ ೨೬೫ ಶಾಲೆಗಳನ್ನು ಗುರುತಿಸಲಾಯಿತು. ಈ ಭೂಮಿಯ ಕೊಡುಗೆಗೆ ಪ್ರತಿಯಾಗಿ ಈ ಶಾಲೆಗಳು ತಮ್ಮ ೨೫% ನಷ್ಟು ಸೀಟುಗಳನ್ನು ಆರ್ಥಿಕವಾಗಿ ಹಿಂದುಳಿದ ವರ್ಗದ ಮಕ್ಕಳಿಗೆ ನೀಡಬೇಕಾಗಿತ್ತು. ಆದರೆ ಯಾವ ಶಾಲೆಯೂ ಈ ನಿಬಂಧನೆಯನ್ನು ಪಾಲಿಸುತ್ತಿರಲಿಲ್ಲ. ಈ ವಿಚಾರವನ್ನು ನ್ಯಾಯಾಲಯಕ್ಕೆ ಕೊಂಡೊಯ್ದಾಗ ತೀರ್ಪು ಸಂಘಟನೆಯ ಪರವಾಗಿ ಬಂದಿತು. ಅಂದಿನಿಂದ ಈ ಖಾಸಗಿ ಶಾಲೆಗಳು ೨೫% ಸೀಟುಗಳನ್ನು ಬಡಮಕ್ಕಳಿಗೆ ನೀಡತೊಡಗಿದವು. ಬರೀ ಖಾಸಗಿ ಶಾಲೆಗಳಲ್ಲಿ ಬಡವರಿಗೆ ಮೀಸಲಾತಿ ಪಡೆಯುವುದಷ್ಟೇ ಅಲ್ಲದೆ ಸರ್ಕಾರಿ ಶಾಲೆಗಳಲ್ಲಿ ದೊರೆಯುವ ವಿದ್ಯಾಭ್ಯಾಸದ ಗುಣಮಟ್ಟ, ಶಿಕ್ಷಕರ ನೇಮಕಾತಿಯ ವಿಚಾರದಲ್ಲಿ, ಮೂಲ ಸೌಕರ್ಯಗಳ ವಿಚಾರದಲ್ಲಿ ಹೀಗೆ ಹಲವು ಸಂದರ್ಭಗಳಲ್ಲಿ ನ್ಯಾಯಾಲಯಗಳು ಸಂಘಟನೆಯ ಪರವಾಗಿ ತೀರ್ಪು ನೀಡಿವೆ ಎನ್ನುತ್ತಾರೆ ಅಶೋಕ್ ಅಗರ್‌ವಾಲ್.

ಶಿಕ್ಷಣ ಕ್ಷೇತ್ರದ ಸಂಪೂರ್ಣ ಖಾಸಗೀಕರಣದ ಪ್ರಥಮ ಹೆಜ್ಜೆಯೆಂಬಂತೆ ತೋರುತ್ತಿರುವ ಈ RTE ಶಾಸನವು ತನ್ನ ಒಡಲೊಳಗೆ ಹಲವಾರು ಜನವಿರೋಧಿ ಕುರುಹುಗಳನ್ನು ಧರಿಸಿಯೇ ಹುಟ್ಟಿಬಂದಿದೆ. ಸರ್ಕಾರ ಶಾಲೆಗಳನ್ನು ನಡೆಸುವುದರ ಜೊತೆಗೆ ಅಪಾರ ಮೊತ್ತದ ತೆರಿಗೆ ಹಣವನ್ನು ಲಾಟರಿ ಮೂಲಕ ಆಯ್ಕೆಯಾದ ಕೆಲ ಮಕ್ಕಳ ಪರವಾಗಿ ಖಾಸಗಿಯವರ ಜೇಬಿಗೆ ತುಂಬ ಬೇಕಾಗಿರುವುದು ಸೂಕ್ತ ನಡೆಯಾಗಲಾರದು. ಶಿಕ್ಷಣ ವ್ಯವಸ್ಥೆ ಸಂಪೂರ್ಣ ರಾಷ್ಟ್ರೀಕರಣಗೊಂಡು ಏಕರೂಪದ, ಗುಣಮಟ್ಟದ ಶಿಕ್ಷಣ ದೇಶದ ಪ್ರತಿಯೊಂದು ಮಗುವಿಗೂ ದೊರೆಯುವಂತಾಗುವುದೇ ಆದರ್ಶ. ಸಾರ್ವಜನಿಕ ಕ್ಷೇತ್ರಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಪ್ರಯತ್ನಿಸದೆ ವ್ಯವಸ್ಥೆಯನ್ನೇ ಖಾಸಗೀಕರಿಸುವುದು ಸಮಸ್ಯೆಗಿಂತ ಘೋರವಾದ ಪರಿಹಾರ.

## RTE: ಒಂದು ಸ್ಥೂಲ ಚಿತ್ರ:

**ಮಹಾರಾಷ್ಟ್ರ :**

೧. ನಿಯಮಗಳು ರಚನೆಯಾದದ್ದು : ೨೦೧೨

೨. ಅರ್ಧದಷ್ಟು ಶಾಲೆಗಳು ಅನುದಾನಿತ ಶಾಲೆಗಳು

ಆದರೂ EWS ಮಕ್ಕಳ ಪ್ರವೇಶಕ್ಕೆ ಸಹಾಯಕವಾಗುವ ಕಾನೂನು ರಚನೆಯಾಗಿಲ್ಲ

೩. ಆನ್‌ಲೈನ್ ಅರ್ಜಿ ಸಲ್ಲಿಕೆಯ ವ್ಯವಸ್ಥೆಯಿಂದ ಸೀಟು ಆಕಾಂಕ್ಷಿಗಳ ಪ್ರಮಾಣದಲ್ಲಿ ಇಳಿತ.

**ಕರ್ನಾಟಕ :**

- EWS ಮಕ್ಕಳ ಪ್ರವೇಶಕ್ಕೆ ಅರ್ಹವೆಂದು ಗುರುತಿಸಲ್ಪಟ್ಟ ೧೫,೦೦೦ ಶಾಲೆಗಳ ಪೈಕಿ ಜೂನ್ ೨೦೧೪ರ ಆಜ್ಞೆಯ ಪ್ರಕಾರ ೮,೦೦೦ ಶಾಲೆಗಳು ವಿನಾಯಿತಿ ಪಡೆದು ಕೇವಲ ೭,೦೦೦ ಶಾಲೆಗಳು ಉಳಿಯುತ್ತವೆ.
- ಈ ಹಿಂದೆ ಅಲ್ಪಸಂಖ್ಯಾತ ಸ್ಥಾನ ನಿರ್ಧರಣೆಗೆ ೭೫% ಅಲ್ಪಸಂಖ್ಯಾತ ಮಕ್ಕಳ ಅಗತ್ಯವಿದ್ದುದನ್ನು ಈಗ ೨೫%ಗೆ ಇಳಿಸಲಾಗಿದೆ.

**ಆಂಧ್ರಪ್ರದೇಶ / ತೆಲಂಗಾಣ :**

- ಯಾವ ಶಾಲೆಯೂ EWS ಮಕ್ಕಳಿಗೆ ಪ್ರವೇಶ ನೀಡಿಲ್ಲ
- ೨೦೧೨ರಲ್ಲಿ ಈ ಕುರಿತು ಸಮಿತಿಯೊಂದು ವರದಿ ನೀಡಿದ್ದು ಅದರ ಬಗ್ಗೆ ಯಾವ ನಿರ್ಧಾರವನ್ನು ಕೈಗೊಂಡಿಲ್ಲ.
- ೨೦೧೨ಕ್ಕೆ ಮೊದಲು ರಚಿಸಲ್ಪಟ್ಟ ನಿಯಮಗಳಲ್ಲಿ ಸ್ಪಷ್ಟತೆಯಿರಲಿಲ್ಲ.

**ಗುಜರಾತ್ :**

- ೨೦೧೩ರಲ್ಲಿ ಲಭ್ಯವಿರುವ ಸೀಟುಗಳನ್ನು ಪ್ರಕಟಿಸಿದ ಕೊನೆಯ ರಾಜ್ಯ.
- ಗುಜರಾತ್‌ನ ಒಟ್ಟು ೨೯ ಜಿಲ್ಲೆಗಳ ಪೈಕಿ ಬರೀ ೮ ಜಿಲ್ಲೆಗಳಲ್ಲಿ ಪ್ರಾಯೋಗಿಕ ನೆಲೆಯಲ್ಲಿ RTE ಗೆ ಚಾಲನೆ ದೊರೆತಿದೆ.
- ೨೦೦ ಶಾಲೆಗಳಲ್ಲಿ ೫೩೦೦ ಸೀಟುಗಳನ್ನು ಯಾವುದೇ ಸ್ಪಷ್ಟ ನಿಯಮಗಳಿಲ್ಲದೆ ಗುರುತಿಸಲಾಗಿದೆ.

**RTE ಯೋಜನೆಯ ಅಡಿಯಲ್ಲಿ ವಿವಿಧ ರಾಜ್ಯಗಳಲ್ಲಿ ಲಭ್ಯವಿರುವ ಸೀಟುಗಳ ಸಂಖ್ಯೆ. ಈ ವರೆಗೆ ಪ್ರವೇಶ ನೀಡಲಾಗಿರುವ ಸಂಖ್ಯೆ ಮತ್ತು ಖಾಲಿಯಿರುವ ಸೀಟುಗಳ ಶೇಕಡಾವಾರು ಪ್ರಮಾಣವನ್ನು ಈ ಕೆಳಗಿನ ಕೋಷ್ಟಕವು ತಿಳಿಸುತ್ತದೆ.**

| ರಾಜ್ಯಗಳು | ಲಭ್ಯವಿರುವ ಸೀಟುಗಳು | ಪ್ರವೇಶ ನೀಡಿರುವ ಸೀಟುಗಳ ಸಂಖ್ಯೆ | ಖಾಲಿ ಇರುವ ಸೀಟುಗಳ ಶೇಕಡಾವಾರು |
|---|---|---|---|
| ಉತ್ತರಪ್ರದೇಶ | ೬,೦೦,೦೦೦ | ೬೦ | ೯೯.೯% |
| ರಾಜಸ್ಥಾನ | ೧,೯೭,೨೫೦ | ೧,೬೬,೨೦೪ | ೧೬% |
| ಮಹಾರಾಷ್ಟ್ರ | ೧,೩೨,೯೫೩ | ೫೮,೭೨೭ | ೬೪% |
| ಕರ್ನಾಟಕ | ೧,೦೮,೩೪೪ | ೭೩,೪೪೦ | ೧೭% |
| ತಮಿಳುನಾಡು | ೫೯,೯೩೨ | ೧೮,೯೪೬ | ೬೯% |
| ಗುಜರಾತ್ | ೫೦,೦೦೦ | ೪೯ | ೯೦% |
| ದೆಹಲಿ | ೩೫,೦೦೦ | ೩೨,೫೦೦ | ೭% |
| ಉತ್ತರ ಖಂಡ | ೨೭,೫೭೯ | ೨೦,೪೯೧ | ೨೬% |
| * ಹಿಮಾಚಲ ಪ್ರದೇಶ | ೧೮,೮೮೨ | ೦ | ೧೦೦% |
| * ಆಂಧ್ರಪ್ರದೇಶ | ೦ | ೦ | ೧೦೦% |
| ತೆಲಂಗಾಣ | ೦ | ೦ | ೧೦೦% |

* ಹಿಮಾಚಲ ಪ್ರದೇಶ ಮತ್ತು ಆಂಧ್ರಪ್ರದೇಶಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿಯೇ ಇಲ್ಲ.

(ಸಂಗ್ರಹಾನುವಾದ: **ಎಂ ರಾಜು**

ಕೃಪೆ: **ಔಟ್‌ಲುಕ್**, ೮ ಸೆಪ್ಟೆಂಬರ್, ೨೦೧೪)

ಯುವ ಸಮಾಜವಾದಿ ಚಿಂತನ ವೇದಿಕೆ


# ಈ ಭೂಮಿಯ ಬಗ್ಗೆ ಒಂದಿಷ್ಟು ಚಿಂತಿಸುತ್ತಾ...

–ಅಪೂರ್ವ ಡಿ'ಸಿಲ್ವ



ನಮ್ಮಲ್ಲಿ ಮಳೆ ಋತುಗಳನ್ನು ರೈತರು ಅನುಭವದ ಮೇಲೆ ಗುರುತಿಸುತ್ತಿದ್ದರು. ಅದಕ್ಕೆ ತಕ್ಕಂತೆ ಸಿದ್ಧತೆಗಳು ನಡೆಯುತ್ತಿತ್ತು. ಜನವರಿಗೆ ಉತ್ತರ ಶ್ರಾವಣ ಮಳೆ, ಫೆಬ್ರವರಿಗೆ ಧನಿಷ್ಠ ಶತಭಿಷ, ಮಾರ್ಚಿಗೆ ಪೂರ್ವಭಾದ್ರ ಉತ್ತರ ಭಾದ್ರ, ಏಪ್ರಿಲ್‌ಗೆ ಅಶ್ವಿನಿ ಭರಣಿ, ಮೇಗೆ ರೋಹಿಣಿ ಕೃತಿಕ, ಜೂನ್‌ಗೆ ಮೃಗಶಿರ ಅರಿದ್ರ, ಜುಲೈಗೆ ಪುನರ್ವಸು ಪುಷ್ಯ ಹೀಗೆ ಉತ್ತರೆ, ಅಸ್ತೆ, ಚಿತ್ತಾ, ಸ್ವಾತಿ, ವಿಶಾಲ, ಅನುರಾಧ ಋತುಗಳ ಅರಿಯುವಿಕೆ, ಮೊದಲ ಬೆಳೆಯ ಸಂಭ್ರಮ ಇದೆಲ್ಲವೂ ಇತ್ತು. ಆದರೆ ಭೂಮಿ ತಾಪಮಾನವೆಂಬ ಬೆಳವಣಿಗೆ ಶುರುವಾದ ಮೇಲೆ ಋತುಮಾನಗಳ ವೈಪರಿತ್ಯ ತೀವ್ರತರವಾಗಿ ಆಗಿ ಲೆಕ್ಕಚಾರಕ್ಕೆ ಸಿಗದೆ ಸುನಾಮಿ, ಪ್ರವಾಹಗಳು, ಭೂಕಂಪನಗಳು, ಹಿಮಕರಗುವಿಕೆ ಎಲ್ಲ ಶುರುವಾಗಿದೆ. ಕಾಡಿನಿಂದ ಪ್ರಾಣಿಗಳು ನಾಡಿಗೆ ಬರುತ್ತಿದೆ, ನೀರನ್ನು ಹೀರುವ ಗುಡ್ಡಗಳು, ಗಣಿಗಾರಿಕೆ ಧೂಳಿನಿಂದ ಮುಚ್ಚಿಹೋಗಿದೆ. ಭೂಮಿಯ ವೈಪರಿತ್ಯದಂತೆ ಮನುಷ್ಯ ಮನುಷ್ಯನಲ್ಲೂ, ಜೈವೀಕ ಸಂಬಂಧದಲ್ಲೂ ವೈಪರಿತ್ಯಗಳಾಗಿ ಮನಸ್ಸು ಹಾಗೂ ಭೂಮಿ ಒಟ್ಟೊಟ್ಟಿಗೆ ತಾಪಗೊಳ್ಳುತ್ತಾ ಒತ್ತಡವನ್ನು ಅನುಭವಿಸುತ್ತಿದೆ.

ಏಕೆಂದರೆ ಪ್ರಕೃತಿಯನ್ನು ನೋಡುವ ಸಂಬಂಧವನ್ನು ಬೆಳೆಸುವ, ವಿಶ್ಲೇಷಿಸುವ ವ್ಯವಧಾನವೇ ನಮಗಿಲ್ಲ. ಸಾಗರಗಳಲ್ಲಿ ಶೇಖರಗೊಳ್ಳುವ ಅಪಾರವಾದ ಶಾಖದ ಪ್ರಮಾಣವನ್ನೇ ಗುರುತಿಸಿ ಭೂಮಿಯ ತಾಪಮಾನ ಗುರುತಿಸಲಾಗುತ್ತದೆ. ಅದು ಗಾಳಿಯ ಶಾಖದಿಂದಲೂ ಗುರುತಿಸಬಹುದು. ನಾವು ಹೇಳುವ ಜೈವಿಕ ಸಮತೋಲನ ಎಂಬ ಪದ ಪಠ್ಯಪುಸ್ತಕಗಳ ಪದವಾಗಿ ಅಷ್ಟೇ ಕಾಣುತ್ತಿದೆ. ನಿಜಅರ್ಥದಲ್ಲಿ ಜೈವಿಕ ಸಮತೋಲನವೇ ಏರುಪೇರಾಗಿದೆ. ಇದೆಲ್ಲಾ ನೋಡಿದರೆ ಭೂಮಿ, ಋತುಮಾನ, ಜೀವಜಾಲ ಒಂದಕ್ಕೊಂದು ಸಂಬಂಧದಲ್ಲೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳಬೇಕಾಗಿದೆ. ಆದರೆ ಭೂಮಿ–ಮನುಯ ಸಂಬಂಧ ಈಗ ರಿಯಲ್ ಎಸ್ಟೇಟ್‌ನಲ್ಲಿ, ಕೈಗಾರಿಕೆಗಳ ಮಾಲೀನ್ಯದಲ್ಲಿ, ಖನಿಜಗಳ ಲೂಟಿಗಳಲ್ಲಷ್ಟೇ ಕಾಣುತ್ತಿದ್ದೇವೆ. ಈಗ ಕುವೆಂಪುರವರ ಮಲೆಗಳಲ್ಲಿ 'ಮದುಮಗಳು' ಓದುತ್ತಿದ್ದರೆ ಅಲ್ಲಿರುವ ಪಕ್ಷಿಗಳೆಷ್ಟು, ಮರಗಳ್ಯಾವುವು ಎಂಬ ಕುತೂಹಲ ಮೂಡುತ್ತದೆ. ಈಗ ಅಕೇಷಿಯದಿಂದ ಮಲೆನಾಡಿನ ಚಿತ್ರವೇ ಬರಡಾಗುತ್ತಿರುವ ಸಂದರ್ಭದಲ್ಲಿ ಕುವೆಂಪುರವರ ಸಾಹಿತ್ಯವನ್ನು ವಿಶ್ವಮಾನವ ಪ್ರಜ್ಞೆಯನ್ನು ಬರಿ ಮನುಷ್ಯ ಸಂಬಂಧದಲ್ಲಷ್ಟೇ ಅಲ್ಲ, ಇಡೀ ಜೀವಜಾಲದ ಸಂಬಂಧವಾಗೇ ನೋಡಬೇಕಾಗಿದೆ.




ಈಗ ತೇಜಸ್ವಿಯವರ ಕಾರ್ವಾಲೋ ಕಾದಂಬರಿಯ ಮಂದಣ್ಣನನ್ನು ವಿಜ್ಞಾನಿ ಕಾರ್ವಾಲೋರನ್ನು ಒಟ್ಟಿಗೆ ನೋಡುತ್ತಾ ಆ ಮೂಲಕ ಕಾಡು, ಹಾರುವ ಓತಿ, ಎಲ್ಲವನ್ನು ಗುರುತಿಸುತ್ತಾ ಇಡೀ ಜೀವ ಜಾಲವೇ ಒಂದು ಕಂಪನವಾಗಿ ಶಬ್ಧವಾಗಿ, ಆಕೃತಿಯಾಗಿ, ನಲ್ಲುವ ವಿಸ್ಮಯವನ್ನು ಅರಿಯಬೇಕಾಗಿದೆ. ಅಂತೆಯೇ ತೇಜಸ್ವಿಯವರು ತಮ್ಮ 'ಚಿದಂಬರ ರಹಸ್ಯದಲ್ಲಿ' ಈ ರಹಸ್ಯ ಬೇದಿಸಲು ಹೋದರೆ? ಜೀವಜಾಲದ ಏರುಪೇರು ಇಡೀ ಊರನ್ನೇ ದಹಿಸಿ ಪ್ರೀತಿಯಷ್ಟೇ ಉಳಿಯುವ ದರ್ಶನದಂತೆ ರಫಿ ಹಾಗೂ ಜಯಂತಿ ಕಂಡರೆ? ಆ ಪ್ರೀತಿಯಲ್ಲಿ ಗುಡ್ಡದ ಮೇಲೆ ಪ್ರಕೃತಿ ಕಾಪಿಟ್ಟುಕೊಂಡ ನಾಶಗೊಂಡ ಏಲಕ್ಕಿ ತಳಿ ಕಂಡುಬಂದಿತ್ತಾದರೂ ಹೇಗೆ? ಇಂಥ ಪ್ರಶ್ನೆಗಳು ಈಗ ಕಾಡುತ್ತಿದೆ. ಬಹುಷಃ ಮಕುವೊಕರಾ ಅಚಿತಿಮ ದರ್ಶನವು ಈ ಜೀವ ಜಾಲವನ್ನು ಗುರುತಿಸುವ ಮೂಲಕ ಮನುಷ್ಯ ಅದರ ಭಾಗವಾಗಿ ರೂಪುಗೊಳ್ಳುವ ಒಳನೋಟವನ್ನೇ ಸಹಜ ಕೃಷಿಯ ಮೂಲಕ ಹೇಳಿದ್ದಾರೆ. ಪ್ರಕೃತಿಯನ್ನು ಹೀಗೆ ಧ್ಯಾನಿಸುವ ಸಂಯಮ ತಾಳ್ಮೆಯಾದರು ನಮಗೆಲ್ಲಿದೆ. ನಾವು ಏದುಸಿರು ಬಿಡುತ್ತಾ ಕೊನೆಯಿಲ್ಲದ, ಪೂರೈಸಲಾಗ ಆಸೆಯನ್ನು ಬೆನ್ನಟ್ಟುತ್ತಾ, ಮನುಷ್ಯನನ್ನೇ ಕೇಂದ್ರವಾಗಿ ನೋಡುವ ಕ್ರಮವೇ ತಪ್ಪಾಗಿ ಹೋಗಿರುವುದನ್ನು ಈಗಲಾದರೂ ನಾವು ಗುರುತಿಸಬಲ್ಲೆವೇ?

ಬ್ರಹ್ಮಾಂಡದ ಶೂನ್ಯದ ಒಳಗೆ ಈ ಜಗತ್ತಿನಲ್ಲಿರುವ ಎಲ್ಲಾ ಅಣುಗಳನ್ನೂ–ಮನುಷ್ಯರೂ ಸೇರಿದಂತೆ–ಕೂಡಿಹಾಕಿದರೂ ಒಂದು ಸಕ್ಕರೆ ಕಾಳಿನಷ್ಟು ಆಗುತ್ತದೆ. ಆದರೂ ಮನುಷ್ಯ ಕೇಂದ್ರಿತ ನಮ್ಮ ಅಹಂಗೆ ಯಾವುದೇ ಕೊರತೆಯಿಲ್ಲ! ನಮ್ಮ ಪ್ರಧಾನಿಯವರ ಭವ್ಯ ಗುಜರಾತಿನ ನೆಲದ ನೀರು ವಿಶೇಷವಾಗಿ ಅಹಮದಬಾದ್‌ನ ಸಾಬರಮತಿಯ ನೀರು ದೇಶದಲ್ಲೇ ಅತ್ಯಂತ ಕಲುಷಿತಗೊಂಡ ನೀರಿನ ಪಟ್ಟಿಯಲ್ಲಿದೆ! ಅಲ್ಲೆಲ್ಲಾ ಸುತ್ತಮುತ್ತಲಲ್ಲಿ ಮಾಲ್‌ಗಳಿವೆ, ಮಲ್ಟಿಪ್ಲೆಕ್ಸ್‌ಗಳಿವೆ, ದೊಡ್ಡ ಕೈಗಾರಿಕೆಯಿದೆ, ಬೋಟಿಂಗ್ ವ್ಯವಸ್ಥೆಯಿದೆ! ಇಳಾ, ವಸುಧಾ, ಭೂಮಿ, ಧಾರಿಣಿ, ಪೃಥ್ವಿ ಎಂಬ ಹೆಸರಿಟ್ಟು ಸಂತಸಪಡುವ ನಾವು ಭೂಮಿಗೆ ಉಂಟಾಗುತ್ತಿರುವ ದುಃಸ್ಥಿತಿಯ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ. ಯಾಕೆಂದರೆ ಹೀಗೆ ಆಲೋಚಿಸುವುದು ಕೇವಲ ಭಾವನಾತ್ಮಕ ಮಾತ್ರವಲ್ಲ ಇಲ್ಲಿ ಪ್ರಜ್ಞೆಯು ಅಡಕಗೊಳಿಸಬೇಕಿದೆ. ಮನುಷ್ಯ ಈ ಭೂಮಿಯ ಬಗ್ಗೆ, ಪ್ರಕೃತಿಯ ಬಗ್ಗೆ ಪ್ರಜ್ಞೆ ಬೆಳೆಸಿಕೊಂಡಷ್ಟು ಅದರ ಜೊತೆ ಒಂದು ಸಮತೆಯನ್ನು ಸಾಧಿಸಿಕೊಳ್ಳುತ್ತಾನೆ. ಸ್ವಯಂ ಪ್ರಜನನ ಪ್ರಕ್ರಿಯೆಯ ಮೂಲಕ (Self reproducing organism) ಉಂಟಾಗುವ ಸಂತತಿಯಲ್ಲಿ ಸಣ್ಣ ಜೀವಿಯಿಂದ ಮನುಷ್ಯನವರೆಗೆ ವಿಕಾಸಗೊಂಡ ಪ್ರಕ್ರಿಯೆಯಲ್ಲಿ ಅದು ಈ ಭೂಮಿಯನ್ನು, ಪ್ರಕೃತಿಯನ್ನು ಅರಿಯುತ್ತಾ ಅದರೊಡನೆ ಒಂದು ಸಂಬಂಧವನ್ನು ರೂಪಿಸಿಕೊಳ್ಳುತ್ತಾ ತನ್ನ ಅನುವಂಶಿಯತೆಯನ್ನು ಬೆಳೆಸಿಕೊಂಡಿದೆ. ಈ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಜೈವಿಕ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಅದು ತಪ್ಪುತ್ತಾ ಹೋದರೆ ಜೀವಜಗತ್ತು ಹೀಗೆ ನಾಶವಾಗುತ್ತಾ ಮನುಷ್ಯನವರೆಗೆ ಅದು ಮುಂದುವರೆಯುತ್ತದೆ.


ಪೂರ್ವದ ಅನುಭಾವವು ಧ್ಯಾನದಿಂದ ರೂಪುಗೊಂಡಿದ್ದು, ಅದು ಪ್ರಕೃತಿಯ ನಿಯಮಗಳನ್ನು ಧ್ಯಾನಸುತ್ತಿದೆ. ಪಶ್ಚಿಮದ ಆಧುನಿಕ ವಿಜ್ಞಾನವು ಪೂರ್ವದ ಈ ಅನುಭಾವದ ಬಗ್ಗೆ. ಈಗ ಆಸಕ್ತಿ ತಾಳಿರುವುದು ಈ ಕಾರಣಕ್ಕೆ. ನಮ್ಮಲ್ಲಿ ಅಣುವನ್ನು ವಿಶ್ಲೇಷಿಸ ಬಲ್ಲಂತಹ ಕಣಾದ ಇದ್ದ. ಇಡೀ ವಿಶ್ವವೇ ಒಂದಕ್ಕೊಂದರ ಸಂಬಂಧದಲ್ಲಿ ತನ್ನ ಅಸ್ತಿತ್ವವನ್ನು ಪ್ರತಿಪಾದಿಸುವ ನಿಯಮವನ್ನು ಬುದ್ಧ ಕಂಡುಕೊಂಡ. ವಿಜ್ಞಾನವು ಇಂತಹ ಪ್ರಜ್ಞಾ ಶಾಸ್ತ್ರದಲ್ಲಿ ತನ್ನನ್ನು ಮಿಳಿತಗೊಳಿಸಿಕೊಳ್ಳುವುದು ಈಗ ಅನಿವಾರ್ಯವಾಗಿದೆ. ಆದ್ದರಿಂದ ವಿಜ್ಞಾನ ಎಲ್ಲಾ ಜ್ಞಾನ ಶಾಖೆಗಳನ್ನು ಒಗ್ಗೂಡಿಸಿ ನೋಡುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದೆ. ಇಂತಹ ಸಹಜ ಸಾವಯವ ಸಂಬಂಧದಲ್ಲೇ ಭೂಮಿಯನ್ನು ನೋಡುವುದಾದರೆ ಮಾತ್ರ ನಮಗೆ ಉಳಿಗಾಲ. ನಮ್ಮ ಛಿದ್ರಗೊಂಡ ಮನಸ್ಸಿನಲ್ಲಿ ನಾವು ಒಡೆದುಹೋಗುತ್ತಾ ಭೂಮಿಯನ್ನು ನೋಡುವುದಾದರೆ ಕೇಡನ್ನು ಆಹ್ವಾನಿಸಿದಂತೆ.

**(ಚಾಮರಾಜನಗರದಲ್ಲಿ ಅಂಗಡಿ ಇಟ್ಟುಕೊಂಡು ಪಾತ್ರೆ ವ್ಯಾಪಾರ ಮಾಡುವ ಅಪೂರ್ವ ಡಿಸಿಲ್ವ ಅಲ್ಲಿನ ಸಮಾಜವಾದಿ ಅಧ್ಯಯನ ಕೇಂದ್ರದ ಸ್ಥಾಪಕ ಸದಸ್ಯ. ಪತ್ರಿಕೆಗಳಿಗೆ ಸಾಮಾಜಿಕ ಮತ್ತು ಪರಿಸರ ಕಳಕಳಿಯ ಲೇಖನಗಳನ್ನು ಬರೆಯುವ ಹವ್ಯಾಸಿ ಪತ್ರಕರ್ತರೂ ಆಗಿರುವ ಅವರು ಸ್ಥಳೀಯವಾಗಿ ರಂಗಭೂಮಿ ಚಟುವಟಿಕೆಗಳಲ್ಲೂ ಕ್ರಿಯಾಶೀಲರಾಗಿದ್ದಾರೆ.)**



ಸಮಕಾಲೀನ

# ಕವಲುದಾರಿಯಲ್ಲಿ ಅಂಬೇಡ್ಕರ್ ಪರಂಪರೆ?



ಡಿಸೆಂಬರ್ ಆರು ಡಾ. ಬಿ.ಆರ್. ಅಂಬೇಡ್ಕರ್ ಕೊನೆಯುಸಿರೆಳೆದ ದಿನ. ಅವರ ಪರಿನಿರ್ವಾಣದ ದಿನ. ಆ ದಿನ ನಮ್ಮ ಇತಿಹಾಸದಲ್ಲಿ ಇನ್ನೊಂದು ಘಟನೆಗೂ ಸಾಕ್ಷಿಯಾಗಿದೆ. ಅಂದು ನಮ್ಮ ಹಿಂದೂ ಧರ್ಮ ರಕ್ಷಕರೆಂಬ ಪುಂಡರು ಬಾಬ್ರಿ ಮಸೀದಿಯನ್ನು ಉರುಳಿಸಿದ ದಿನವೂ ಹೌದು. ಅಂದು, ಯಾವುದನ್ನು ನಾವೆಲ್ಲ ಹಿಂದೂ ಧರ್ಮದ ಹೆಮ್ಮೆಯೆಂದು ಹೇಳಿಕೊಳ್ಳುತ್ತಿದ್ದೆವೋ ಆ ಸರ್ವಧರ್ಮ ಸಮಭಾವದ ಪರಿನಿರ್ವಾಣವೂ ಸಂಭವಿಸಿತು. ಈ ಪರಿನಿರ್ವಾಣವನ್ನು ಅಂಬೇಡ್ಕರ್ ಪರಿನಿರ್ವಾಣದ ದಿನದಂದೇ ನಮ್ಮ ಹಿಂದೂ ಧರ್ಮ ರಕ್ಷಕರು ಆರಿಸಿಕೊಂಡದ್ದು ಆಕಸ್ಮಿಕವೇನೂ ಇರಲಾರದು. ಏಕೆಂದರೆ ನಾವು ಯಾವುದನ್ನು ಸ್ಥೂಲವಾಗಿ ಹಿಂದೂ ಧರ್ಮವೆಂದು ಕರೆಯುತ್ತೇವೆಯೋ ಅದರ ದುರಭಿಮಾನಿ ಆವೃತ್ತಿಯ ಎಲ್ಲ ದುಷ್ಟಗುಣಗಳ ಖಂಡನೆ ಮತ್ತು ವಿರೋಧಕ್ಕೆ ಅಂಬೇಡ್ಕರ್ ಪ್ರತೀಕವಾಗಿದ್ದರು. ಅಂದು ನಮ್ಮ ಹಿಂದೂ ಧರ್ಮ ದುರಭಿಮಾನಿಗಳು ಈ ಪ್ರತೀಕದ ಮೇಲೆ ಸೇಡು ತೀರಿಸಿಕೊಂಡ ರೀತಿ ಇದು ಇರಲೂಬಹುದು.




ಅದೇನೇ ಇರಲಿ, ಹಿಂದೂ ಧರ್ಮದ ಈ ದಾರಿ ತಪ್ಪಿದ ಮಕ್ಕಳ ರಾಜಕಾರಣ ಅಲ್ಲಿಗೇ ನಿಲ್ಲಲಿಲ್ಲ. ಈ ರಾಜಕಾರಣದ ಫಲವಾಗಿ ಅಸ್ತಿತ್ವಕ್ಕೆ ಬಂದ ಅವರ ಸರ್ಕಾರ ಈ ರಾಜಕಾರಣದ ಭಾಗವಾಗಿ ನಡೆಸಿದ ಪರಮಾಣು ಸ್ಫೋಟ ಕಾರ್ಯಕ್ರಮಕ್ಕೆ 'ಬುದ್ಧ ನಕ್ಕ' ಎಂದು ಹೆಸರಿಟ್ಟು ಸಂತೋಷ ಪಟ್ಟಿತು. ಬುದ್ಧ, ದಾರಿ ತಪ್ಪಿದ್ದ ಹಿಂದೂ ಧರ್ಮಕ್ಕೆ ಸರಿ ದಾರಿ ತೋರಿದ ಮಹಾತ್ಮ. ಅದರ ಬುಡಕ್ಕೇ ಕೈಹಾಕಿ, ಅದರಲ್ಲಿ ಅಂತರ್ಗತವಾಗಿ ಹೋಗಿದ್ದ ಅಸಮಾನತೆಯನ್ನು ನಿವಾರಿಸಲು ಅನಾತ್ಮವಾದವನ್ನು ಬೋಧಿಸಿದ ಯುಗಪುರುಷ. ಈ ಅಸಮಾನತೆಯ ಅಮಾನುಷ ರೂಪವಾಗಿ ಜಾರಿಗೆ ಬಂದಿದ್ದ ಅಸ್ಪೃಶ್ಯತೆಯ ಬೆಂಕಿಯಲ್ಲಿ ಬೆಂದ ಜನತೆಯ ದನಿಯಾದ ಅಂಬೇಡ್ಕರ್ ಸಹಜವಾಗಿಯೇ ಸಮಾಧಾನ–ಸಾಂತ್ವನಕ್ಕೆ ಆಶ್ರಯಿಸಿದ್ದು ಬುದ್ಧಗುರುವನ್ನು; ಅವನ ಬೌದ್ಧ ಧರ್ಮವನ್ನು. ಹಾಗಾಗಿ ಬುದ್ಧ ಕೂಡ ಆ ಶಠ ಹಿಂದೂವಾದಿಗಳ ಗುರಿಯಾಗಿದ್ದ.

ಡಿಸೆಂಬರ್ ಆರು ಎಂದರೆ ಇದೆಲ್ಲ ನೆನಪಿಗೆ ಬರುತ್ತದೆ. ಬರಬೇಕು. ವಿಶೇಷವಾಗಿ ಇಂದು. ತನ್ನ ಈ ಎರಡು ದುಷ್ಕೃತ್ಯಗಳಿಗಾಗಿ ಈವರೆಗೆ ಕಿಂಚಿತ್ತೂ ಪಶ್ಚಾತ್ತಾಪ ವ್ಯಕ್ತಪಡಿಸದಿರುವ(ಮತ್ತು ಅದರ ಸಮರ್ಥನೆಯೋ ಎಂಬಂತೆ ೨೦೦೨ರಲ್ಲಿ ಗುಜರಾತ್‌ನಲ್ಲಿ ನಡೆದ ಸಾಮೂಹಿಕ ನರಹತ್ಯೆಯ) ರಾಜಕಾರಣದ ದಿಗ್ವಿಜಯದ ಪ್ರತೀಕವಾಗಿ ನರೇಂದ್ರ ಮೋದಿಯವರು ನಮ್ಮ ಪ್ರಧಾನ ಮಂತ್ರಿಯಾಗಿ ಎದುರಾಳಿಯೇ ಇಲ್ಲದ ಬಟಾಬಯಲಿನಲ್ಲಿ ಆಡಳಿತ ನಡೆಸಲಾರಂಭಿಸಿರುವ ಹೊತ್ತಿನಲ್ಲಿ. ಇದೆಲ್ಲ ಹೇಗಾಯಿತು, ಏಕಾಯಿತು ಎಂದು ನಿರ್ಮಮವಾಗಿ ಯೋಚಿಸುವ ಕಾಲವಿದು. ಅಂಬೇಡ್ಕರ್ ನೆಪದಲ್ಲಾದರೂ, ಅಂಬೇಡ್ಕರ್ ಪರಂಪರೆಯನ್ನು ಒರೆಗಲ್ಲಾಗಿ ಇಟ್ಟುಕೊಂಡು.

ಭಾರತ ದೀರ್ಘ ಕಾಲದ ಗುಲಾಮಗಿರಿಯಿಂದ ವಿಮೋಚನೆಗೊಳ್ಳುತ್ತಿದ್ದ ಸಂದರ್ಭದಲ್ಲಿ ಆಧುನಿಕ ಭಾರತದ ಕನಸಿನ ಮೂರು ಎರಕಗಳು ಪ್ರಧಾನವಾಗಿ ರೂಪುಗೊಂಡಿದ್ದವು. ಒಂದು ಗಾಂಧಿಯದ್ದಾದರೆ, ಇನ್ನೊಂದು ಅಂಬೇಡ್ಕರರದ್ದು. ಮತ್ತೊಂದು ಸುಪ್ತವಾಗಿಯೇ ಕ್ರಿಯಾಶೀಲವಾಗಿದ್ದುಕೊಂಡು ಗಾಂಧಿಯ ಜೀವವನ್ನೇ ಬಲಿ ತೆಗೆದುಕೊಂಡ ಸಾವರ್ಕರರದ್ದು. ಗಾಂಧಿ ಭಾರತದ ವಿಮೋಚನೆಯ ರಾಜಕಾರಣದಲ್ಲೇ ಆಧುನಿಕ ಭಾರತದ ಕನಸಿನ ಎರಕವನ್ನೂ ಅಂತರ್ಗತಗೊಳಿಸಿದ್ದರೆ, ಮಿಕ್ಕಿಬ್ಬರೂ ತಂತಮ್ಮದೇ ಸಾಮಾಜಿಕ–ರಾಜಕೀಯ ಕಾರಣಗಳಿಗಾಗಿ ವಿಮೋಚನೆಯ ಪ್ರಕ್ರಿಯೆಯನ್ನೇ ಸಮಸ್ಯಾತ್ಮಕಗೊಳಿಸಿ, ಆ ಸಮಸ್ಯಾತ್ಮಕತೆಯಲ್ಲಿ ಆಧುನಿಕ ಭಾರತದ ಎರಕವನ್ನು ರೂಪಿಸಿದವರು. ಈ ಇಬ್ಬರೂ ಗಾಂಧಿ ದರ್ಶನದ ವಿರೋಧಿಗಳು. ಇಂದು ಸಾವರ್ಕರ್‌ವಾದ ಅಧಿಕಾರದ ಗದ್ದುಗೆ ಏರಿದೆ. ಒಂದು ಸಮಾಧಾನವೆಂದರೆ, ಅದಕ್ಕೆ ಸಾವರ್ಕರ್ ಹೆಸರನ್ನು ಬಹಿರಂಗವಾಗಿ ಹೇಳುವ ಮುಖವಿನ್ನೂ ಮೂಡಿಲ್ಲ. ತನ್ನ ದಿಗ್ವಿಜಯದ ಹಾದಿಯುದ್ದಕ್ಕೂ ಅದು ಬಳಸಿದ್ದು ಸಾರತಃ ಸಾವರ್ಕರ್ ಕನಸಿನ ಬಲಿಷ್ಠ ಹಿಂದೂ ರಾಷ್ಟ್ರದ ಕೇಂದ್ರದಲ್ಲಿದ್ದ ಆಧುನಿಕ ಅಭಿವೃದ್ಧಿಯ ಬೀಜಮಂತ್ರವನ್ನೇ. ಆದರೂ ಇಂದು ಅದು ಗಾಂಧಿ–ಅಂಬೇಡ್ಕರ್ ಪರಂಪರೆಗಳ ಪರಿಭಾಷೆಯಲ್ಲೇ ಮಾತಾಡುವ ಅನಿವಾರ್ಯತೆಗೆ ಸಿಕ್ಕಿದ್ದರೆ ಅದಕ್ಕೆ ಕಾರಣ, ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ಮೂಡಿದ ಜಾಗೃತ ಪ್ರಜ್ಞೆಯನ್ನು ಅದಕ್ಕೆ ಅಷ್ಟು ಸುಲಭವಾಗಿ ಅಳಿಸಿಹಾಕಲು ಸಾಧ್ಯವಿಲ್ಲ. ಈ ಪ್ರಜ್ಞೆಯಲ್ಲಿ ಸಾವರ್ಕರ್ ಮತ್ತವರ ಸೈದ್ಧಾತಿಕ ಗೆಳೆಯರಿಗೆ ಸ್ಥಾನವಿಲ್ಲ. ಏಕೆಂದರೆ, ಇವರೆಲ್ಲ ಈ ಹೋರಾಟ ಮುಖ್ಯ ವಾಹಿನಿಯಿಂದ ಗೈರುಹಾಜರಾಗಿದ್ದರು.

ಆದರೆ ಈ ಗಾಂಧಿ–ಅಂಬೇಡ್ಕರ್ ಪರಿಭಾಷೆಯ ಮರೆಯಲ್ಲಿ ಇಂದಿನ ಪ್ರಭುತ್ವ ಕೈಗೆತ್ತಿಕೊಳ್ಳುವ ಸೂಚನೆ ನೀಡುತ್ತಿರುವ ಕಾರ್ಯಕ್ರಮಗಳೆಲ್ಲವೂ ಸಾವರ್ಕರ್‌ವಾದತ್ತಲೇ ಬೊಟ್ಟು ಮಾಡುತ್ತಿವೆ. ತಾತ್ವಿಕ ನೆಲೆಯಲ್ಲಿ ಹೇಳುವುದಾದರೆ, ಸರ್ದಾರ್ ಪಟೇಲರನ್ನು ಗಾಂಧಿ ಪರಂಪರೆಯಿಂದ ಕಿತ್ತು ನೆಹರೂ ವಿರುದ್ಧ ನಿಲ್ಲಿಸಿ ವೈಭವೀಕರಿಸುತ್ತಿರುವ ಪರಿಯನ್ನು ನೋಡಿರಿ. ಇದನ್ನು ಗಾಂಧಿ ತನ್ನ ರಾಜಕೀಯ ಉತ್ತರಾಧಿಕಾರಿಯನ್ನಾಗಿ ಪಟೇಲ್‌ಗೆ ಬದಲಾಗಿ ನೆಹರೂ ಕಡೆಗೇ ಏಕೆ ಹೆಚ್ಚು ಒಲವು ತೋರಿದರು ಎಂಬುದರ ವಿವೇಚನೆಯ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಇದರೊಂದಿಗೇ, ಈ ಮೊದಲು ಕಾಂಗ್ರೆಸ್ಸಿನೊಳಗೇ ಇದ್ದು ತಮ್ಮ ಪ್ರಾಣಗಳನ್ನೇ ಒತ್ತೆಯಿಟ್ಟ ಪ್ರಾಮಾಣಿಕ ಹೋರಾಟಗಳು ಮತ್ತು ನವೀನ ಚಿಂತನೆಗಳ ಮೂಲಕ ಗಾಂಧಿ ಮನಸ್ಸನ್ನು ಗೆದ್ದು ಅವರನ್ನು ತೀವ್ರವಾಗಿ ಪ್ರಭಾವಿಸತೊಡಗಿದ್ದ ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ್ ನಾರಾಯಣ, ರಾಮಮನೋಹರ ಲೋಹಿಯಾ, ಅಚ್ಯುತ ಪಟವರ್ಧನ್ ಮುಂತಾದ ಸಮಾಜವಾದಿಗಳನ್ನು ಬಗ್ಗುಬಡಿದು ಅವರನ್ನು ಕಾಂಗ್ರೆಸ್ಸಿನಿಂದ ಹೊರಹಾಕಲು ಪಟೇಲರು(ಬಾಬು ರಾಜೇಂದ್ರ ಪ್ರಸಾದರೊಂದಿಗೆ ಸೇರಿ) ನಡೆಸಿದ ಪಕ್ಷ ರಾಜಕಾರಣವನ್ನೂ ಗಮನಿಸಬೇಕು. (ಗಾಂಧಿ ವಿರುದ್ಧ ನಿಂತ ಕಾರಣದಿಂದಾಗಿ ಕಾಂಗ್ರೆಸ್ ರಾಜಕಾರಣದೊಳಕ್ಕೆ ಪ್ರವೇಶಿಸದ ಅಂಬೇಡ್ಕರ್, ಪಟೇಲರಿಂದ ಬಚಾವಾದರೆಂದೇ ಹೇಳಬೇಕು!) ಹಾಗೇ ಮೋದಿ ಗಾಂಧಿ ಜಯಂತಿಯನ್ನು ಸ್ವಚ್ಛತಾ ದಿನವಾಗಿ ಆಚರಿಸಲು ಕರೆನೀಡಿ ಅವರ ಸಮಗ್ರ ಚಿಂತನೆಗಳ ಪ್ರಸ್ತುತತೆಯನ್ನೇ ಹಿನ್ನೆಲೆಗೆ ಸರಿಸುವ ಪ್ರಯತ್ನ ಮಾಡುತ್ತಿರುವುದನ್ನೂ ನೋಡಿರಿ. ಇತಿಹಾಸವನ್ನು ಪುರಾಣೀಕರಿಸಲು ಅದು ಹಾಕಿಕೊಂಡಿರುವ ಪಠ್ಯಕ್ರಮ ಪರಿಷ್ಕರಣೆಯ ಯೋಜನೆಯನ್ನು ನೋಡಿರಿ. ಚಾಣಾಕ್ಷ ಮೆದುಳಿಗಳು ಹಿನ್ನೆಲೆಯಲ್ಲೇ ಕೆಲಸ ಮಾಡುವ ಈ ರಾಜಕಾರಣದ ಮಹತ್ವಾಕಾಂಕ್ಷೆ ದೊಡ್ಡದು. ಅದು ತನ್ನದಲ್ಲದ ಇತಿಹಾಸದ ಎಲ್ಲವನ್ನೂ, ಎಲ್ಲರನ್ನೂ–ಗಾಂಧಿ, ನೆಹರೂ, ಪಟೇಲ್, ಜೆಪಿ, ಲೋಹಿಯಾ ಎಲ್ಲರನೂ– ಕಬಳಿಸಿ ತನ್ನದನ್ನಾಗಿ ಮಾಡಿಕೊಂಡಲ್ಲಿ ಆನಂತರ ತನ್ನ ಇತಿಹಾಸದ ವಿಸ್ತರಣೆಯನ್ನು ಸುಲಭವಾಗಿಯೂ ಸುಕ್ಷೇಮವಾಗಿಯೂ ಮಾಡಿಕೊಳ್ಳಬಹುದೆಂದು ಅದಕ್ಕೆ ಗೊತ್ತಿದೆ.

ಇದಕ್ಕೆಲ್ಲ ಗಾಂಧಿ ಪರಂಪರೆ ಭ್ರಷ್ಟಗೊಂಡು ಅವನತಿಗೊಂಡಿದ್ದೇ ಕಾರಣ ಎಂದು ವಾದಿಸಲು ಅವಕಾಶವಿದೆ. ಆದರೆ ಅದರೊಂದಿಗೇ, ಭಾರತದ ಇತಿಹಾಸದ ಕಟು ವಿಮರ್ಶೆ ಮಾಡಿದ ಅಂಬೇಡ್ಕರ್ ಪರಂಪರೆ ಇಂದು ಏನಾಗಿದೆ ಎಂದು ಕೇಳಿಕೊಳ್ಳುವ ಅಗತ್ಯವೂ ಇದೆ. ಅಂಬೇಡ್ಕರ್ ಪ್ರತಿನಿಧಿಸುವ ಸಮುದಾಯಗಳ




ಅತ್ಯಂತ ಹೆಚ್ಚು ಜನಪ್ರತಿನಿಧಿಗಳು ಇಂದು ಇರುವುದು ಬಿಜೆಪಿಯಲ್ಲಿ ಏಕೆ ಎಂದೂ ಕೇಳಿಕೊಳ್ಳಬೇಕಿದೆ. ಅಂಬೇಡ್ಕರ್‌ರ ರಾಜಕೀಯ ಪರಂಪರೆ ಅಧಿಕಾರ ರಾಜಕಾರಣದ ವಿಷಯದಲ್ಲಿ ಎಂದೂ ಪ್ರಬಲವಾಗಿರಲಿಲ್ಲ ಎಂಬುದನ್ನು (ಏಕೆ ಎಂದು ಕೇಳುತ್ತಲೇ) ಒಪ್ಪಿಕೊಂಡರೂ ಅಂಬೇಡ್ಕರ್ ಪರಂಪರೆಯ ಹೆಚ್ಚೆಚ್ಚು ಅನುಯಾಯಿಗಳು ಏಕೆ–ಅದೂ ತಾತ್ವಿಕ ನೆಲೆಯಲ್ಲಿ ಕಟ್ಟಾವಾದಿಗಳಾಗಿದ್ದವರೇ–ಸುಲಭವಾಗಿ ಸಾವರ್ಕರ್ ಪರಂಪರೆಯತ್ತ ಜಾರುತ್ತಿದ್ದಾರೆ ಎಂದೂ ಇಂದು ಕೇಳಿಕೊಳ್ಳಬೇಕಿದೆ. ಇದಕ್ಕೆ ನಾಮದೇವ ಧಸಾಳ್, ರಾಮದಾಸ್ ಅಥವಳೆ, ಉದಿತ್‌ರಾಜ್, ರಾಂವಿಲಾಸ್ ಪಾಸ್ವಾನ್ ದೊಡ್ಡ ಹೆಸರುಗಳ ನೇರ ಉದಾಹರಣೆಗಳಾದರೆ, (ನಮ್ಮವರೇ ಆದ ದಿ. ಹಾವನೂರ್ ಇದರಲ್ಲಿ ಮೊದಲಿಗರು) ಮಾಯಾವತಿ ರಾಜಕಾರಣ, ಚಂದ್ರಭಾನು ಪ್ರಸಾದ್‌ರ (ತಾತ್ವಿಕ) ವಿಶ್ಲೇಷಣೆಗಳು ಇದಕ್ಕೆ ವಕ್ರ ಉದಾಹರಣೆಗಳು. ಇವಕ್ಕೆ ಹೋಲಿಸಿದರೆ, ಸಮಾಜವಾದಿ ಪರಂಪರೆಯನ್ನೂ ಒಳಗೊಂಡಂತೆ ಗಾಂಧಿ ಪರಂಪರೆಯ ಅನುಯಾಯಿಗಳು–ಅವರೆಷ್ಟೇ ನಿಷ್ಕ್ರಿಯತೆಯ, ಭ್ರಷ್ಟತೆಯ ಆರೋಪ ಹೊತ್ತಿದ್ದರೂ–ಇಂತಹ ಧೃವಾಂತರ ಚಲನೆಗೆ ಸಿಕ್ಕಿಲ್ಲವೆಂದೇ ಹೇಳಬೇಕು. ಇಂದಿನ ಮೋದಿ ಛಾಪಿನ ಸಾವರ್ಕರ್‌ವಾದಿ ರಾಜಕಾರಣಕ್ಕೆ ಗಂಭೀರ ಪ್ರತಿರೋಧವನ್ನು ಒಡ್ಡುತ್ತಿರುವುದು ಈ ಗಾಂಧಿ ಪರಂಪರೆಯೇ.

ಇದು ಗಾಂಧಿ ಚಿಂತನೆ ಸರಿಯೇ, ಅಂಬೇಡ್ಕರ್ ಚಿಂತನೆ ಸರಿಯೇ ಎಂಬ ಸರಳೀಕೃತ ಪ್ರಶ್ನೆಯನ್ನು ಮೀರಿದ ಪ್ರಶ್ನೆ. ಹಾಗಾಗಿ ಮುಖ್ಯ ಪ್ರಶ್ನೆ: ಏಕೆ ಹೀಗಾಯಿತು? ದೇಶ ಗಾಂಧಿ–ಅಂಬೇಡ್ಕರರ ಗೈರುಹಾಜರಿಯನ್ನು ಉದಾಸೀನದಿಂದ ನೋಡುವಂತಹ ಮನೋಭೂಮಿಕೆಯನ್ನು ತಲುಪಲು ಏನು ಕಾರಣ? ಸಾವರ್ಕರ್ ಚಿಂತನೆಗೆ ಸಾಮಾನ್ಯ ವಿರೋಧಿಗಳಾಗಿದ್ದ ಗಾಂಧಿ ಮತ್ತು ಅಂಬೇಡ್ಕರ್ ನಡುವಣ ಅಂತರ್‌ವಿರೋಧಗಳನ್ನು ಸಕ್ಷಮವಾಗಿ ನಿವಾರಿಸಲಾಗದ ಕಳೆದ 60 ವರ್ಷಗಳ ಸೆಕ್ಯುಲರ್ ಮತ್ತು ಎಡಪಂಥೀಯ(ರ‍್ಯಾಡಿಕಲ್ ಎಂಬರ್ಥದಲ್ಲಿ) ರಾಜಕಾರಣದ ವೈಫಲ್ಯವೇ, ಅದರ ಜಡತೆಯೇ, ಅದರ ಪಾರಿಭಾಷಿಕತೆಯ ಗೊಂದಲಗಳೇ ಅಥವಾ ಬರಿಯ ಅಧಿಕಾರ ಮದ ಇದಕ್ಕೆ ಕಾರಣವೇ? ಇಂದು ಅಂಬೇಡ್ಕರ್ ಚಿಂತನೆಯ ಬಗ್ಗೆ ಬೌದ್ಧಿಕ ವಲಯದಲ್ಲಿ ಆಸಕ್ತಿ ಹೆಚ್ಚುತ್ತಿದೆ. ಅದೇ ಸಮಯದಲ್ಲಿ ದಲಿತೇತರ ಜನಸಾಮಾನ್ಯ ವರ್ಗದಲ್ಲಿ ಅನಾದರ–ಅಸಹನೆ ಹೆಚ್ಚುತ್ತಿದೆ. ಇದನ್ನು ಒಪ್ಪದವರು ಅಥವಾ ಇದಕ್ಕೆ ಕಾರಣ ದಲಿತರ ಉನ್ನತಿ ಕುರಿತ ಅಸಹನೆ ಎನ್ನುವವರು ಆತ್ಮವಂಚನೆಯನ್ನಷ್ಟೇ ಮಾಡಿಕೊಳ್ಳುತ್ತಿರುತ್ತಾರೆ. ಇದು ಗಾಂಧಿ ಮತ್ತು ಅಂಬೇಡ್ಕರ್‌ರ ಪರಂಪರೆಗಳಿಗಷ್ಟೇ ಅಲ್ಲ, ಕಳೆದ ೬೦ ವರ್ಷಗಳ ಪ್ರಗತಿಪರ ರಾಜಕಾರಣಕ್ಕೆ ಮಾಡುವ ಅವಮಾನ.

ಆಳದ ಸಾಮಾಜಿಕ ಪ್ರತಿಕ್ರಿಯೆಗಳು ಎಂದೂ ಮೇಲ್ಮೈ ಭಾವನೆಗಳಿಂದ ಹುಟ್ಟುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ಕಟುನಿಷ್ಠುರ (ಆತ್ಮ)ಶೋಧನೆ ಅಗತ್ಯವಾಗಿರುತ್ತದೆ. ಅಂತಹ ಕಾಲ ಈಗ ಬಂದಿದೆ ಎನಿಸುತ್ತಿದೆ. ಈ ಶೋಧನೆ ಎದುರುಗೊಳ್ಳಬೇಕಾದ ಮುಖ್ಯ ಪ್ರಶ್ನೆ, ಅಂಬೇಡ್ಕರ್‌ರನ್ನು ಗಾಂಧಿಯ ಎರಕದೊಳಕ್ಕೆ ಅಳವಡಿಸಲು ಸಾಧ್ಯವಾಗಿದ್ದರೆ ಈ ದುರಂತ ಸಂಭವಿಸುತ್ತಿತ್ತೇ? ಇದನ್ನು ಅಸಂಬದ್ಧ, ಭೋಳೆ ಎಂದೆಲ್ಲ ಅನ್ನುವರು ಇದ್ದಾರೆಂಬುದು ಗೊತ್ತಿದ್ದರೂ ನಾನು ಈ ಮಾತನ್ನು ಹೇಳುತ್ತಿರುವೆ. ಏಕೆಂದರೆ, ಸಾಮಾಜಿಕ ಕಳಕಳಿಯ ಸಾಮಾನ್ಯ ಉದ್ದೇಶವಿದ್ದ ಸಮಾಜ ವಿಜ್ಞಾನಿಗಳು, ಇತಿಹಾಸ ತಜ್ಞರು ರಾಜಕೀಯ ಚಿಂತಕರು ಮತ್ತು ಚಳುವಳಿಕಾರರು ಒಟ್ಟಿಗೆ ಸೇರಿ ಮಾಡಬಹುದಾದ ಕೆಲಸ ಇದಾಗಿದ್ದು, ಇದು ಸಾಧ್ಯ ಎಂಬ ಬೌದ್ಧಿಕ ವಾತಾವರಣ ಮತ್ತು ಕಲ್ಪನೆಯೇ ಇಲ್ಲದ ಕಾರಣದಿಂದಲೇ ಅದು ಅಸಂಬದ್ಧವಾಗಿ ಕಾಣುವುದು ಎಂದು ನನಗೆ ಅನ್ನಿಸುತ್ತಿದೆ. ಬದಲಿಗೆ ಇಲ್ಲಿ ಆದದ್ದು, ಈ ಎಲ್ಲರೂ ತಂತಮ್ಮ ಹುಲ್ಲುಗಾವಲುಗಳಲ್ಲಿ ತಮ್ಮ ಅನುಕೂಲ ಮತ್ತು ಉದ್ದೇಶಗಳಿಗೆ ತಕ್ಕಂತೆ ಮೇದು ಹೋದರಷ್ಟೆ. ಇವರೆಲ್ಲರನ್ನೂ ಕೂಡಿಸಬಲ್ಲವರಾಗಿದ್ದ ಗಾಂಧಿಯ **spirit of union** ಕಾಣೆಯಾಗಿ ಅದರ ಜಾಗದಲ್ಲಿ ನೆಹ್ರೂರ **spirit of excellence** ಬಂದದ್ದೇ ಇದಕ್ಕೆ ಕಾರಣವಿರಬಹುದು. ಇದರ ಪರಿಣಾಮವೆಂದರೆ, ಇಂದು ಗಾಂಧಿ, ಅಂಬೇಡ್ಕರ್, ಪಟೇಲ್, ನೆಹ್ರೂ ಎಲ್ಲರೂ ಸಾವರ್ಕರ್ ಎರಕದಲ್ಲಿ ಅಳವಡಿಕೆಯಾಗುವ (ಕಣ್ಕಟ್ಟಿನ)ಪರಿಸ್ಥಿತಿಯನ್ನು ಎದುರಿಸಬೇಕಿದೆ.

ನಾನು ಮಹಾರಾಷ್ಟ್ರದದ ದಲಿತ ಚಳುವಳಿಯ ಬಗ್ಗೆ ಅಧಿಕಾರಯುತವಾಗಿ ಮಾತನಾಡಲಾರೆ. ಆದರೆ ಕರ್ನಾಟಕದ ದಲಿತ ಚಳುವಳಿಯೊಂದಿಗೆ ಆರಂಭದ ದಿನಗಳಿಂದಲೂ ಸಾವಯವ ಸಂಪರ್ಕವಿರಿಸಿಕೊಂಡಿದ್ದ ನಾನು ಹೇಳಬಹುದಾದ ಮಾತೆಂದರೆ, ಸಮಾಜವಾದಿ ಚಳುವಳಿಯ ಮೂಸೆಯಲ್ಲಿ ಲೋಹಿಯಾ ಚಿಂತನೆಗಳಿಂದ ಪ್ರಭಾವಿತವಾಗಿ ಹುಟ್ಟಿದ ಕರ್ನಾಟಕದ ದಲಿತ ಚಳುವಳಿ, ಅಂಬೇಡ್ಕರ್–ಲೋಹಿಯಾ ಎಲ್ಲರೂ ಗಾಂಧಿ ಎರಕದಲ್ಲೇ ಹೊಸ ರೂಪ ಪಡೆಯಬೇಕು ಮತ್ತು ಆ ಮೂಲಕ ಗಾಂಧಿ ಕೂಡ ಹೊಸ ರೂಪ ಪಡೆಯುವರು ಎಂಬ ಅರಿವಿನೊಂದಿಗೇ ತನ್ನ ಹೋರಾಟವನ್ನು ಅರಂಭಿಸಿತು. ಆಗ ದಲಿತ ಚಳುವಳಿ ಸಮಾಜದ ಎಲ್ಲ ವರ್ಗಗಳ ಕಣ್ಣಲ್ಲಿ ಗೌರವಾನ್ವಿತವಾಗಿತ್ತು. ಆದರೆ ಅದು ತಾನೇ ಅಧಿಕಾರ ರಾಜಕಾರಣ ಮಾಡುವ ಶಕ್ತಿ ಗಳಿಸುವ ಮುನ್ನವೇ ಅವಸರದಲ್ಲಿ, ಇತರರ ಅಧಿಕಾರ ರಾಜಕಾರಣದ ಗೊತ್ತಿದ್ದೋ ಗೊತ್ತಿಲ್ಲದೆಯೋ ದಾಳವಾಗಿ ಬಲಿಯಾಯಿತು. ಇದೇ ನನ್ನ ಪ್ರಕಾರ ರೈತ ಮತ್ತು ಇತರ ಸಾಂಸ್ಕೃತಿಕ ಚಳುವಳಿಗಳೊಂದಿಗೆ ಸೇರಿ ತಾನೇ ಒಂದು ಪ್ರಬಲ ರಾಜಕೀಯ ಶಕ್ತಿಯಾಗುವ ಚಿನ್ನದ ಅವಕಾಶವನ್ನು ಕಳೆದುಕೊಳ್ಳಲು ಕಾರಣವಾಯಿತು.

ಅಲ್ಲಿಂದಾಚೆನೆಲ್ಲದವೂ ಇತಿಹಾಸ. ಅದನ್ನು ಬಹುಜನ ಸಮಾಜ ಪಕ್ಷದ ಘಾತುಕ ರಾಜಕಾರಣ ಒಂದು ಕಡೆಯಿಂದ ತಿನ್ನ ತೊಡಗಿದರೆ, ಅಧಿಕಾರ ರಾಜಕಾರಣದೊಡನೆ ನಡೆಸಿದ ಅಲ್ಪಾವಧಿ ಸಖ್ಯದ ರುಚಿ ಹುಟ್ಟಿಸಿದ ಹಪಾಹಪಿ ಇನ್ನೊಂದು ಕಡೆಯಿಂದ ತಿನ್ನತೊಡಗಿ, ದಲಿತ ಚಳುವಳಿ ವಿಶ್ವಾಸಾರ್ಹ ನಾಯಕತ್ವವಿಲ್ಲದೇ ಛಿದ್ರವಾಗಿ ಪ್ರಾದೇಶಿಕ ಪಾಳೇಗಾರರಂತಿರುವ ನಾಯಕಮಣಿಗಳ ಕೈಯೊಳಗಿನ ದೊಡ್ಡ ದಂಧೆಯಾಗಿ ಮಾರ್ಪಾಟಾಯಿತು. ಇಂದು ಈ ನಾಯಕಮಣಿಗಳೆಲ್ಲ ದಲಿತ ಮಂತ್ರಿಮಹೋದಯರ ದೊಡ್ಡ ದೇಣಿಗೆಗಳಲ್ಲಿ ಭರ್ಜರಿ ಸಮ್ಮೇಳನಗಳನ್ನು ನಡೆಸಿಕೊಂಡು ತಮಗೆ ತಾವೇ ಪ್ರಶಸ್ತಿಗಳನ್ನು ಕೊಟ್ಟುಕೊಳ್ಳುವ ಸ್ಥಿತಿ ತಲುಪಿದ್ದಾರೆ. ಇನ್ನು, ದಲಿತ ವಿಶಿಷ್ಟ ಸಮಸ್ಯೆಗಳ ಗುರುತಿಸುವಿಕೆ, ಅಧ್ಯಯನ, ಚಳುವಳಿ, ಹಕ್ಕೊತ್ತಾಯಗಳ ಸ್ಪಷ್ಟ ಅರಿವಾದರೂ ಎಲ್ಲಿ ಉಳಿಬಲ್ಲುದು?(ಮಹಾರಾಷ್ಟ್ರದ ದಲಿತ ಚಳುವಳಿಯ ಕಥೆ ಇನ್ನೂ ಕೆಟ್ಟದಾಗಿದೆ ಎಂದು ಅಂಬೇಡ್ಕರ್ ವಿದ್ವಾಂಸ ಆನಂದ್ ತೇಲ್ತುಂಬ್ಡೆ ಹೇಳುತ್ತಾರೆ) ಅಂಬೇಡ್ಕರ್ ವೈಭವೀಕರಣದ ಪುಸ್ತಕಗಳು ದಂಡಿ ದಂಡಿಯಾಗಿ ಬಂದಿದ್ದರೂ ಕರ್ನಾಟಕದಲ್ಲಿ ದಲಿತ ಚಿಂತನೆ ಎಂಬ ಶಬ್ದ ಕೇಳಿ ಎಷ್ಟು ವರ್ಷವಾಯಿತು? ಈ ರೋಗದ ದೊಡ್ಡ ಲಕ್ಷಣವೆಂದರೆ, ಅಂಬೇಡ್ಕರ್ ಚಿಂತನೆಯ ಬಗ್ಗೆ ಯಾರಾದರೂ ಒಂದು ವಿರೋಧದ ಅಥವಾ ಒಂದು ವಿಮರ್ಶೆಯ ಮಾತಾಡಿದರೂ ಅದನ್ನು ಸಹಿಸದಿರುವುದು. (ಅದು ಕೆಲವೆಡೆ ಪುಂಡಾಟಿಕೆಯ ಮೂಲಕವೂ ವ್ಯಕ್ತವಾಗತೊಡಗಿದೆ.) ಇದಕ್ಕಾಗಿ ಅವರನ್ನು ದೂಷಿಸಿ ಫಲವಿಲ್ಲ. ಏಕೆಂದರೆ ಇಂದು ಎಲ್ಲರೂ ಮಾಡುವುದನ್ನೇ ಅವರು ಮಾಡುತ್ತಿದ್ದಾರೆ.

ಇದೇ ನಿಜವಾದ ಸತ್ಯ. ಮುಖ್ಯ ಸತ್ಯ ಕೂಡ : ದಲಿತ ಚಳುವಳಿ ಎಲ್ಲರೂ ಮಾಡುವುದನ್ನೇ ಮಾಡಬೇಕಾದ ಪರಿಸ್ಥಿತಿಗೆ ಸಿಕ್ಕಿದೆ. ಅದಕ್ಕೊಂದು ವಿಶೇಷ ಜವಾಬ್ದಾರಿ ಇದೆ ಎಂಬ ಅರಿವೇ ಏಕೆ ಕಾಣೆಯಾಯಿತು? ಈ ಪ್ರಶ್ನೆ ಅದನ್ನು ಅಧಿಕಾರ ರಾಜಕಾರಣದ ಸಖ್ಯ ಬೆಳೆಸುವಾಗಲೇ ಕಾಡಬೇಕಿತ್ತು. ಕಾಡಲಿಲ್ಲ. ಅದಕ್ಕೆ ಮುಖ್ಯ ಕಾರಣ, ಗಾಂಧಿ–ಅಂಬೇಡ್ಕರ್ ಸಮೀಕರಣ ಒಂದು ಸಮತೋಲನಕ್ಕೆ ಬರುವ ಮುನ್ನವೇ ಇತರ–ಈ ಇಬ್ಬರಿಗೂ ಅನ್ಯವೆನಿಸುವ–ಪ್ರಭಾವಗಳಿಗೆ ಸಿಕ್ಕಿ, ಅದು ನಿಧಾನವಾಗಿ ಅಂಬೇಡ್ಕರ್ ಗಾಂಧಿ ಇಬ್ಬರನ್ನೂ ಕಳೆದುಕೊಳ್ಳಲಾರಂಭಿಸಿದ್ದು. ಅಂಬೇಡ್ಕರ್ ಬರೀ ಲಾಂಛನವಾಗಿ, ಕೂಗುಮಾರಿತನದ ಪ್ರತೀಕವಾಗಿ ಹೋದರೆ, ಗಾಂಧಿ ಈ ಕೂಗುಮಾರಿಗಳ ಸಂತೆಯಲ್ಲಿ ಉಳಿಯದಾದರು. ಅವರಾಗಿ ಅವರೇ ಹಿಂದಕ್ಕೆ ಸರಿದರು.

ಇಲ್ಲಿ ದಲಿತ ಚಳುವಳಿ ಅಂಬೇಡ್ಕರರನ್ನು ಕಳೆದುಕೊಂಡಿದ್ದು ಎಂದರೆ, ಅದು ತನ್ನ ಜಾತಿವಿನಾಶ ಸಿದ್ಧಾಂತ ಮತ್ತು ಕಾರ್ಯಕ್ರಮಗಳನ್ನು ಕೈಬಿಟ್ಟದ್ದು. ಅದು ಹಾಗೆ ಕೈಬಿಡದಿದ್ದರೆ, ಅವರ ಗಾಂಧಿ ಅಂಬೇಡ್ಕರರ ಗಾಂಧಿಯಾಗಿ ಮರ್ಪಾಡಾಗುತ್ತಿದ್ದರು. ಪ್ರಶ್ನೆ ಈಗ': ದಲಿತ ಚಳುವಳಿ ಜಾತಿ ವಿನಾಶವನ್ನೇಕೆ ಕೈಬಿಟ್ಟಿತು? ಅಧಿಕಾರ ರಾಜಕಾರಣದ ಆತುರ ತಾನೇನು, ತಾನೇಕೆ ಹುಟ್ಟಿಕೊಂಡೆ ಎಂಬುದನ್ನೇ (ಮೈ)ಮರೆಸಿತು. ಈ ವಿಸ್ಮೃತಿಗೆ ಕಾರಣ, ಅಂಬೇಡ್ಕರ್–ಗಾಂಧಿ ಸಮೀಕರಣವನ್ನು ಆಧುನಿಕತೆ ಮತ್ತು ಅದರ ಆಮಿಷಗಳ ಬಗ್ಗೆ ಗಾಂಧಿ ಮಾಡಿದ್ದ ಟೀಕೆಯಿಂದ ಸಮತೋಲನಗೊಳಿಸದೇ ಹೋದದ್ದು. ಇದಕ್ಕೆ ಮತ್ತೆ ಕಾರಣ, ಅಂಬೇಡ್ಕರ್ ವಸಾಹತುಶಾಹಿ ಆಧುನಿಕತೆಯನ್ನು ತಮ್ಮ ವಿಮೋಚನೆಗೆ ಒದಗಿರುವ ಸಾಧನ ಎಂಬ ಅರಿವಿನಾಚೆಗೆ ನೋಡಲು (ಬಹುಶಃ ಗಾಂಧಿ ವಿರೋಧದ ಉದ್ವೇಗದಲ್ಲಿ) ನಿರಾಕರಿಸಿದ್ದು. ಹೀಗಾಗಿ ಇಂದು ದಲಿತ ಎಂಬ ಶಬ್ದವೇ, ಅಂಬೇಡ್ಕರ್ ಎಂಬ ಹೆಸರೇ ಒಂದು ಪಟ್ಟಭದ್ರ ಹಿತಾಸಕ್ತಿಯಾಗಿ ಸಾಮಾನ್ಯ ಜನರ ಕಣ್ಣಿಗೆ ಕಾಣುವಂತಾಗಿದೆ. ಇದು ನಿಜವಾದ ದುರಂತ. ಹಾಗಾಗಿ ಈ ಕಾಣುವಿಕೆ ನಿಜವಾಗಿ ಸತ್ಯವಲ್ಲ ಎಂಬುದನ್ನು ತಮ್ಮ ಮಾತು ಮತ್ತು ಕೃತಿಗಳ ಮೂಲಕ ಸಾಬೀತು ಮಾಡುವ ಸವಾಲು ಇಂದು ದಲಿತ ನಾಯಕರ ಮುಂದಿದೆ.

ಈ ಎಲ್ಲ ಹಿನ್ನೆಲೆಯೊಂದಿಗೆ ಈ ಸಂಬಂಧವಾದ ಎರಡು ವಿಶೇಷ ಲೇಖನಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಒಂದು ನಮ್ಮನಡುವಿನ ಮುಖ್ಯ ಚಿಂತಕರಲ್ಲೊಬ್ಬರಾದ ಡಾ. ರಾಜೇಂದ್ರ ಚೆನ್ನಿಯವರದ್ದು. ಇನ್ನೊಂದು ಮಾಜಿ ಐ.ಎ.ಎಸ್. ಅಧಿಕಾರಿ ಹಾಗೂ ಖ್ಯಾತ ಸಾಮಾಜಿಕ ಕಾರ್ಯಕರ್ತ ಹರ್ಷ ಮಂದರ್ ಅವರದ್ದು. ಈ ಲೇಖನಗಳ ಬಗ್ಗೆ ಒಂದು ಮಾತು ಹೇಳಲೇಬೇಕು. ಈ ಇಬ್ಬರೂ ಗಾಂಧಿ ಕೊನೆವರೆಗೂ ಜಾತಿ ಪದ್ಧತಿಯನ್ನು ಸಮರ್ಥಿಸುತ್ತಿದ್ದರು ಎಂದು ನಂಬಿ ಬರೆದಿದ್ದಾರೆ. ಇದು ಸತ್ಯ ಸಂಗತಿಯಲ್ಲ ಎಂದಷ್ಟೇ ಇಲ್ಲಿ ಹೇಳಿ, ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇನೆ. –ಸಂಪಾದಕ.

# ಅಂಬೇಡ್ಕರ್–ಅಂಬೇಡ್ಕರ್‌ವಾದ ಮತ್ತು ಅಂಬೇಡ್ಕರ್‌ವಾದಿಗಳು...

–ರಾಜೇಂದ್ರ ಚೆನ್ನಿ


ಅಂಬೇಡ್ಕರ್‌ವಾದವು ಸ್ವಾತಂತ್ರೋತ್ತರ ಸನ್ನಿವೇಶದಲ್ಲಿ ಪಡೆದುಕೊಂಡ ಸ್ವರೂಪ ಹಾಗೂ ಅದರ ಯಶಸ್ಸಿನ ಬಗ್ಗೆ ಚರ್ಚೆ ಮಾಡುವ ವಿದ್ವಾಂಸರು ಅವರ ಜೀವಿತಕಾಲದಲ್ಲಿಯೇ ಅಂಬೇಡ್ಕರ್‌ವಾದವು ಪಡೆದುಕೊಂಡ ವಿಭಿನ್ನ ರೂಪಗಳನ್ನು ಚರ್ಚಿಸಿದ್ದಾರೆ. ಸ್ಪಷ್ಟವಾಗಿ ಕಾಣುವಂತೆ ಅಂಬೇಡ್ಕರ್ ಅವರ ವಾದ(ಗಳು) ಏಕಕಾಲಕ್ಕೆ ಅನೇಕ ಮಾದರಿಗಳನ್ನು ಮುಂದಿಟ್ಟಿತ್ತು. ಒಂದು ಕಡೆಗೆ ಸಮಾನತೆಯನ್ನು ಒಪ್ಪಿಕೊಳ್ಳುವ ಪ್ರಜಾಪ್ರಭುತ್ವವನ್ನು ರೂಪಿಸಬಹುದಾದ ಸಂವಿಧಾನದ ಮೂಲಕ ದಲಿತರ ಹಕ್ಕುಗಳನ್ನು ಸಂರಕ್ಷಿಸುವ ಪ್ರಯತ್ನ. ಇದಕ್ಕೆ ನೇರವಾಗಿ ಸಂಬಂಧಿಸಿದಂತೆ ಮೀಸಲಾತಿಯ ಮೂಲಕ ದಲಿತ ವರ್ಗಗಳಿಗೆ ಶಿಕ್ಷಣ ಹಾಗೂ ಉದ್ಯೋಗಗಳು ಲಭಿಸುವಂತೆ ಮಾಡಿ ಅವುಗಳ ಮೂಲಕ ಸಮಾನತೆಯನ್ನು ಸಾಧಿಸುವ ಪ್ರಯತ್ನವೂ ಇತ್ತು. ಈ ಮಾದರಿಯನ್ನು ಮುಂದಿಡುವಾಗಲೇ ಸಾಂಪ್ರದಾಯಿಕವಾದ ಜಾತಿ ಸಮಾಜವು ಇದನ್ನು ಆಗಗೊಡುವುದಿಲ್ಲ ಎನ್ನುವ ಗಾಢವಾದ ಸಂಶಯವೂ ಅಂಬೇಡ್ಕರ್ ಅವರಿಗಿತ್ತು. ಹೀಗಾಗಿ ಅವರ ನಂತರ ಅಂಬೇಡ್ಕರ್‌ವಾದವು ಎರಡು ಬಗೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುವುದು ಅವಶ್ಯಕವಾಗಿತ್ತು. ಹಲವಾರು ದಲಿತ ಜಾತಿಗಳಲ್ಲಿ ಹಂಚಿಹೋಗಿದ್ದ ದಲಿತರನ್ನು 'ದಲಿತ' ಎನ್ನುವ ಒಂದು ಹೊಸದಾಗಿ ಸೃಷ್ಟಿಯಾದ ಗುರುತಿನಡಿಯಲ್ಲಿ ಒಟ್ಟುಗೂಡಿಸುವುದು ಅವಶ್ಯಕವಾಗಿತ್ತು. 'ದಲಿತ' ಎಂದರೆ ಶೋಷಿತ–ದಮನಿತ ಹಾಗೂ ಪ್ರಧಾನ ಧಾರೆಯ ಹಿಂದೂ ಪರಂಪರೆಗೆ ಅನ್ಯ ಎನ್ನುವ ನಿರ್ವಚನೆಯ ಮೂಲಕ ಇದನ್ನು ಸಾಧಿಸಬೇಕಾಗಿತ್ತು. ಈ ಬಗೆಯ 'ದಲಿತ' ಗುರುತನ್ನು ಕಟ್ಟಿಕೊಟ್ಟಿದ್ದು ಅಂಬೇಡ್ಕರ್ ಅವರ ಸಾಧನೆಯಾಗಿತ್ತು.

ಸ್ವಾತಂತ್ರ್ಯದ ನಂತರದ ಕಾಲದಲ್ಲಿ ಹಲವಾರು ದಶಕಗಳವರೆಗೆ ಪ್ರಬಲವಾಗಿದ್ದ ಗುರುತಿನ ರಾಜಕೀಯದಲ್ಲಿ ಅಂಬೇಡ್ಕರ್‌ವಾದಿ ಸಿದ್ಧಾಂತವು ಪ್ರಭಾವಶಾಲಿಯಾಗಿತ್ತು. ಸಂವಿಧಾನದ ಮೂಲಕ ಮೀಸಲಾತಿಯು ಜಾರಿಗೆ ಬಂದು ದಲಿತ ವರ್ಗಗಳ ಒಂದು ಭಾಗಕ್ಕೆ ಶಿಕ್ಷಣ ಹಾಗೂ ಉದ್ಯೋಗಗಳು ಲಭ್ಯವಾಗಿದ್ದರಿಂದ ೧೯೭೦ರ ದಶಕದ ಹೊತ್ತಿಗೆ ಶಿಕ್ಷಣ ಪಡೆದ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಪಡಕೊಂಡ ತಲೆಮಾರೊಂದು ಸಿದ್ಧವಾಗಿತ್ತು. ಈ ತಲೆಮಾರು ದಲಿತ ಗುರುತಿನ ಬಗ್ಗೆ, ಅಸಮಾನತೆಯ ಬಗ್ಗೆ ಹಾಗೂ ಜಾತಿ ಆಧಾರದ ಮೇಲೆ ಅನುಭವಿಸಬೇಕಾದ ಅವಮಾನಗಳ ಬಗ್ಗೆ ತೀವ್ರವಾದ ಎಚ್ಚರವನ್ನು ಹೊಂದಿತ್ತು. ಅಲ್ಲದೆ ಸಾಹಿತ್ಯ, ಸಂಸ್ಕೃತಿಗಳ ಕ್ಷೇತ್ರದಲ್ಲಿ ದಲಿತ ಅಭಿವ್ಯಕ್ತಿಯ ಗೈರುಹಾಜರಿಯ ಬಗ್ಗೆ ಆತಂಕಿತವಾಗಿತ್ತು. ಇದೆಲ್ಲದರ ಜೊತೆಗೆ ಅಂಬೇಡ್ಕರ್ ಅವರ radical ಧೋರಣೆಗಳನ್ನು ಬಿಟ್ಟುಕೊಟ್ಟು ಕಾಂಗ್ರೆಸ್ ರಾಜಕೀಯದೊಳಗೆ ಶಾಮೀಲಾದ ದಲಿತ ರಾಜಕೀಯ ನಾಯಕರ ಬಗ್ಗೆ ಕುಪಿತವಾಗಿತ್ತು. ಈ ಎಲ್ಲ ಕಾರಣಗಳಿಂದಾಗಿ ೭೦ ಹಾಗೂ ೮೦ರ ದಶಕಗಳಲ್ಲಿ ಪ್ರಾರಂಭವಾದ ದಲಿತ ಚಳುವಳಿಗಳು ಒಂದು ಬಗೆಯ ಅಂಬೇಡ್ಕರ್ ವಾದವನ್ನು ಪ್ರಖರವಾಗಿ ಬೆಳೆಸಿದವು.

ಈ ಚಳುವಳಿಗಳ ಪ್ರಧಾನ ಅಂಶವು 'ಸಾಂಸ್ಕೃತಿಕ'ವಾಗಿತ್ತು. ಅಂದರೆ ದಲಿತ ಸಾಂಸ್ಕೃತಿಕ ಗುರುತು, ದಲಿತ ಸ್ವಾಭಿಮಾನ, ದಲಿತ ಸಾಂಸ್ಕೃತಿಕ ಅಭಿವ್ಯಕ್ತಿ (ಮುಖ್ಯವಾಗಿ ಸಾಹಿತ್ಯ) ಇವುಗಳು ಈ ಚಳುವಳಿಗೆ ಆಧಾರವಾಗಿದ್ದವು. ಅಂಬೇಡ್ಕರ್‌ವಾದದ ಅಂತಃಸತ್ವವೇ ಆಗಿರುವ ಜಾತಿವಿನಾಶದ ಸಿದ್ಧಾಂತವನ್ನು ಈ ಚಳುವಳಿಗಳು ಒಪ್ಪಿಕೊಂಡಿದ್ದವು. ಕರ್ನಾಟಕದಲ್ಲಿ ಇದೇ '೭೦ ಮತ್ತು ೮೦'ರ ದಶಕಗಳಲ್ಲಿ ಹುಟ್ಟಿಕೊಂಡ ರೈತ ಚಳುವಳಿ, ಸಮಾಜವಾದಿ ಹೋರಾಟಗಳು







ಹಾಗೂ ಬರಹಗಾರರ ಒಕ್ಕೂಟ (ಆನಂತರ ಬಂಡಾಯ ಸಾಹಿತ್ಯ) ಇವುಗಳು ಕೂಡ ಜಾತಿವಿರೋಧಿ, ಪ್ರಗತಿಪರ ನಿಲುವುಗಳನ್ನು ಹೊಂದಿದ್ದರಿಂದ ದಲಿತ ಚಳುವಳಿಗಳು ಅವುಗಳೊಂದಿಗೆ ಸಹಾನುವರ್ತಿಗಳಾಗಿದ್ದವು. ಮಹಾರಾಷ್ಟ್ರ ಹಾಗೂ ಕರ್ನಾಟಕಗಳಲ್ಲಿ ನಡೆದ ದಲಿತ ಚಳುವಳಿಗಳು ಅಂಬೇಡ್ಕರ್‌ವಾದದ ಒಂದು ಪ್ರಧಾನ ಅಂಶದ, ಚಾರಿತ್ರಿಕವಾಗಿ ಪ್ರಸ್ತುತವಾದ ಬೆಳವಣಿಗೆಗಳಾಗಿದ್ದವು. ವಿಶೇಷವೆಂದರೆ ಅಂಬೇಡ್ಕರ್‌ರ ನಿಧನದ ನಂತರದಿಂದ ಈ ದಶಕಗಳವರೆಗೆ ಹೆಚ್ಚು ಕಡಿಮೆ ಅಂಚಿಗೆ ತಳ್ಳಿಹೋಗಿದ್ದ ಅಂಬೇಡ್ಕರ್‌ವಾದವು ಈ ಚಳುವಳಿಗಳಿಂದಾಗಿ ಒಂದು ಪ್ರಮುಖ ರಾಜಕೀಯ ಸಿದ್ಧಾಂತವಾಗಿ ಶಕ್ತಿಯನ್ನು ಪಡೆದುಕೊಂಡಿತು.

ದಲಿತ ಚಳುವಳಿಗಳು ಮೂಲತಃ ಶಿಕ್ಷಿತ, ನಗರವಾಸಿ ದಲಿತ ಜನಾಂಗದ ನಾಯಕತ್ವದಲ್ಲಿ ಹುಟ್ಟಿ ಬೆಳೆದ ಚಳುವಳಿಗಳಾಗಿದ್ದವು. ಆದರೆ ಕೆಲಕಾಲದವರೆಗೆ ಗ್ರಾಮೀಣ ಜಗತ್ತಿಗೆ ಸೇರಿದ ಅನಕ್ಷರಸ್ಥ, ಹೆಚ್ಚಾಗಿ ಭೂರಹಿತ ಕೃಷಿ ಕಾರ್ಮಿಕರಾದ ದಲಿತರ ಬಗ್ಗೆ ಪ್ರಾಮಾಣಿಕ ಕಾಳಜಿ ಮಾತ್ರವಲ್ಲ, ಅವರಿಗೆ ಅವಶ್ಯಕವಾದ ಭೂಮಿಯ ಸಮಸ್ಯೆಗೆ ಕುರಿತ ಕಾರ್ಯಕ್ರಮಗಳನ್ನೂ ರೂಪಿಸಿಕೊಟ್ಟಿದ್ದವು. ಕರ್ನಾಟಕದಲ್ಲಿ ಬಿ.ಕೃಷ್ಣಪ್ಪನವರ ನೇತೃತ್ವದಲ್ಲಿ ದಲಿತ ಸಂಘರ್ಷ ಸಮಿತಿಯು ಮಾಡಿದ ಕೆಲಸಗಳು ಅಂಬೇಡ್ಕರ್‌ವಾದದ ಚರಿತ್ರೆಯ ಉಜ್ವಲವಾದ ಭಾಗವಾಗಿವೆ. ಈಗ ರಾಜಕೀಯ ಕಾರ್ಯಕ್ರಮಗಳೇ ಇಲ್ಲದ ಸನ್ನಿವೇಶದಲ್ಲಿ ಬಿ.ಕೃಷ್ಣಪ್ಪನವರ ನೆನಪು ಮಸಕಾಗಿ ದಲಿತ ಸಾಹಿತಿಗಳೇ ದಲಿತ ಚಳುವಳಿಗಳ ನೇತಾರರು ಎನ್ನುವ ಮಿಥ್ಯೆಯು ಪ್ರಬಲವಾಗಿಬಿಟ್ಟಿರುವುದರಿಂದ ಈ ಮಾತನ್ನು ಹೇಳಲೇಬೇಕಾಗಿದೆ. ಇದೇ ಪ್ರಮಾಣದ radical ಗುಣವನ್ನು ಹೊಂದಿದ್ದ ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿಯವರ ನೇತೃತ್ವದ ರೈತ ಚಳುವಳಿ ಹಾಗೂ ದಲಿತ ಚಳುವಳಿಗಳು ಸಮಾನವಾದ ರಾಜಕೀಯ ಕಾರ್ಯಕ್ರಮಗಳಿಗಾಗಿ ಒಂದುಗೂಡಬಹುದಾದ ಅಪೂರ್ವ ಚಾರಿತ್ರಿಕ ಅವಕಾಶವು ಹಲವಾರು ಕಾರಣಗಳಿಂದಾಗಿ ನಿರರ್ಥಕವಾಗಿ ಕಳೆದು ಹೋಯಿತು. ಬಹುಶಃ ಇದರ ಪರಿಣಾಮದಿಂದಾಗಿ ದಲಿತ ಚಳುವಳಿಯು ಕ್ರಮೇಣವಾಗಿ ಒಡೆದು ಹೋಯಿತು. ಸ್ವತಃ ಕೃಷ್ಣಪ್ಪನವರೇ ಅಂಬೇಡ್ಕರ್‌ವಾದದ ಇನ್ನೊಂದು ಪ್ರಧಾನ ಎಳೆಯಾದ 'ಸಾಂವಿಧಾನಿಕ ಪ್ರಜಾಪ್ರಭುತ್ವದ ಮೂಲಕ ದಲಿತ ಸಬಲೀಕರಣ' ನಿಲುವಿನ ಕಡೆಗೆ ವಾಲಿದರು.

ಆ ಹೊತ್ತಿಗೆ ಕಾನ್ಶಿರಾಮ್ ಅವರ ಬಹುಜನ ಸಮಾಜ ಪಕ್ಷವು ಅಂಬೇಡ್ಕರ್‌ವಾದದ ಈ ಎಳೆಯನ್ನು ರಾಜಕೀಯ ಕಾರ್ಯಕ್ರಮವನ್ನಾಗಿ ಪ್ರಬಲವಾದ ರೀತಿಯಲ್ಲಿ ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಿತು. ಈಗಲೂ ಈ ಎಳೆಯು ಸದ್ಯದ ದಲಿತ ಚಿಂತನೆಯಲ್ಲಿ ಮುಖ್ಯವಾಗಿದೆ. ಸ್ವತಃ ಅಂಬೇಡ್ಕರ್ ಅವರು ತಮ್ಮ ಹೋರಾಟಗಳಲ್ಲಿ ರಾಜಕೀಯ ಅಧಿಕಾರದ ಮೂಲಕ ದಲಿತ ವಿಮೋಚನೆಯ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದರು. ಮೊದಲು ಬ್ರಿಟಿಷ್ ವಸಾಹತುಶಾಹಿ ರಾಜಕೀಯ ವ್ಯವಸ್ಥೆಯ ಒಳಗೆ ದಲಿತರಿಗೆ ಪ್ರತ್ಯೇಕ ಪ್ರಾತಿನಿಧ್ಯ ಹಾಗೂ ಹಕ್ಕೊತ್ತಾಯದ ಕಾರ್ಯಕ್ರಮಗಳನ್ನು ರೂಪಿಸಿದರು. ಆನಂತರ ಸಂವಿಧಾನವನ್ನು ರಚಿಸುವ ಮೂಲಕ ಸ್ವಾತಂತ್ರ್ಯೋತ್ತರ ರಾಜಕೀಯ ವ್ಯವಸ್ಥೆಯಲ್ಲಿ ಇದೇ ಬಗೆಯ ಕಾರ್ಯಕ್ರಮಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟರು. ಸಾಂವಿಧಾನಿಕ ರಾಜಕೀಯ ಅಧಿಕಾರದ ಮೂಲಕವೇ ದಲಿತರಿಗೆ ಸಮಾನತೆಯನ್ನು ಸಾಧಿಸಬಹುದೆಂಬ ಸಿದ್ಧಾಂತವೂ ಅಂಬೇಡ್ಕರ್‌ವಾದಿ ಸಿದ್ಧಾಂತವಾಗಿದೆ. ಆದರೆ ಉತ್ತರ ಪ್ರದೇಶದ ಮಾಯಾವತಿ ಸರಕಾರಗಳ ಸ್ವರೂಪವನ್ನು ನೋಡಿದ ಮೇಲೆ ಈ ಮಾದರಿಯ ಅಂಬೇಡ್ಕರ್‌ವಾದವು ದಲಿತ ರಾಜಕೀಯ ನಾಯಕರನ್ನು ಸೃಷ್ಟಿಸುತ್ತದೆ ಮಾತ್ರವೇ ಹೊರತು ದಲಿತ ಜನಾಂಗಗಳ ವಿಮೋಚನೆಯನ್ನು ತರಲಾರದು ಎಂದೆನಿಸುತ್ತದೆ.

ಇದು ಕೂಡ ಸಂಕೀರ್ಣವಾದ ಸಮಸ್ಯೆಗೆ ಅಸಮಗ್ರವಾದ ಒಂದು ಉತ್ತರವಾಗಬಲ್ಲದು. ಏಕೆಂದರೆ ಅಂಬೇಡ್ಕರ್‌ವಾದಕ್ಕೆ ಎರಡು ಪ್ರಧಾನ ಸ್ವರೂಪಗಳಿವೆ. ಒಂದು, radical ಆದ, ಕ್ರಾಂತಿಕಾರಕವಾದ ಸ್ವರೂಪ. ಇದು ಅಂತಿಮವಾಗಿ ಜಾತಿ ವಿನಾಶದ ಮೂಲಕ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವವನ್ನು ಸಾಧಿಸುವ ಅಪೇಕ್ಷೆ ಹೊಂದಿರುವಂಥದು. ಹಿಂದೂ ಧರ್ಮ ಹಾಗೂ ಹಿಂದೂ ಸಮಾಜಗಳ ಆಮೂಲಾಗ್ರವಾದ ಪಲ್ಲಟವನ್ನು ಇದು ತನ್ನ

ರಾಜಕೀಯ ಕಾರ್ಯಕ್ರಮವನ್ನಾಗಿ ಹೊಂದಿದೆ. ಇದು ರಾಜಿಕಬೂಲಿ, ಶಾಮೀಲು ಮುಂತಾದ ತಂತ್ರಗಳನ್ನು ಒಪ್ಪುವುದಿಲ್ಲ. ಈ ಸ್ವರೂಪದ ಅಂಬೇಡ್ಕರ್‌ವಾದವು ಇಂದು ಅಸ್ತಿತ್ವದಲ್ಲಿ ಇಲ್ಲ. ಅಷ್ಟು ಮಾತ್ರವಲ್ಲ, ಸೈದ್ಧಾಂತಿಕವಾಗಿ ಕೂಡ ದಲಿತ ಚಿಂತನೆಯೂ ಈ ಸ್ವರೂಪದಿಂದ ದೂರವಾಗಿದೆ. ಇದರ ಪರಿಣಾಮವಾಗಿಯೇ ಕರ್ನಾಟಕದ ಬಹುಪಾಲು ದಲಿತ ಬರಹಗಾರರು ಹಾಗೂ ಚಿಂತಕರು ಅಂಬೇಡ್ಕರ್‌ವಾದಿಗಳೆಂದು ಹೇಳಿಕೊಂಡರೂ ಗಾಂಧಿವಾದದ ಆರಾಧಕರೇ ಆಗಿದ್ದಾರೆ. ಜಾತಿವ್ಯವಸ್ಥೆಯನ್ನು ಮೂಲತಃ ಒಪ್ಪಿಕೊಂಡಿದ್ದ ಗಾಂಧಿವಾದಿ ಚಿಂತನೆಯನ್ನು ಜಾತಿವಿನಾಶವೇ ಅಂತಃಸತ್ವವಾದ ಅಂಬೇಡ್ಕರ್‌ವಾದದ ಜೊತೆಗೆ ಹೇಗೆ ಮೇಳೈಸಬಹುದು ಎನ್ನುವುದರ ಬಗ್ಗೆ ಸೈದ್ಧಾಂತಿಕವಾಗಿ ಸ್ಪಷ್ಟತೆ ಇಲ್ಲದೇ ಇರುವವರೆಗೆ ಗಾಂಧಿ–ಅಂಬೇಡ್ಕರ್ ಇವರಿಬ್ಬರನ್ನು ಒಟ್ಟುಗೂಡಿಸುವ ಪ್ರಯತ್ನಗಳು ಭೋಳೇತನದ, ಭಾವುಕ ಹಾಗೂ ಜನಪ್ರಿಯವಾದ ಧೋರಣೆಗಳಾಗಿ ಮಾತ್ರ ಕಾಣುತ್ತವೆ.

ಈ ವಿಷಯದಲ್ಲಿ ನಡೆದಿರುವ ಚಿಂತನೆಗಳು ಗಾಂಧಿಯವರ ಚಿಂತನೆಯು ಅಂಬೇಡ್ಕರ್ ಪ್ರಭಾವದಿಂದಾಗಿ ಜಾತಿವ್ಯವಸ್ಥೆಯ ವಿರುದ್ಧ ಕ್ರಮೇಣವಾಗಿ ಪ್ರಬುದ್ಧವಾದ ನಿಲುವುಗಳನ್ನು ಪಡೆಯಿತು ಎಂದು ವಾದಿಸಿವೆ. ಆದರೆ ಈ ವಾದವೂ ಅಂತಿಮವಾಗಿ ಜಾತಿವ್ಯವಸ್ಥೆ ಕುರಿತು ಬದಲಾದ ಮನೋಭಾವನೆ ಹೊಂದಿದ ಗಾಂಧಿಯನ್ನು ಕೇಂದ್ರದಲ್ಲಿಡುತ್ತದೆಯೇ ಹೊರತು ಅಂಬೇಡ್ಕರ್‌ವಾದವನ್ನಲ್ಲ. ಜಾತಿವ್ಯವಸ್ಥೆಯನ್ನು ಕುರಿತು ವಿಸ್ತಾರವಾಗಿ ಬರೆದ ಅಂಬೇಡ್ಕರ್‌ರ ಗ್ರಹಿಕೆಗಳನ್ನು ಸಮಗ್ರವಾಗಿ ಅರ್ಥಮಾಡಿಕೊಂಡ ಜಾತಿವ್ಯವಸ್ಥೆಯ ವಿಶ್ಲೇಷಣೆಯು ಈ ವರೆಗೂ ಬಂದಿಲ್ಲ. ವಿಶೇಷವೆಂದರೆ ಜಾತಿವ್ಯವಸ್ಥೆಯನ್ನು ಕುರಿತು ಪಶ್ಚಿಮದ ವಿದ್ವಾಂಸರು ಮಾಡಿದ ವಿಫುಲವಾದ ಸಂಶೋಧನೆಯಲ್ಲಿ ಅಂಬೇಡ್ಕರ್ ಅವರ ಪ್ರಸ್ತಾವವು ಅಂಚಿನಲ್ಲಿ ಮಾತ್ರ ಬರುತ್ತದೆ; ಅದೂ ಕೂಡ ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿದ ವ್ಯಕ್ತಿಯಾಗಿಯೇ ಹೊರತು ಜಾತಿವ್ಯವಸ್ಥೆಯನ್ನು ಕುರಿತು ಒಂದು ಅರ್ಥಪೂರ್ಣ ಮಾದರಿಯನ್ನು ನೀಡಿದ ಚಿಂತಕನಾಗಿ ಅಲ್ಲ.(Gail Omvedt, Elinor Zelliot, ಕ್ರಿಸ್ತೋಫ್, Jaffrelot ಇಂಥ ಕೆಲವರನ್ನು ಬಿಟ್ಟರೆ). ಹೀಗಾಗಿ ಅಂಬೇಡ್ಕರ್‌ವಾದದ ಅಂತಃಸತ್ವವೇ ಆಗಿದ್ದ ಜಾತಿವಿಶ್ಲೇಷಣೆಯನ್ನು ಅಂಬೇಡ್ಕರ್‌ವಾದಿಗಳು ಬೆಳೆಸಿದ ಹಾಗೆ ತೋರುವುದಿಲ್ಲ.

ಅಂಬೇಡ್ಕರ್‌ವಾದದ ಮುಖ್ಯ ರಾಜಕೀಯ ಕಾರ್ಯಕ್ರಮವಾದ ಜಾತಿವಿನಾಶದ ಕಾರ್ಯಕ್ರಮವು ಇಂದು ಚರ್ಚೆ ಕೂಡಾ ಆಗುತ್ತಿಲ್ಲ. ಈಗಾಗಲೇ ಪ್ರಸ್ತಾಪಿಸಿದಂತೆ ೮೦ರ ದಶಕದಲ್ಲಿ ಎಲ್ಲಾ ಪ್ರಗತಿಪರ ಚಳುವಳಿಗಳು ಜಾತಿವಿರೋಧಿ ನಿಲುವನ್ನು ತಳೆದಿದ್ದವು. ಅಂತರ್‌ಜಾತೀಯ ವಿವಾಹವು ರೈತ ಚಳುವಳಿಯ ನಾಯಕರುಗಳಿಗೆ ಮುಖ್ಯವಾದ ಕಾಳಜಿಯಾಗಿತ್ತು. ಆದರೆ ದಲಿತ ಜಾತಿಗಳ ಸಂಘಟನೆಯ ಮೂಲಕ ದಲಿತರಿಗೆ ಸಮಾನತೆಯ ಹಕ್ಕನ್ನು ದೊರಕಿಸಿಕೊಡಬೇಕೆನ್ನುವ ಅಂಬೇಡ್ಕರ್‌ರ ಆಶಯವು ಮುಂದಿನ ತಲೆಮಾರುಗಳಲ್ಲಿ ದಾರಿತಪ್ಪಿ ಜಾತಿ ಸಂಘಟನೆಗೆ ಮಾತ್ರ ಸೀಮಿತವಾಗಿಬಿಟ್ಟಿತ್ತು. ಈ ಸಂಘಟನೆಗಳು ಇಂದು ಅಂಬೇಡ್ಕರ್ ಅವರ ಜಾತಿವ್ಯವಸ್ಥೆಯ ವಿರೋಧವನ್ನು ಮೇಲ್ಜಾತಿ ವಿರೋಧಕ್ಕೆ ಇಳಿಸಿಬಿಟ್ಟು ತಮ್ಮ ಅಸ್ತಿತ್ವದ ನ್ಯಾಯಸಮರ್ಥನೆಗಾಗಿ ಬಳಸಿಕೊಳ್ಳುತ್ತಿವೆ. ಇಂಥ ಸಂಘಟನೆಗಳನ್ನು ಬಳಸಿಕೊಂಡು ಪುಢಾರಿ ರಾಜಕೀಯವು ಪ್ರಬಲಗೊಂಡಿದೆ. ಹೀಗಾಗಿ ವೃತ್ತಿರಾಜಕಾರಣದಲ್ಲಿ ತೊಡಗಿಕೊಂಡಿರುವ ದಲಿತ ರಾಜಕಾರಣಿಗಳು ಜಾತಿವಿನಾಶವನ್ನು ಕಲ್ಪಿಸಿಕೊಳ್ಳಲು ಆಗದ ಸ್ಥಿತಿಯಲ್ಲಿದ್ದಾರೆ. ನಿಮ್ನ ಜಾತಿಗಳನ್ನು ಸಂಘಟಿಸುವುದು, ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಹೆಚ್ಚಿನ ಮೀಸಲಾತಿ ಅಥವಾ ರಿಯಾಯಿತಿಗಳಿಗಾಗಿ ಒತ್ತಾಯಿಸುವುದು ಮಾತ್ರ ಅಂಬೇಡ್ಕರ್‌ವಾದವೆಂದು ಇವರುಗಳು ನಂಬುತ್ತಾರೆ. ಸ್ವತಃ ದಲಿತ ಸಮುದಾಯಗಳೂ ಕೂಡ ಜಾತಿ ಸಂಘಟನೆಯ ಮೂಲಕ ತಮ್ಮ ಸ್ಥಿತಿಗತಿಗಳಲ್ಲಿ ಪ್ರಗತಿ ಸಾಧಿಸಲು ಬಯಸುತ್ತಾವೆಯೇ ಹೊರತು ಜಾತಿವಿನಾಶದಲ್ಲಿ ಯಾವುದೇ ಪ್ರಯೋಜನವನ್ನು ಕಾಣುತ್ತಿಲ್ಲ. ಹಾಗೆ ನೋಡಿದರೆ ಜಾತಿವಿನಾಶದ ರಾಜಕೀಯವು ಇಂದು ಯಾವುದೇ ಚಳುವಳಿಯ ಕಾರ್ಯಸೂಚಿಯಲ್ಲಿಲ್ಲ.

ಅಂಬೇಡ್ಕರ್ ಅವರು ಆಧುನಿಕತೆಯ ಪರವಾಗಿ ಇದ್ದರೆಂದು ಅನೇಕರು ವಾದಿಸಿದ್ದಾರೆ. ಇತ್ತೀಚೆಗೆ ಈ ಬಗೆಯ ಟಿಪ್ಪಣಿಗಳು ಆಧುನಿಕತೆಯ ಬಗ್ಗೆ ನಿರಸನ ಹೊಂದಿದ ಮತ್ತು ತಾತ್ವಿಕವಾಗಿ ಆಧುನಿಕೋತ್ತರವಾದದ ಬೆಂಬಲದಿಂದ ಆಧುನಿಕತೆಯನ್ನು ತಿರಸ್ಕರಿಸುವ ವಲಯಗಳಿಂದ ಬರುತ್ತವೆ. ಇದರ ಜೊತೆಗೆ ಗಾಂಧೀವಾದವು ಕಟ್ಟಿಕೊಟ್ಟ ಆಧುನಿಕತೆಯ ವಿಮರ್ಶೆಯಿಂದ ಕೂಡಾ ಇವು ಬಂದಿವೆ. ದಲಿತ ಸಮುದಾಯಗಳು ವಸಾಹತುಶಾಹಿ ಆಧುನಿಕತೆಯಿಂದ ಒಂದು ಸೀಮಿತವಾದ ಬಿಡುಗಡೆ ಅನುಭವಿಸಿದ್ದು ಚಾರಿತ್ರಿಕ ಸತ್ಯವೇ ಆಗಿದೆ. ಅಲ್ಲದೇ ಹಿಂದೂ ಸಂಪ್ರದಾಯಗಳನ್ನು ಸುಧಾರಿಸಲು ಮಾಡಿದ ಪ್ರಯತ್ನಗಳಲ್ಲಿ ಅನುಭವಿಸಿದ ಸೋಲಿನಿಂದಾಗಿ ಅಂಬೇಡ್ಕರ್ ಅವರಿಗೆ ಆಧುನಿಕತೆ ಆಪ್ಯಾಯಮಾನವಾಗಿ ಕಂಡಿದ್ದು ಆಶ್ಚರ್ಯವಲ್ಲ. ಅಲ್ಲದೇ ಆಧುನಿಕತೆಗೆ ಪರ್ಯಾಯವಾಗಿ ಗಾಂಧಿ ಸಮರ್ಥಿಸಿದ ಗ್ರಾಮಸ್ವರಾಜ್ಯವು ಅವರಿಗೆ ಜಾತಿವ್ಯವಸ್ಥೆಯ, ಅಸಮಾನತೆಯ ಪಾಪಕೂಪವಾಗಿಯೇ ಕಂಡಿತು. ಹೀಗಾಗಿ ತಾತ್ವಿಕವಾಗಿ ಅಂಬೇಡ್ಕರ್ ಆಧುನಿಕತೆಯನ್ನು ಒಪ್ಪಿದರಾದರೂ ಅವರ ಯಾವುದೇ ರಾಜಕೀಯ ಕ್ರಿಯೆಯು ಆಧುನಿಕತೆಯ ಅವಿಮರ್ಶಕ ಅನುಷ್ಠಾನದ ಪರವಾಗಿ ಇರಲಿಲ್ಲ. ಈಗ ಕೆಲವು ಪುಟ್ಟ ದಲಿತ ವಲಯಗಳಲ್ಲಿ ನವಬಂಡವಾಳಶಾಹಿ, ಜಾಗತೀಕರಣ ಇವುಗಳು ದಲಿತರಿಗೆ ಅವಕಾಶವನ್ನು ಸೃಷ್ಟಿಸುತ್ತವೆ ಎನ್ನುವ ವಾದವನ್ನು ಅಂಬೇಡ್ಕರ್‌ವಾದದ ಮುಂದುವರಿಕೆಯಾಗಿ ಸಮರ್ಥಿಸಲಾಗುತ್ತಿದೆ. ಆದರೆ ಬಂಡವಾಳಶಾಹಿಯು ದಲಿತರ ಶತ್ರು ಎಂದು ಎಂದೋ ಮೊದಲೇ ಗುರುತಿಸಿದ್ದ ಅಂಬೇಡ್ಕರ್ ಅವರು ಈ ನಿಲುವನ್ನು ತಾಳುತ್ತಿರಲಿಲ್ಲ.

ಇಷ್ಟೆಲ್ಲ ಹೇಳಿದರೂ ಅಂಬೇಡ್ಕರ್‌ವಾದವು ಅಪ್ರಸ್ತುತವಾಗಿದೆಯೆಂದಲ್ಲ. ನಾನು ಇಲ್ಲಿಯವರೆಗೆ ಚರ್ಚಿಸಿದ ಬೌದ್ಧಿಕ ಜಗತ್ತು, ರಾಜಕೀಯ ವಲಯ ಇವುಗಳ ಆಚೆಗೆ ದಲಿತ ಸಮುದಾಯಗಳು ಬದುಕುವ ಜೀವಂತ ಜಗತ್ತೊಂದಿದೆ. ಈ ಜಗತ್ತಿಗೆ ಅಂಬೇಡ್ಕರ್‌ವಾದವೇ ಬಿಡುಗಡೆ, ಸ್ವಾತಂತ್ರ್ಯ ಹಾಗೂ ಸಮಾನತೆಯ ಭರವಸೆಯ ಏಕಮಾತ್ರ ವಾದವಾಗಿದೆ. ಈ ಜಗತ್ತು ಅಂಬೇಡ್ಕರ್‌ವಾದವನ್ನು ಜೀವಂತವಾಗಿರಿಸಿರುವ ಸೃಜನಶೀಲ ಬಗೆಗಳ ಬಗ್ಗೆ ಇನ್ನೊಮ್ಮೆ ಪ್ರತ್ಯೇಕವಾಗಿ ಬರೆಯುತ್ತೇನೆ.


---

# ಬಾಬಾ ಸಾಹೇಬರಿಂದ ಕಲಿಯಬೇಕಾದದ್ದು

–ಹರ್ಷ್ ಮಂದರ್

**ಭಾ**ರತದ ಇಂದಿನ ಹಲವು ಸೆಕ್ಯುಲರ್ ಪ್ರಗತಿಪರ ಬುದ್ಧಿಜೀವಿಗಳಲ್ಲಿ ಭಾರತವು ಮೊದಲಿನಿಂದಲೂ ಬುದ್ಧ, ಕಬೀರ, ನಾನಕ, ಅಶೋಕ, ಅಕ್ಬರ, ಗಾಂಧಿಯಂಥ ಸಹಿಷ್ಣುತೆ–ಬಹುತ್ವವಾದಿಗಳ ನಾಡು ಎಂಬ ನಂಬಿಕೆಯಿದೆ. ಸಾವಿರಾರು ವರ್ಷಗಳ ಇಲ್ಲಿನ ಸಂಸ್ಕೃತಿಯಲ್ಲಿ ಹಲವು ಧರ್ಮಗಳು ಅರಳಿ–ನೆಲೆಯೂರಿವೆ. ಹಿಂಸೆಗೊಳಗಾದ ಧರ್ಮಗಳಿಗೆ ರಕ್ಷಣೆ ದೊರೆತಿದೆ. ಅಸಾಂಪ್ರದಾಯಿಕವಾದ, ನಾಸ್ತಿಕ ಪರಂಪರೆಗಳೂ ಸಹ ಇತರ ಆಧ್ಯಾತ್ಮಿಕ ಪರಂಪರೆಗಳಂತೆ ಬೆಳೆದಿವೆ. ಸಾಮಾನ್ಯ ಜನರೂ ಸಹ ತಮ್ಮದಲ್ಲದ ಧರ್ಮ–ಸಂಸ್ಕೃತಿಗಳನ್ನು ಗೌರವಿಸುತ್ತ ಎಲ್ಲರೊಡನೆ ಬದುಕಿ ಬಾಳುತ್ತಿದ್ದಾರೆ.

ಇದೆಲ್ಲವೂ ನಿಜವೇ. ಆದ್ದರಿಂದಲೇ ಭಾರತೀಯ ಸಂಸ್ಕೃತಿಯನ್ನು ಕುರಿತ–ರೋಮಿಲಾ ಥಾಪರ್ ಅವರು ಹೇಳುವ–ಬಲಪಂಥೀಯ ಹಿಂದೂವಾದಿಗಳ ಏಕರೂಪಿಯಾದ ಹಿಂಸಾತ್ಮಕ ವಿವರಣೆಗಳು ತೀವ್ರ ಅಸಮಾಧಾನವನ್ನು ಉಂಟುಮಾಡುತ್ತವೆ. ಆದರೆ ಇವೆಲ್ಲವುಗಳನ್ನು ಮಾತಾಡುವಾಗ ಭಾರತೀಯ ಸಮಾಜವೆಂಬ ವಿಶಾಲ ವಟವೃಕ್ಷವು–ಹಿಂದಾಗಲೀ,ಇಂದಾಗಲೀ–ಹೇಗೆ ಜಾತಿ ಶೋಷಣೆಯ ಕ್ರೂರ ತಳಹದಿಯ ಮೇಲೆ ಸುಸ್ಥಿರವಾಗಿ ಬೆಳೆದು ನಿಂತಿದೆ ಎಂಬುದನ್ನು ಕುರಿತು ನಾವು ಚಿಂತಿಸುವುದಿಲ್ಲ. ಆದ್ದರಿಂದಲೇ ದಿನ ಕಳೆದಂತೆ ನಾನು ಬಾಬಾಸಾಹೇಬ್ ಅಂಬೇಡ್ಕರ್ ಅವರಿಂದ ಹೆಚ್ಚು ಹೆಚ್ಚು ಪ್ರಭಾವಿತನಾಗುತ್ತಿದ್ದೇನೆ.



ಒಂದು ಮಾತು ನಿಜ: ಭಾರತವನ್ನು ಅರ್ಥಮಾಡಿಕೊಳ್ಳದೆ ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಭಾರತದ ಜಾತಿ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳದೆ ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಮತ್ತು ಅಂಬೇಡ್ಕರ್ ಅವರನ್ನು ಓದದೆ ನಾವ್ಯಾರೂ ಇಲ್ಲಿನ ಜಾತಿವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಮಾಯಾವತಿಯಿಂದ ಹಿಡಿದು ಅರುಂಧತಿ ರಾಯ್‌ವರೆಗೆ, ಅಂಬೇಡ್ಕರ್‌ರನ್ನು ಆರಾಧಿಸುವವರೆಲ್ಲರಲ್ಲಿ ಒಂದು ಸಮಾನ ಅಂಶವಿದೆ. ಅದೇನೆಂದರೆ ಅಂಬೇಡ್ಕರ್ ಅವರನ್ನು ಭಾರತದ ಚರಿತ್ರೆಯಲ್ಲಿ ಪ್ರತಿಷ್ಠಾಪಿಸುವುದು ಎಂದರೆ ಗಾಂಧಿಯವರನ್ನು ಹೀಗಳೆಯುವುದು ಎಂದರ್ಥ. ಅಂಬೇಡ್ಕರರ ಘನತೆ ಹೆಚ್ಚಾಗುವುದೇ ಅವರ ರಾಜಕೀಯ ವೈರಿಯಾದ ಗಾಂಧಿಯವರನ್ನು ಚರಿತ್ರೆಯ ಕೀರ್ತಿಶಿಖರದಿಂದ ಕೆಳಗೆ ಬೀಳಿಸುವುದರಿಂದ ಎಂದು ಅವರು ನಂಬಿದಂತಿದೆ. ಇದನ್ನು ನಾನು



**ಬಹುಶಃ ಗಾಂಧಿ–ಅಂಬೇಡ್ಕರ್ ಒಟ್ಟಿಗಿರುವ ಏಕೈಕ ಐತಿಹಾಸಿಕ ಫೋಟೋ ಇದು– ಲಂಡನ್‌ನಲ್ಲಿ ನಡೆದ ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ತೆಗೆದ ಚಿತ್ರ.. ಎದುರು ಸಾಲಿನಲ್ಲಿ ಗಾಂಧಿ ಇದ್ದರೆ, ಅಡ್ಡ ಸಾಲಿನಲ್ಲಿ ಕನ್ನಡಕಧಾರಿ ಅಂಬೇಡ್ಕರ್ ಇದ್ದಾರೆ**

ಒಪ್ಪುವುದಿಲ್ಲ. ನಾವು ಇಷ್ಟು ಸರಳವಾಗಿ ನಾಯಕರನ್ನು–ಖಳನಾಯಕರನ್ನು ಸೃಷ್ಟಿಸಿಬಿಟ್ಟರೆ ಇತಿಹಾಸದ ಸಂಕೀರ್ಣತೆಗೆ, ಅದರ ಬಹುಮುಖಿ ಸ್ವರೂಪಕ್ಕೆ ಅಪಚಾರ ಮಾಡಿದಂತಾಗುತ್ತದೆ. ನನಗೆ ಭಾರತದ ಇತಿಹಾಸ ಬಹಳ ವಿಶಾಲವಾದ ಹಾಗೂ ನಿರಂತರವಾಗಿ ವಿಕಾಸಗೊಳ್ಳುವ ಪ್ರಕ್ರಿಯೆಯಾಗಿ ಕಾಣಿಸುತ್ತದೆ. ಯಾಕೆಂದರೆ ಅಲ್ಲಿ, ಬ್ರಿಟಿಷರ ದಾಸ್ಯದಿಂದ ಮುಕ್ತವಾಗಿ ಮುಂದೊಂದು ದಿನ ಒಂದು ಸ್ವತಂತ್ರ ಸಮಾಜವಾಗಿ ರೂಪುಗೊಳ್ಳಬೇಕಾಗಿರುವ ಭಾರತದಲ್ಲಿ ಗಾಂಧಿ– ಅಂಬೇಡ್ಕರರಿಬ್ಬರೂ ಜೊತೆಜೊತೆಯಾಗಿಯೇ ನಡೆಯುತ್ತಿದ್ದಾರೆಯೇ ಹೊರತು ಒಬ್ಬರಿಗೊಬ್ಬರು ಬೆನ್ನು ಕೊಟ್ಟು ನಡೆಯುತ್ತಿಲ್ಲ.

ಗಾಂಧಿಯವರಿಂದ ನಾನು ಬಹಳ ಕಲಿತಿದ್ದೇನೆ. ಅದರಲ್ಲಿ ಮುಖ್ಯವಾದದ್ದು ನಮ್ಮ ಗುರಿ ಮತ್ತು ಅದನ್ನು ಸಾಧಿಸಲು ಅನುಸರಿಸಬೇಕಾದ ಮಾರ್ಗ ಎರಡಕ್ಕೂ ಸಾಮ್ಯತೆ ಇರಬೇಕು ಎನ್ನುವ ನಿಲುವು. ಗುರಿ ಎಷ್ಟೇ ದೊಡ್ಡದಿರಲಿ ಅದನ್ನು ಸಾಧಿಸಲು ಹಿಂಸೆ, ಅನ್ಯಾಯ, ಅಸತ್ಯದ ಮಾರ್ಗವನ್ನು ಒಪ್ಪಲು ಸಾಧ್ಯವೇ ಇಲ್ಲ. ಜೊತೆಗೆ ಎಲ್ಲ ಧರ್ಮಗಳನ್ನೂ ಸಮಾನ ಗೌರವದಿಂದ ಕಾಣಬೇಕೆನ್ನುವ ಅವರ ಸೆಕ್ಯುಲರ್ ನಿಲುವು, ಅಭಿವೃದ್ಧಿಯನ್ನು ಕುರಿತು ಮನುಷ್ಯರನ್ನು ಕೇಂದ್ರಿತವಾದ ಅವರ ಪರ್ಯಾಯ ದೃಷ್ಟಿಕೋನ, ಅಹಿಂಸೆ, ಜೀವನದುದ್ದಕ್ಕೂ ತನ್ನ ಮಾತು–ಕೃತಿಗಳೆರಡನ್ನೂ ಸರಿದೂಗಿಸಲು ನಿರಂತರವಾಗಿ ಮಾಡಿದ ಪ್ರಯತ್ನಗಳು ನನ್ನನ್ನು ಪ್ರಭಾವಿಸಿವೆ.

ಇಷ್ಟೆಲ್ಲ ಹೇಳಿದ ಮೇಲೂ ನಾನು ಬಾಬಾ ಸಾಹೇಬರು ಗಾಂಧಿಯವರನ್ನು ಕುರಿತು ಮಾಡಿರುವ ಟೀಕೆಗಳನ್ನು ಪೂರ್ಣವಾಗಿ ಸ್ವೀಕರಿಸುತ್ತೇನೆ. ಗಾಂಧಿಯವರ ಟ್ರಸ್ಟೀಶಿಪ್ ಬಗೆಗಿನ ಧೋರಣೆಗಳನ್ನು ಕುರಿತು ಅವರು ಮಾಡಿರುವ ಟೀಕೆಗಳು ಸರಿಯಾಗಿಯೇ ಇವೆ. ಯಾಕೆಂದರೆ ಅದು ಯೋಜನೆಗಳು ಹಾಗೂ ಕಾನೂನುಗಳನ್ನು ಪುನರ್ರಚಿಸುವ ಸಾಧ್ಯತೆಯನ್ನು ಇಲ್ಲವಾಗಿಸುತ್ತದೆ. ಅದು ಹೇರಳವಾಗಿ ಸಂಪತ್ತನ್ನು ಶೇಖರಿಸುವುದರಿಂದಾಗಿ ಆಗುವ ಅಸಮಾನತೆ– ಶೋಷಣೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಕೊನೆಗೆ ಅದು ಬಡವರ ಉದ್ಧಾರವನ್ನು ಉಳ್ಳವರ ಕೃಪಾಕಟಾಕ್ಷದಿಂದ ನಡೆಯುವ ಆಕಸ್ಮಿಕವಾಗಿಸಿಬಿಡುತ್ತದೆ.

ಗಾಂಧಿಯವರ 'ಗ್ರಾಮ ಗಣರಾಜ್ಯ' ಪರಿಕಲ್ಪನೆಯನ್ನು ಟೀಕಿಸುತ್ತ ಅವುಗಳನ್ನು ಜಾತಿಕೊಳಚೆಯ ಕೇಂದ್ರಗಳೆಂದು ಅಂಬೇಡ್ಕರ್‌ರು ಕರೆದದ್ದು ಸರಿಯಾಗಿಯೇ ಇದೆ. ಅಲ್ಲದೆ ಗಾಂಧಿಯವರ ಭಾರತೀಯ ಸಂಪ್ರದಾಯದ ಸಮರ್ಥನೆಯನ್ನು ಅಲ್ಲಗಳೆಯುತ್ತ ಅದು ಯಾವಾಗಲೂ ಇಲ್ಲಿನ ಕೆಳವರ್ಗದ ಜನರ–ಮಹಿಳೆಯರ ಅಸ್ತಿತ್ವಕ್ಕೆ ಅಪಾಯಕಾರಿಯಾಗಿಯೇ ಪರಿಣಮಿಸಿದೆ ಎಂದು ತೋರಿಸಿಕೊಟ್ಟರು. 'ಹಿಂದೂ ಸಮಾಜ' ಎಂಬ ಪರಿಕಲ್ಪನೆಯೇ ಒಂದು ಮಿಥ್ಯೆ ಎಂಬುದು ಅವರ ನಂಬಿಕೆಯಾಗಿತ್ತು. ಬದಲಾಗಿ ಅದು ಯಾವುದೇ ಸಿದ್ಧ ನಂಬಿಕೆಗಳಿಲ್ಲದ ಹಲಬಗೆಯ ವೈವಿಧ್ಯತೆಗಳ ಜನಗಳನ್ನು ಒಳಗೊಳ್ಳುವ ಒಂದು 'ವಿಶಾಲ ಸಮೂಹ' ಎಂದು ನಂಬಿದ್ದರು. ಅಂಥ ಸಮೂಹವೊಂದರಲ್ಲಿ ಬದುಕುವ ವ್ಯಕ್ತಿಗಳು ತಮ್ಮ ಉಪಜಾತಿಗಳ ನಿಯಮಗಳಿಗನುಗುಣವಾಗಿ ತಂತಮ್ಮಲ್ಲಿಯೇ ಹಲಬಗೆಯ ಆಚರಣೆಗಳು–ವಿವಾಹ ಸಂಬಂಧಗಳನ್ನು ರೂಢಿಸಿಕೊಳ್ಳುತ್ತ ಸಹಜವಾಗಿ ಒಂದು ಉಪಜಾತಿ ಇನ್ನೊಂದಕ್ಕೆ ವಿರುದ್ಧವಾಗಿರುವ ಸ್ಥಿತಿಯನ್ನು ನಿರ್ಮಿಸುತ್ತದೆ. ಹಿಂಸೆ– ದೊಂಬಿಗಳಂಥ ಸಂಘರ್ಷದ ಸಂದರ್ಭವನ್ನು ಹೊರತುಪಡಿಸಿದರೆ ಒಂದು ಜಾತಿ ಇನ್ನೊಂದು ಜಾತಿಯೊಂದಿಗೆ ಸಾಮರಸ್ಯದಿಂದಿರುವ ಸ್ಥಿತಿ ಇರುವುದು ಅಸಾಧ್ಯ. ಜಾತಿಗಳ ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲ್ಜಾತಿಗಳಿಗೆ ಹೆಚ್ಚಿನ ಮನ್ನಣೆ ದೊರಕುವ ಕಾರಣದಿಂದ, ಒಂದು ಜಾತಿ ಇನ್ನೊಂದಕ್ಕಿಂತ ಬಹಳ ಮೇಲು ಎಂಬ ಅಹಂಕಾರದಿಂದ ಬೀಗುವ ಕಾರಣದಿಂದ, ಜಾತಿಗಳ ನಡುವೆ ಒಗ್ಗಟ್ಟು ನೆಲೆಸುವುದು ಅಸಾಧ್ಯವಾಗಿ ಪರಿಣಮಿಸುತ್ತದೆ.

ಜಾತಿ ವ್ಯವಸ್ಥೆಯ ಸಮರ್ಥನೆ ಗಾಂಧಿಯವರ ಚಿಂತನೆಯಲ್ಲಿರುವ ಬಹು ದೊಡ್ಡ ಮಿತಿಯಾಗಿತ್ತು. ಅವರು ಅಸ್ಪೃಶ್ಯತೆಯನ್ನು ಬಲವಾಗಿ ವಿರೋಧಿಸುತ್ತ ಜಾತಿವ್ಯವಸ್ಥೆಯ ಕಾರಣದಿಂದ ಇವತ್ತಿಗೂ ತಲೆಯ ಮೇಲೆ ಮಲಹೊತ್ತು ಜೀವನ ಸಾಗಿಸುವವರನ್ನು ಅತ್ಯಂತ ಗೌರವ–ಕೃತಜ್ಞತೆಗಳಿಂದ ಕಾಣಬೇಕೆಂದು ಹೇಳುತ್ತಿದ್ದರು. ಅದಕ್ಕಾಗಿಯೇ ತಮ್ಮ ಶೌಚಾಲಯವನ್ನು ತಾನೇ ಶುಚಿಗೊಳಿಸಿಕೊಳ್ಳುವ ಮಾನವೀಯವಾದ ಹಾಗೂ ಕ್ರಾಂತಿಕಾರಕವಾದ ಕೆಲಸಕ್ಕೆ ಕೈಹಾಕಿದರು. ಆದರೆ ಅಸ್ಪೃಶ್ಯತೆಯನ್ನು ಜಾತಿ ವ್ಯವಸ್ಥೆಯ ಆಕಸ್ಮಿಕ ಅನಾಹುತಗಳಲ್ಲೊಂದು ಎಂದದ್ದು ಮತ್ತು ಜಾತಿ ಪದ್ಧತಿಯನ್ನು ಶ್ರಮ ವಿಭಜನೆಯ ಕಾರಣಕ್ಕಾಗಿ ರೂಪುಗೊಂಡ ಹಿತಕಾರಿ ವ್ಯವಸ್ಥೆ ಎಂದು ಗಾಂಧಿಯವರು ಕರೆದದ್ದು ಅವರ ಮಹಾ ಪಾತಕಗಳಲ್ಲಿ ಒಂದಾಗಿದೆ.

ಯಾವ ಕೋನದಿಂದ ನೋಡಿದರೂ, ಅಸ್ಪೃಶ್ಯತೆಯನ್ನು ಹೊರತುಪಡಿಸಿಯೂ, ಜಾತಿಪದ್ಧತಿಯನ್ನು ಗಾಂಧಿಯವರು ಸಮರ್ಥಿಸಿದ್ದು ಹೇಗೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಹುಟ್ಟನ್ನು ಆಧರಿಸಿ ರೂಪುಗೊಂಡ ಸಾಮಾಜಿಕ ಶ್ರೇಣೀಕರಣವನ್ನು ಅವರು ಹೇಗೆ ಒಪ್ಪಿಕೊಳ್ಳಲು ಸಾಧ್ಯ? ಅದಕ್ಕಿಂತ ಮುಖ್ಯವಾಗಿ ಮಗುವೊಂದು ತನ್ನ ಸಹಜ ಸಾಮರ್ಥ್ಯ ಮತ್ತು ಶಕ್ತಿಯ ಕಾರಣದಿಂದಲ್ಲದೆ, ಕೇವಲ ಹುಟ್ಟಿನ ಆಕಸ್ಮಿಕದ ಕಾರಣಕ್ಕೆ ತನ್ನ ಉದ್ಯೋಗವನ್ನು ಆರಿಸಿಕೊಳ್ಳುವ ಕರ್ಮವನ್ನು ಗಾಂಧಿಯವರು ಹೇಗೆ ಸರಿಯೆನ್ನಲು ಸಾಧ್ಯ? ಅದಕ್ಕಾಗಿಯೇ ಬಾಬಾಸಾಹೇಬರು ಅಸ್ಪೃಶ್ಯತೆಯು ಜಾತಿ ಪದ್ಧತಿಯ ಆಕಸ್ಮಿಕವಾದ ಅನಾಹುತವಲ್ಲ. ಬದಲಾಗಿ ಹಿಂದೂ ಧರ್ಮದ ಒಳಗೇ ಅಂತರ್ಗತವಾಗಿರುವ ಕ್ರೌರ್ಯಕ್ಕೆ ಉದಾಹರಣೆಯಾಗಿದೆ ಎನ್ನುತ್ತಿದ್ದರು. ಜಾತಿ ಪದ್ಧತಿಯು ಶ್ರಮವಿಭಜನೆಯ ಆಧಾರದ ಮೇಲೆ ರೂಪಿತವಾಗಿರುವ ವ್ಯವಸ್ಥೆಯಾಗಿರದೆ, ಶ್ರಮಿಕರನ್ನು ವಿಭಜಿಸುವ ಕ್ರೂರ ಅಮಾನವೀಯ ವ್ಯವಸ್ಥೆ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು. ಜಾತಿ ವ್ಯವಸ್ಥೆಯೊಳಗೆ ಬಂದಿಯಾದವರು ಯಾವ ಕಾರಣಕ್ಕೂ ಮುಂಚಲನೆಯ ಅವಕಾಶವನ್ನೇ ಪಡೆಯದಿರುವುದರಿಂದ, ಜಾತಿ ಪದ್ಧತಿಯೆಂದರೆ ತನ್ನ ಜಾತಿಯೊಳಗೆ ಮಾತ್ರ ವಿವಾಹವಾಗಬಲ್ಲ ಸೀಮಿತ ಅವಕಾಶ ಕಲ್ಪಿಸುವ ಒಂದು ನಿರ್ಬಂಧಿತ ವ್ಯವಸ್ಥೆ ಎಂದು ಕರೆದರು. ಇಂಥ ನಿರ್ಬಂಧಿತ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಕೊಂಡವರು ತಮ್ಮ ಇಷ್ಟ ಮತ್ತು ಸಾಮರ್ಥ್ಯಗಳ ಕಾರಣದಿಂದಲ್ಲದೆ, ಪರಂಪರಾನುಗತವಾಗಿ ನಡೆಸಿಕೊಂಡು ಬಂದ ವೃತ್ತಿಗಳನ್ನೇ ಆಯ್ದುಕೊಳ್ಳುವ ಕರ್ಮಕ್ಕೆ ಅಂಟಿಕೊಂಡಿರುತ್ತಾರೆ. ಅದಕ್ಕಾಗಿಯೇ ಔದ್ಯೋಗೀಕರಣ ಮತ್ತು ಬಂಡವಾಳಗಳು ದಲಿತರಿಗೆ ಜಾತಿಯ ಸೂತಕವನ್ನು ಮೀರಲು ಸಹಾಯಕವಾಗುತ್ತವೆ ಎಂದು ಅಂಬೇಡ್ಕರ್ ಅವರು ನಂಬಿದ್ದರೆ, ಗಾಂಧಿಯವರು ಅವೆರಡನ್ನೂ ಬಲವಾಗಿ ವಿರೋಧಿಸಿದ್ದರು.

ಅಷ್ಟೇ ಅಲ್ಲದೆ, ಅಸ್ಪೃಶ್ಯತೆ ಮಾತ್ರ ಜಾತಿ ಪದ್ಧತಿಯ ಕೂಸಲ್ಲ, ಜಾತಿ ಪದ್ಧತಿಯೂ ಸಹ ಹಿಂದೂ ಧರ್ಮದ ಕರುಳಿನ ಕುಡಿಯೇ ಎಂಬುದು ಬಾಬಾಸಾಹೇಬರಿಗೆ ಸ್ಪಷ್ಟವಾಗಿತ್ತು. ಗಾಂಧಿಯವರು ಕೊನೆಯವರೆಗೂ ಒಬ್ಬ ಆಸ್ತಿಕ ಹಿಂದೂವಾಗಿಯೇ ಇದ್ದರು ಮತ್ತು ಸಾಯುವಾಗ ರಾಮನ ನಾಮವನ್ನು ಜಪಿಸಿಕೊಂಡೇ ಅಸು ನೀಗಿದರು. ಆದರೆ ಬಾಬಾಸಾಹೇಬರು ೧೯೩೬ರಲ್ಲಿಯೇ 'ನಾನು ಹಿಂದೂಧರ್ಮದಲ್ಲಿ ಹುಟ್ಟಿ ಸಹಿಸಲಾಗದ ಅವಮಾನಗಳನ್ನು ಅನುಭವಿಸಿದ್ದೇನೆ. ಅದಕ್ಕಾಗಿ ನಾನು ಹಿಂದೂ ಆಗಿಯೇ ಸಾಯಬಯಸುವುದಿಲ್ಲ' ಎಂದು ಘೋಷಿಸಿದರು. ಅವರು ಹಿಂದೂ ಧರ್ಮ ಎಂದರೆ, ಅರುಂಧತಿ ರಾಯ್‌ರ ರೂಪಕದಲ್ಲಿಯೇ ಹೇಳುವುದಾದರೆ, ಹೊರದಾರಿಗಳೂ ಇಲ್ಲದ, ಮೇಲ್‌ಚಲನೆಯೂ ಸಾಧ್ಯವಾಗದ ಒಂದು ಕೂಪ. ಅಲ್ಲಿರುವವರು ಎಲ್ಲಿ ಹುಟ್ಟಿದರೋ ಅಲ್ಲೇ ಸತ್ತುಬಿಡುವ ಕೂಪಮಂಡೂಕಗಳು. ಹಿಂದೂಧರ್ಮದ ವಿರುದ್ಧದ ಅವರ ಹೋರಾಟ ತಮ್ಮ ಸಾವಿಗೆ ಕೆಲವೇ ತಿಂಗಳುಗಳ ಮೊದಲು, ೧೯೫೬ರಲ್ಲಿ ಸಾವಿರಾರು ಅನುಯಾಯಿಗಳೊಂದಿಗೆ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವುದರೊಂದಿಗೆ ಮುಕ್ತಾಯಗೊಂಡಿತು.

ಬಾಬಾಸಾಹೇಬರು ಹುಟ್ಟಿದ್ದು ಮಧ್ಯಪ್ರದೇಶದ ಮಹೂ ಎಂಬಲ್ಲಿ ಮಹಾರ್‌ಸೇನೆ ಬೀಡುಬಿಟ್ಟಿದ್ದ ಕಂಟೋನ್ಮೆಂಟ್‌ನಲ್ಲಿ; ಕೆಳಜಾತಿಯ ಮಹಾರ್ ಕುಟುಂಬದಲ್ಲಿ. ಬಾಬಾರಿಗೆ ಶಿಕ್ಷಣ ಸಿಕ್ಕಿದ್ದು ಅವರ ತಂದೆ ಬ್ರಿಟಿಷರ ಸೇನೆಯಲ್ಲಿ ಕೆಲಸಕ್ಕಿದ್ದವರು ಎಂಬ ಕಾರಣಕ್ಕೆ. ಅವರು ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ

ಕಾನೂನನ್ನು ಅಧ್ಯಯನ ಮಾಡಿ ಬರೋಡಾ ಸಂಸ್ಥಾನದ ಆಡಳಿತಕ್ಕೆ ಸೇರಿದಾಗ ಅಲ್ಲಿ ಯಾವ ಅಂಕೆ-ಅಳುಕೂ ಇಲ್ಲದೇ ನಡೆಯುತ್ತಿದ್ದ ಅಮಾನವೀಯ ಜಾತಿಕ್ರೌರ್ಯ-ಅವಮಾನಗಳನ್ನು ನೋಡಿ ಬೇಸತ್ತು ಬಾಂಬೆಯ ಸೈಡೆನ್‌ಹ್ಯಾಮ್ ಕಾಲೇಜಿನಲ್ಲಿ ಪ್ರೊಫೆಸರ್ ಕೆಲಸಕ್ಕೆ ಸೇರಿದರು. ಅದೇ ಸಮಯಕ್ಕೆ ಗಾಂಧಿಯವರು ಸ್ವಾತಂತ್ರ್ಯ ಸಂಗ್ರಾಮವನ್ನು ಮುನ್ನಡೆಸಲು ಭಾರತಕ್ಕೆ ಹಿಂತಿರುಗಿದರು. ಶೋಷಿತ ಜನಾಂಗಗಳಲ್ಲಿ ಶಿಕ್ಷಣ- ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಅರಿವು ಮೂಡಿಸಲು, ಅವರಲ್ಲಿ ಸಂಘಟನೆಯ ಕಿಚ್ಚು ಮೂಡಿಸಲು ೧೯೨೪ರಲ್ಲಿ ಅವರು ಬಹಿಷ್ಕೃತ ಹಿತಕಾರಿಣಿ ಸಭಾವನ್ನು ಸ್ಥಾಪಿಸಿದರು.

೧೯೨೭ ರಲ್ಲಿ ಅವರು ಅಸ್ಪೃಶ್ಯರಿಗೆ ಕೆರೆ ಬಾವಿಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ನೀರನ್ನು ಪಡೆಯುವ, ದೇವಾಲಯಗಳಿಗೆ ಪ್ರವೇಶಿಸುವ ಹಕ್ಕುಗಳನ್ನು ಪಡೆಯುವ ಸಲುವಾಗಿ ಮಹಾಡ್ ಸತ್ಯಾಗ್ರಹವನ್ನು ಆರಂಭಿಸಿದ್ದರು. ಮಹಾಡ್‌ನಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಚಾವ್ದಾರ್ ಕೆರೆಗೆ ಜಾಥಾದಲ್ಲಿ ನಡೆದು ಸಾರ್ವಜನಿಕವಾಗಿ ಕೆರೆಯ ನೀರನ್ನು ಕುಡಿಯುವ ಮೂಲಕ ಜಾತಿವ್ಯವಸ್ಥೆಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ದಾಖಲಿಸಿದರು. ಮುಂದುವರೆದು ಬಾಬಾಸಾಹೇಬರು ತಮ್ಮ ಅನುಯಾಯಿಗಳೊಂದಿಗೆ ಅಲ್ಲಿನ ದೇವಾಲಯವನ್ನು ಪ್ರವೇಶಿಸಬಹುದೆಂಬ ಭಯದಿಂದ ಮೇಲ್ಜಾತಿಯುವರು ಗಲಭೆಯ ವಾತಾವರಣವನ್ನು ನಿರ್ಮಿಸಿದರು. ಅಸ್ಪೃಶ್ಯರು ಕೆರೆಯ ನೀರನ್ನು ಮುಟ್ಟಿ ಕಲುಷಿತಗೊಳಿಸಿಬಿಟ್ಟರು ಎಂಬ ಕಾರಣಕ್ಕೆ ಅಲ್ಲಿಯ ಮೇಲ್ಜಾತಿಯ ಜನ ಕೆರೆಯ ನೀರನ್ನು ಶಾಸ್ತ್ರೋಕ್ತ ವಿಧಿವಿಧಾನಗಳನ್ನು ಅನುಸರಿಸಿ ಶುದ್ಧೀಕರಿಸಿದರು. ಅಲ್ಲದೆ ಕೆರೆಯನ್ನು ಖಾಸಗಿ ಆಸ್ತಿ ಎಂದು ವಾದಿಸಿ ಬಾಬಾಸಾಹೇಬರ ವಿರುದ್ಧ ಕೇಸೊಂದನ್ನು ಹಾಕಲಾಯಿತು. ಡಿಸೆಂಬರ್ ೨೫ರಂದು ಬಾಬಾಸಾಹೇಬರು ತಮ್ಮ ಪ್ರತಿಭಟನೆಯ ಅಂಗವಾಗಿ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಬೆಂಕಿಗೆ ಹಾಕಿದರು. ವರ್ಷಗಳ ನಂತರ ೧೯೩೭ ಡಿಸೆಂಬರ್‌ನಲ್ಲಿ ಬಾಂಬೆ ಹೈಕೋರ್ಟು ಅಸ್ಪೃಶ್ಯರಿಗೆ ಸಾರ್ವಜನಿಕ ಕೆರೆಗಳಲ್ಲಿ ನೀರನ್ನು ಕುಡಿಯುವ ಹಕ್ಕು ಇದೆ ಎಂಬ ತೀರ್ಪನ್ನು ನೀಡಿತು.

ಇದಾದ ಹಲವು ದಶಕಗಳ ನಂತರವೂ, ನಾನು ಪರಿಶಿಷ್ಟ ಜಾತಿಗಳ ಕಲ್ಯಾಣ ವಿಭಾಗದ ಅಧಿಕಾರಿಯಾಗಿ ಕೆಲಸ ಮಾಡಿದ ಹಲವಾರು ಜಿಲ್ಲೆಗಳಲ್ಲಿ ಅಷ್ಟೇ ಅಲ್ಲ ದೇಶದ ಹಲವಾರು ಕಡೆಗಳಲ್ಲಿ ಇಂದಿಗೂ ಸಹ ಅಸ್ಪೃಶ್ಯರು ಬಾವಿಗಳಿಂದ ನೀರು ಸೇದುವ, ದೇವಾಲಯಗಳಲ್ಲಿ ಪ್ರವೇಶಿಸುವ ಹಕ್ಕನ್ನು ಪಡೆದುಕೊಂಡಿಲ್ಲ ಎಂಬ ವಿಷಯ ತಿಳಿದು ನನಗೆ ಬಹಳ ಆಘಾತವಾಯಿತು. ಮಧ್ಯಪ್ರದೇಶದ ಸಾಗರ ಜಿಲ್ಲೆಯ ಹಳ್ಳಿಯೊಂದರಲ್ಲಿ ದಲಿತ ಯುವಕನೊಬ್ಬ ಮೇಲ್ಜಾತಿಯವರ ಕೇರಿಗಳಲ್ಲೆಲ್ಲ ಬಹಳಷ್ಟು ಹ್ಯಾಂಡ್‌ಪಂಪ್‌ಗಳು ಇರುವುದರಿಂದ, ದಲಿತರ ಕೇರಿಗಳಲ್ಲಿ ಕನಿಷ್ಟ ಒಂದಾದರೂ ಹ್ಯಾಂಡ್‌ಪಂಪ್‌ನ್ನು ಕೊರೆಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟ. ಆದರೆ ಇದರಿಂದ ಆಕ್ರೋಶಕೊಂಡ ಅಲ್ಲಿನ ಮೇಲ್ಜಾತಿಯ ಜನ ಅಲ್ಲಿನ ಅಸ್ಪೃಶ್ಯರಿಗೆ ಬಹಿಷ್ಕಾರ ಹಾಕಿ, ದೊಂಬಿ ಮಾಡಿ ಕೊನೆಗೆ ದಲಿತರು ತಮ್ಮ ಬೇಡಿಕೆಯನ್ನು ಕೈಬಿಡುವ ಸ್ಥಿತಿಯನ್ನು ಸೃಷ್ಟಿಸಿದರು. ಬಿಲಾಸ್‌ಪುರದಲ್ಲಿ ದಲಿತನೊಬ್ಬ ಬಹಳ ಭಕ್ತಿಯಿಂದ ಮರದ ಕೆಳಗಿದ್ದ ಹನುಮಾನ್ ಪ್ರತಿಮೆಯೊಂದಕ್ಕೆ ಭಕ್ತಿಯಿಂದ ಪ್ರಣಾಮ ಮಾಡಿದ್ದಕ್ಕೆ ಪ್ರತಿಯಾಗಿ ಅಲ್ಲಿನ ಜನ ಅವನ ಮೇಲೆ ಹಲ್ಲೆ ಮಾಡಿ, ಹಳ್ಳಿಯಿಂದ ಬಹಿಷ್ಕಾರ ಹಾಕಿದರು. ನಾನು ಇವೆರಡು ಘಟನೆಗಳನ್ನು ಕುರಿತು ಬರೆದುದನ್ನು ಆಧರಿಸಿ ಶ್ಯಾಮ್‌ಬೆನಗಲ್ ಅವರು 'ಸಮರ್'ಎಂಬ ಸಿನಿಮಾವನ್ನು ಮಾಡಿದರು. ಆದರೆ ಈ ಘಟನೆಗಳು ಆಕಸ್ಮಿಕವಾಗಿ ನಡೆದವಲ್ಲ ಬದಲಾಗಿ ಪ್ರತಿದಿನವೂ ಇಂಥ ಘಟನೆಗಳು ದೇಶದ ಉದ್ದಗಲಕ್ಕೂ ನಡೆಯುತ್ತಲೇ ಇವೆ. ೧೯೨೭ರ ಮಹಾಡ್ ಸತ್ಯಾಗ್ರಹದ ವೇಳೆ ಬಾಬಾಸಾಹೇಬರು ಹೇಳಿದ ಮಾತುಗಳು ಇನ್ನೂ ನನ್ನ ಕಿವಿಗಳಲ್ಲಿ ಅನುರಣಿಸುತ್ತಲೇ ಇವೆ:

"ಚಾವ್ದಾರ್ ಕೆರೆಯ ನಿರನ್ನು ಕುಡಿದ ತಕ್ಷಣ ನಾವ್ಯಾರೂ ಅಮೃತ ಪುತ್ರರಾಗಿ ಬಿಡುತ್ತೇವೆ ಎಂದು ಭಾವಿಸಿಲ್ಲ. ನಾವೆಲ್ಲ ಈ ನೀರನ್ನು ಕುಡಿಯದೆಯೇ ಇಲ್ಲಿಯವರೆಗೆ ಬದುಕಿದ್ದೇವೆ. ನಾವು ಚಾವ್ದಾರ್ ಕೆರೆಯ ನೀರನ್ನು ಕುಡಿಯುವುದಕ್ಕೆ ಮಾತ್ರ ಹೋರಾಟಮಾಡುತ್ತಿಲ್ಲ. ಬದಲಾಗಿ ನಾವು ಕೆರೆಯ ನೀರನ್ನು ಕುಡಿಯುವ ಮೂಲಕ ನಾವೂ ಮನುಷ್ಯರು ಎಂಬುದನ್ನು ತೋರಿಸಲು ಹೊರಟಿದ್ದೇವೆ. ಅದರ ಮೂಲಕ ಸಮಾನತೆಯನ್ನು ಸ್ಥಾಪಿಸಲು ಹೊರಟಿದ್ದೇವೆ"

ಇಂಥ ಜಾತಿಶೋಷಣೆಯ ವಿರುದ್ಧ ಎಲ್.ಎಸ್.ರೋಕಡೆಯವರು ಬರೆದ ಸಾಲುಗಳು ಹೀಗಿವೆ:

**"ಅಮ್ಮಾ ನಾನು ಹುಟ್ಟುವಾಗ ನೀನು ಬಹಳ ನೋವು ಅನುಭವಿಸಿದೆಯೆಂದು ಹೇಳುತ್ತಿದ್ದೆ**
**ನಿನ್ನ ನೋವು ಇಷ್ಟು ದೀರ್ಘವಾಗಿದ್ದಕ್ಕೆ ಕಾರಣವೇನೆಂದರೆ**
**ನಿನ್ನ ಗರ್ಭದಲ್ಲಿರುವ ನಾನು**
**ಹುಟ್ಟಿ ಬರುವುದೊ ಬೇಡವೋ ಎಂದು ಯೋಚಿಸುತ್ತಿದ್ದೆ**
**ನಾನು ಈ ಜಗತ್ತಿನಲ್ಲಿ ಹುಟ್ಟಿ ಬರಲೇಬೇಕಾ ಎಂದು ಯೋಚಿಸುತ್ತಿದ್ದೆ**
**ಅಮ್ಮಾ, ನೀನು ಬದುಕಿರುವ ಈ ಜಗತ್ತಿನಲ್ಲಿ**
**ನದಿಗಳು ತುಂಬಿ ಹರಿಯುತ್ತಿವೆ**
**ಕೆರೆಗಳು ಕೋಡಿಬಿದ್ದು ಹೋಗುತ್ತಿವೆ**
**ಇಂತಹ ಕಡೆ ಮನುಷ್ಯರಾದ ನಾವು**
**ಒಂದು ಬೊಗಸೆ ನೀರು ಕುಡಿಯಬೇಕೆಂದರೆ**
**ಅದಕ್ಕೆ ನಮ್ಮ ರಕ್ತವನ್ನೇ ಹರಿಸಬೇಕಾಗುತ್ತದೆ....."**

ನನಗೆ ಬಾಬಾಸಾಹೇಬರನ್ನು ಕುರಿತು ಇರುವ ವಿಶೇಷ ಪ್ರೀತಿ-ಗೌರವಕ್ಕೆ ಕಾರಣ ಅವರು ಈ ದೇಶದ ಸಂವಿಧಾನವನ್ನು ರಚಿಸಿ, ಅದನ್ನು ಪ್ರಪಂಚದ ಎಲ್ಲ ಶೋಷಿತರ ಪರವಾದ ಆಡಳಿತ ರಚನೆಗೆ ಸಾಧನವಾಗಬಹುದಾದ ದಾಖಲೆಯಾಗುವಂತೆ ಮಾಡಿದ್ದಕ್ಕೆ. ಸಂವಿಧಾನದ ಎಲ್ಲ ಪುಟಗಳಲ್ಲಿ ಬಾಬಾಸಾಹೇಬರ ಶೋಷಿತರ ಪರವಾದ ಕಾಳಜಿ, ಬದ್ಧತೆಗಳು ಎದ್ದು ಕಾಣುತ್ತವೆ. ಅದರಲ್ಲೂ ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಅವರು ಸಮಾನತೆ-ನ್ಯಾಯದ ತಳಹದಿಯ ಮೇಲೆ ನಿರ್ಮಿಸಬೇಕೆಂದಿರುವ ಸಮಾಜದ ಕುರುಹುಗಳು ಸಿಗುತ್ತವೆ.

ಬಾಬಾ ಸಾಹೇಬರು ತಮ್ಮ ಜೀವಿತದ ಕೊನೆಗಾಲದವರೆಗೂ ರಾಜಕೀಯ ಸಮಾನತೆಗಾಗಿ ಹೋರಾಡಿದರೂ ಕೇವಲ ಅದರಿಂದ ಮಾತ್ರ ಸಾಮಾಜಿಕ-ಆರ್ಥಿಕ ಸಮಾನತೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಇನ್ನೂ ದೀರ್ಘ ಹೋರಾಟ ನಡೆಸಬೇಕೆಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿತ್ತು. ಅವರು ಆಕಾಶವಾಣಿಯಲ್ಲಿ ೧೯೫೪ರ ಅಕ್ಟೋಬರ್ ೩ರಂದು ಹೇಳಿದ ಮಾತುಗಳು ಭವಿಷ್ಯದ ಮುನ್ಸೂಚನೆಯಂತಿವೆ: 'ಭಾರತೀಯರನ್ನು ಈಗ ಎರಡು ಬಗೆಯ ಸಿದ್ಧಾಂತಗಳು ಆಳುತ್ತಿವೆ. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಗಳು ಇಲ್ಲಿನ ಜನರ ರಾಜಕೀಯ ಆದರ್ಶ ಎಂಬಂತೆ ಭಾರತದ ಸಂವಿಧಾನ ಎತ್ತಿಹಿಡಿದರೆ, ಅದಕ್ಕೆ ವಿರುದ್ಧವಾಗಿ ಇಲ್ಲಿನ ಜನರ ಸಾಮಾಜಿಕ ಆದರ್ಶವನ್ನು ಎತ್ತಿಹಿಡಿಯುವ ಧರ್ಮಗಳು ಇವೆಲ್ಲವನ್ನೂ ನಿರ್ನಾಮ ಮಾಡಲು ಹೊರಟಿವೆ'.

ಅವರು ತಮ್ಮ ಮಾತುಗಳಲ್ಲಿ ಅನೇಕ ಬಾರಿ ಭಾರತದ ಸಂವಿಧಾನವು ದೇಶದ ಎಲ್ಲ ಧರ್ಮಗಳು, ನಂಬಿಕೆಗಳು, ಪಂಥಗಳು ಎತ್ತಿ ಹಿಡಿಯುವ ನ್ಯಾಯಕ್ಕಿಂತ ಹೆಚ್ಚಿನ ನ್ಯಾಯವನ್ನು ಸ್ಥಾಪಿಸುವ ಉದ್ದೇಶದಿಂದ ಹೊರಟಿದೆ ಎನ್ನುತ್ತಿದ್ದರು. ಅದು ಎತ್ತಿಹಿಡಿಯುವ ನ್ಯಾಯ ಕೆಲವೊಮ್ಮೆ ನಾವು ನಂಬಿಕೊಂಡು ಬಂದಿರುವ ವೈಯುಕ್ತಿಕ ನಂಬಿಕೆಗಳ ವಿರುದ್ಧವಾಗಿ ಕಾಣಿಸಿದರೂ ಅದಕ್ಕೆ ಇರುವ ನ್ಯಾಯ ಬದ್ಧತೆಯನ್ನು ಯಾರೂ ಅನುಮಾನಿಸಬೇಕಿಲ್ಲ. ದಶಕಗಳ ನಂತರ ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ ೩೭೭ ನ್ನು ಕುರಿತು(ಇದರ ಪ್ರಕಾರ ಸಲಿಂಗ ಕಾಮ ಒಂದು ಅಪರಾಧ) ನ್ಯಾಯಮೂರ್ತಿಗಳಾದ ಎ.ಪಿ.ಶಾ ಮತ್ತು ಮುರಳೀಧರ ಅವರು ಐತಿಹಾಸಿಕ ತೀರ್ಪನ್ನು ನೀಡುವಾಗ ಸಾರ್ವಜನಿಕ ನ್ಯಾಯ ಮತ್ತು ಸಾಂವಿಧಾನಿಕ ನ್ಯಾಯದ ನಡುವಿನ ವ್ಯತ್ಯಾಸವನ್ನು ಕುರಿತು ಉಲ್ಲೇಖಿಸುತ್ತಾರೆ. ಇವೆರಡಕ್ಕೂ ಸಂಘರ್ಷ ಉಂಟಾದಾಗ ನಾವು ಎತ್ತಿ ಹಿಡಿಯಬೇಕಾದದ್ದು ಸಾಂವಿಧಾನಿಕ ನ್ಯಾಯವನ್ನೇ ಎಂದು ಅವರು ಅಭಿಪ್ರಾಯಪಡುತ್ತಾರೆ.

ಬಾಬಾ ಸಾಹೇಬರು ಸ್ವಾತಂತ್ರ್ಯ, ಸಮಾನತೆಗಳಿಗೆ ಒತ್ತನ್ನು ನೀಡಿದಂತೆ ಸಹೋದರತೆಗೂ ಸಹ ಅಷ್ಟೇ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಸಹೋದರತೆಯಿಂದ ಕೂಡಿ ಬಾಳುವ ಸ್ಥಿತಿ ನಿರ್ಮಾಣವಾಗಿ ಕ್ರಮೇಣ ಅದು ನ್ಯಾಯಪರ-ಸಮಾನ ಸಮಾಜಕ್ಕೆ ಬುನಾದಿಯಾಗುತ್ತದೆ. ಅವರ ಪ್ರಕಾರ ವ್ಯಕ್ತಿಯೊಬ್ಬನಿಗೆ ಬೇರೊಬ್ಬರನ್ನು ಪ್ರೀತಿ-ಗೌರವದಿಂದ ಕಾಣುವುದು ಸಾಧ್ಯವಾದರೆ ಎಲ್ಲರೊಳಗೆ ಬೆರೆತು ಬದುಕುವ ಹಂಬಲವೂ ಉಂಟಾಗುತ್ತದೆ. ಅವನು ತನ್ನ ಮನಸ್ಸಿನಲ್ಲಿ ನನ್ನ ನೆರೆಹೊರೆಯವರು ನನಗೆ ಸೋದರರಿದ್ದಂತೆ ಎಂದುಕೊಳ್ಳಲು ಆರಂಭಿಸಿದರೆ, ನಿಧಾನವಾಗಿ ಅಲ್ಲಿ ಸೋದರಿಯರೂ ಸಹ ಕಾಣತೊಡಗುತ್ತಾರೆ. ಅದರ ಮೂಲಕವೇ ನಮ್ಮ ಸಮಾಜದ ಆದರ್ಶಗಳಾದ ಧರ್ಮ ನಿರಪೇಕ್ಷತೆ, ಸಮಾನತೆ, ಬಹುತ್ವದ ಎಲ್ಲ ಆಶಯಗಳೂ ಸಾಕಾರಗೊಂಡು ಸಾಮೂಹಿಕ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯ ಎನಿಸಿಕೊಳ್ಳುತ್ತದೆ.

(ಕನ್ನಡಕ್ಕೆ: **ಡಾ.ಎಸ್. ಸಿರಾಜ್ ಅಹಮದ್**)

(ಕೃಪೆ: **ಜನತಾ,** ಆಗಸ್ಟ್ ೩೧, ೨೦೧೪)

# ವಿಜಯ ಪಾಟೀಲ: ಇನ್ನಷ್ಟು ನೆನಪುಗಳು



'ಹೊಸ ಮನುಷ್ಯ' ನವೆಂಬರ್ ಸಂಚಿಕೆಯಲ್ಲಿ ಇಂದಿರಾ. ಬಿ. ಕೃಷ್ಣಪ್ಪ ಬರೆದ 'ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ'ಯ ಅಂಕಣದಾಗ "ಸೋದರ ವಿಜಯ ಪಾಟೀಲನನ್ನು ಹುಡುಕುತ್ತಾ ....." ಎಂಬ ಲೇಖನವನ್ನು ಓದಿ ನಾನು ಅಕ್ಷರಶಃ ಮೂರು ದಶಕಗಳಷ್ಟು ಹಿಂದೆ ಹೋದೆ. ೧೯೭೪ರಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಧಾರವಾಡಕ್ಕೆ ಬಂದಿದ್ದ ಜಯಪ್ರಕಾಶ ನಾರಾಯಣರ ನವನಿರ್ಮಾಣ ಚಳುವಳಿಯಿಂದ ಹಿಡಿದು ೧೯೮೨ರ ಗೋಕಾಕ ವರದಿ ಚಳುವಳಿ ವರೆಗಿನ ನನ್ನ ಅವನ ಗೆಳೆತನದ ನೆನಪಿಗೆ ಜಾರಿದೆ. ಮತ್ತೆ ಎಲ್ಲ ನೆನಪಾಯಿತು. ಧಾರವಾಡದ ಹೋಟೆಲ್ ಕಾರ್ಮಿಕರ ಕನಿಷ್ಟ ವೇತನಕ್ಕಾಗಿ ನಡೆಸಿದ ಹೋರಾಟದ ದಿನಗಳತ್ತ ನೆನಪು ಜಾರುತ್ತಲೇ ಹಿಂದೆ ಸರಿದೆ. ಆಗ ನಾವು ಹೋಟೆಲ್ ಮುಂದೆ ನಡೆಸಿದ ಒಂದು ವಾರದ ಧರಣಿ, ನಿತ್ಯ ಸಂಜೆ ಬಂಡಾಯದ ಗೆಳೆಯರು ಹೋರಾಟದ ಹಾಡುಗಳನ್ನು ಹಾಡುವದನ್ನು ಮೆಲಕು ಹಾಕಿಕೊಂಡೆ. ತೆಳ್ಳಗೆ ನೀಳಕಾಯ, ಕಾಲೇಜು ವಿದ್ಯಾರ್ಥಿಯಾಗಿಂದಲೂ ಆತ ಡ್ರೆಸ್ ಬಗ್ಗೆ ಅಷ್ಟೊಂದು ನಿಗಾ ವಹಿಸುತ್ತಿರಲಿಲ್ಲ. ಧಾರವಾಡದ ಟ್ಯಾಗೋರ್ ಹಾಲ್‌ದಲ್ಲಿ ಅಂದಿನ 'ಮಹಾ ವಿಚಾರವಾದಿ' ಅಬ್ರಾಹಮ್ ಕೋವೂರ ಸಮ್ಮುಖದಲ್ಲಿ ನಡೆದ ಆತನ ಸರಳ ವಿವಾಹ ಕಣ್ಣಮುಂದೆ ಕಟ್ಟಿತು. ಅಂದು ನಮ್ಮೆಲ್ಲ ಗೆಳೆಯರಿಗೆ ಕ್ರಾಂತಿಕಾರಿ ಎಂಬಂತೆ ಕಂಡ. ಇಂದಿರಾ ಅವರು ವಿಜಯನನ್ನು ಭೆಟ್ಟಿಯಾಗಲು ಹತ್ತಿಮತ್ತೂರ ಬಳಿಯ ಡೊಂಬರಮತ್ತೂರಿಗೆ ಹೋದಾಗ ಅವನ ಅಸ್ತವ್ಯಸ್ತ ಧಿರಿಸಿನ ಬಗ್ಗೆ ಪ್ರಸ್ತಾಪ ಮಾಡಿದ್ದರು. ತನ್ನ ಮದುವೆಯ ದಿನದಂದೇ ಆತ ಠೀಕು ಠಾಕು ಡ್ರೆಸ್ ಹಾಕಿಕೊಂಡಿರಲಿಲ್ಲ ಎಂಬುದು ನೆನಪಾಯಿತು.

ಆತನ ಪತ್ನಿ ಶಿಕ್ಷಕಿ (ಈಗ ನಿವೃತ್ತ) ದೇವಿಕಾ ಅವರು ಇತ್ತೀಚೆಗೆ ಇಂದಿರಾ ಕೃಷ್ಣಪ್ಪ ಅವರೊಂದಿಗೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸಿಕ್ಕಾಗ ಈ ವಿಷಯ ಹೇಳಿಕೊಂಡಿದ್ದೆ. ಗೋಕಾಕ ಚಳುವಳಿ ಸಂದರ್ಭದಲ್ಲಿ ಧಾರವಾಡದಿಂದ ಹುಬ್ಬಳ್ಳಿ ಮಾರ್ಗವಾಗಿ ಗದಗವರೆಗೆ ಚಳುವಳಿಯ ನೇತಾರರು ಯಾತ್ರೆ ಕೈಕೊಂಡಿದ್ದರು. ಪಾಪು, ಚೆನ್ನವೀರ ಕಣವಿ, ಚಂಪಾ, ಡಾ. ರಾಜಕುಮಾರ, ಅನಂತನಾಗ, ಶಂಕರನಾಗ ಸೇರಿದಂತೆ ಅನೇಕ ಜನ ದಿಗ್ಗಜರು ನೇತೃತ್ವ ವಹಿಸಿದ್ದ ಅಂದಿನ ಆ ಯಾತ್ರೆಯಲ್ಲಿ, ಅಸಂಖ್ಯಾತ ಯುವಕರು, ವಿವಿಧ ಕನ್ನಡ ಸಂಘಟನೆಗಳ ಕಾರ್ಯಕರ್ತರ ದಂಡು ಇದ್ದವು. ನಾನು ವಿಜಯ ಸೇರಿದಂತೆ ನಮ್ಮ ಅನೇಕ ಮಿತ್ರರಿದ್ದರು.

ಆದರೆ ವಿಜಯ ಮಾತ್ರ ತಾನು ಆ ಚಳುವಳಿ ಬಗ್ಗೆ ಬರೆದ ಲೇಖನ, ಹಾಡುಗಳ ಕಿರು ಪುಸ್ತಕಗಳನ್ನು ಜನಸಾಗರದಲ್ಲಿ ಮಾರುವದರಲ್ಲಿಯೇ ತಲ್ಲೀನನಾಗಿದ್ದ. ಯಾತ್ರೆ ಗದುಗಿನ ತೋಂಟದಾರ್ಯ ಮಠ ತಲುಪಿದಾಗ ಅಲ್ಲಿ ಎಲ್ಲರಿಗೂ ಊಟದ ವ್ಯವಸ್ಥೆ ಇತ್ತು. ಆ ಮಾರಾಯ ಮಠದ ಒಳಗೂ ಬರಲಿಲ್ಲ. "ಒಳಗ ಬಾರೋ ಊಟ ಮಾಡಿಯಂತೆ" ಅಂತ ನಾ ಕರದರ "ನಾ ಪುಸ್ತಕ ಮಾರಬೇಕೋ ಬಟ್ಟಾ ಆಮ್ಯಾಲ ಮಠದ ಎದುರಿಗೆ ಸಿಗತಾವಲ್ಲ ಚುರುಮರಿ, ಮಿರ್ಚಿ ತಿಂತೀನಿ" ಅಂದಿದ್ದ.

ಮುಂದೆ ೧೯೮೪ರ ಸುಮಾರಿಗೆ ಒಮ್ಮೆ ಹುಬ್ಬಳ್ಳಿ ಬಸ್‌ಸ್ಟ್ಯಾಂಡ್‌ನಲ್ಲಿ ಅಕಸ್ಮಾತ ಸಿಕ್ಕಿದ್ದ. ನಾನು ಅವನು ಧೋತರ ಉಟ್ಟಿದ್ದನ್ನೇ ನೋಡಿರಲಿಲ್ಲ. ಅವತ್ತು ಧೋತರ, ಅದರ ಮೇಲೊಂದು ಹಾವೇರಿ ಕಡಿಯ ರೈತರು ಧರಿಸುವಂಥ ಅಂಗಿ ಹಾಕಿದ್ದ. ಅಂವಗ ಕೃಷಿ ಇಲಾಖೆಯಲ್ಲಿ ನೌಕರಿ ಸಿಕ್ಕಿದ್ದು ನನಗ ಗೊತ್ತಿತ್ತು. "ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಸೇರಿದ್ದರಿಂದ ರೈತರಂಗ ಧೋತ್ರಾ ಉಟ್ಟಿಯೋ ಏನೋ" ಅಂದೆ. ಅಂವಾ ತನ್ನ ಅಂಗಿ ಕಿಸೇದಾಗ ಕೈ ಹಾಕಿ ಒಂದು ಹಿಡಿ ಭತ್ತ ತಗದಾ. ಅದನ್ನ ತೋರಿಸಿ "ಇದೇನ ಹೇಳ" ಅಂದಾ. "ಅಷ್ಟು ಗೊತ್ತಿಲ್ಲೇನ ನಂಗ ಭತ್ತಾ ಅವು" ಅಂದೆ. "ನಾ ಬೆಳದ ಭತ್ತ ಇವು, ಇವನ್ನ ನೀ ನೋಡಿಲ್ಲ" ಅಂದಾ. "ಮತ್ತ ನೌಕರಿ" ಅಂದರ, ಅದಕ್ಕ ಶರಣ ಹೇಳಿ ಕಮತಾ ಮಾಡಸಾಕತ್ತೇನೋ" ಅಂದ. ನಾ ದಂಗಾದೆ. ಯಾಕಂದರ ಏನಿಲ್ಲಂದರೂ ಈ ವರ್ಷ ಕನಿಷ್ಟ ಡೆಪ್ಯೂಟಿ ಡೈರೆಕ್ಟರ್ ಆಗಿ ರಿಟಾಯರ್ಡ್ ಆಗತಿದ್ದ. ಆದ್ರ ಇಂದಿರಾ ಅವರ ಲೇಖನ ಓದಿದ ಮ್ಯಾಲ ಅಂವಾ ಕಮತ ಮಾಡಿಸಿ ಟಾಯರ್ಡ್ ಆಗಿದ್ದ ಅಂತ ತಿಳಿತು. ಆಮ್ಯಾಲ ಅವಗ ನನಗ ಭೆಟ್ಟಿಯೇ ಆಗಿರಲಿಲ್ಲಾ. ಯಾವಾಗರ ನಮ್ಮ ಗೆಳೆಯರು ಸೇರಿದಾಗ ಅವನ ಬಗ್ಗೆ 'ಡಿಸ್‌ಕಸ್' ಮಾಡತಿದ್ದೀವಿ. ಡಾ. ಅಶೋಕ ಶೆಟ್ಟರ ಒಮ್ಮೆ ಸಿಕ್ಕಾಗ "ಅವನ ಮಗಳು ವಿಮೋಚನಾಳ ಮದುವೆಗೆ ಹೋಗಿದ್ದೆ. ಅವನು ಬಂದಿದ್ದಾ, ಆದರ ಮಾತು ಅಷ್ಟಕ್ಕಷ್ಟ" ಅಂದ. ನಾನು ಇಂದಿರಾ ಅವರ ಲೇಖನದ ಪುಟದ ಝೆರಾಕ್ಸ್ ಮಾಡಿಸಿ ಅಶೋಕನಿಗೆ ಮುಟ್ಟಿಸಿದೆ.

**–ಗಣೇಶ ಜೋಷಿ,** ಧಾರವಾಡ

ನವೆಂಬರ್ ಸಂಚಿಕೆಯಲ್ಲಿ ವಿಜಯ ಪಾಟೀಲರ ಬಗ್ಗೆ ಓದಿ ಬೇಸರವಾಯಿತು. ನಾನು ಎಂಬತ್ತರ ದಶಕದಲ್ಲಿ ಬೆಂಗಳೂರಿನ ಕೃಷಿ ಕಾಲೇಜನ್ನು ಸೇರಿದ್ದಾಗ ಮೊದಲ ಬಾರಿಗೆ ಇವರ ಬಗ್ಗೆ ಕೇಳಿದ್ದೆ. ಅವರೂ ನಮ್ಮಂತೆಯೇ ಕೃಷಿ ವಿದ್ಯಾರ್ಥಿಯೇ ಆಗಿದ್ದು, ನಮಗಿಂತ ತುಂಬ ಸೀನಿಯರ್. ಅವರನ್ನು ಒಮ್ಮೆ ಕರೆಸಿ ಆಗ ಪ್ರಚಲಿತವಿದ್ದ ಹಸಿರು ಕ್ರಾಂತಿ ಪ್ರೇರಿತ ಆಧುನಿಕ ಕೃಷಿ ಪದ್ಧತಿಗೆ ಪರ್ಯಾಯವಾದ ಪದ್ಧತಿಗಳ ಬಗ್ಗೆ ಮಾತಾಡಿಸಿದ್ದೆವು. ಈ ಹಿನ್ನೆಲೆಯಲ್ಲಿ ಕೆಲವು ಮಾತುಗಳನ್ನು ಬರೆಯುತ್ತಿದ್ದೇನೆ.

ಆಧುನಿಕತೆಯ ಸೋಂಕಿಗೆ ಒಳಗಾದ ಮೊದಲ ಕ್ಷೇತ್ರವಾದ ಕೃಷಿಯಲ್ಲಿಯೇ ಪರ್ಯಾಯದ ಮೊದಲ ಮಾತುಗಳು ಆರಂಭವಾಗಿದ್ದವು. ವಿಪರ್ಯಾಸವೆಂದರೆ ಕೃಷಿಗೆ ಆಧುನಿಕತೆಯ ಪಾಠ ಹೇಳಿದ ವಿಜ್ಞಾನಿಯೇ ಆತಂಕದ ಮಾತುಗಳನ್ನಾಡಲಾರಂಭಿಸಿದ್ದ. ಅದಿನ್ನೂ ೧೯೫೦ರ ಸಮಯ. ಅದೇನೇ ಇದ್ದರೂ, ನಮ್ಮಲ್ಲಿ ಪರ್ಯಾಯದ ನಿಜವಾದ ಗಾಳಿ ಬೀಸಿದ್ದು ೬೦ರ ದಶಕದ ನಂತರವೇ. ಆದರೂ ೭೦ರ ದಶಕದವರೆಗೆ ಅದರ ತೀಕ್ಷ್ಣತೆ ಹೆಚ್ಚಿರಲಿಲ್ಲ. ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ, ೮೦ರ ದಶಕದಲ್ಲಿ ಧಾರವಾಡದಲ್ಲಿ ನೆಲೆಗೊಂಡಿದ್ದ ಮನಃಶಾಸ್ತ್ರ ಪ್ರಾಧ್ಯಾಪಕರೊಬ್ಬರ ಈ ಸಂಬಂಧದ ಮಾತುಗಳು ಮುಂಚೂಣಿಗೆ ಬಂದು, ಅಭಿವೃದ್ಧಿಯ ಪರ್ಯಾಯಗಳ ಬಿಸಿ ಬಿಸಿ ಚರ್ಚೆ ಆರಂಭವಾಗಿತ್ತು. ಈ ಗೋಜಲಲ್ಲಿ ಕೆಲವರು ತೊಂದರೆಗೆ ಸಿಕ್ಕಿಕೊಂಡರೆ ಕೆಲವರು ಗದ್ದುಗೆಗಳನ್ನು ಭದ್ರ ಮಾಡಿಕೊಂಡರು. ನಾನು ಕೂಡ ಆ ಗೋಜಲಲ್ಲಿ ಸಿಕ್ಕಿ ಪಿಎಚ್‌ಡಿ ಮುಗಿಸಲು ಮತ್ತು ಪಡೆಯಲು ಹೈಕೋರ್ಟ್ ಮೆಟ್ಟಿಲು ಹತ್ತಬೇಕಾಯಿತು!

ಇದೆಲ್ಲ ನೆನಪಾಗಲು ಕಾರಣ, ವಿಜಯ ಪಾಟೀಲರ ಇಂದಿನ ಭೀಕರ ಮೌನ. ಅಂದು ವಿಜಯ ಪಾಟೀಲರು ಪರ್ಯಾಯಗಳ ಬಗ್ಗೆ ಮಾತನಾಡುತ್ತಾ ಜಾತ್ಯತೀತತೆ, ಸಾಮಾಜಿಕ ಸಂಕೀರ್ಣತೆ, ಪ್ರಗತಿಪರ ರಾಜಕಾರಣ ಇತ್ಯಾದಿಗಳ ಬಗ್ಗೆಯೆಲ್ಲಾ ಮಾತನಾಡಿದ್ದರು. ಈಗ ಅವರೊಬ್ಬರೇ ಅಲ್ಲ, ನನಗೆ ತಿಳಿದ ಮೂರ್ನಾಲ್ಕು ಜನ ಇಂತಹ ಮೌನಕ್ಕೆ ಸಂದಿದ್ದಾರೆ. ಒಬ್ಬರು ಸ್ವಇಚ್ಛೆಯಿಂದಲೇ ನಮ್ಮನ್ನು ಅಗಲಿ ಹೋಗಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಇಂದಿರಾ ಕೃಷ್ಣಪ್ಪನವರು ವಿಜಯ ಪಾಟೀಲರನ್ನು ನಿಮ್ಮ ಅನುಭವ ಬರೆದುಕೊಡಿ ಎಂದು ಕೇಳಿದ್ದು ತಮಾಷೆ ಎನಿಸಿತು. ಆದರೆ ಅವರು ಪಾಟೀಲರನ್ನು ಹುಡುಕಿಕೊಂಡು ಹೋದ ಪ್ರೀತಿಯ ಬಗ್ಗೆ ಮೆಚ್ಚುಗೆಯೂ ಇದೆ. ಈ ಮಧ್ಯೆ ಒಮ್ಮೆ ಚಂಪಾರನ್ನು ವಿಚಾರಿಸಿದಾಗ ಬೇಸರದಿಂದಲೇ ಅವರು 'ಊಂ... ಊರಲ್ಲಿದ್ದಾನೆ' ಎಂದಿದ್ದರು ಅಷ್ಟೆ.

ಪರ್ಯಾಯಗಳ ಹುಡುಕಾಟ ಮತ್ತು ಹೋರಾಟಗಳ ಸೋಲು ಕೃಷಿಯಲ್ಲಿ ಅನುಭವದಲ್ಲಿದ್ದಷ್ಟು ಬೇರಡೆ ಅಷ್ಟು ದಟ್ಟವಾಗಿಲ್ಲವೇನೋ!

**–ಡಾ. ಟಿ.ಎಸ್. ಚನ್ನೇಶ್,** ಬೆಂಗಳೂರು

ಪ್ರಿಯ ಓದುಗರೇ,


**ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು ಸಂಪಾದಕರು, ಹೊಸ ಮನುಷ್ಯ–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ (IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು.**

**ಚಂದಾ ವಿವರ, ದೂರವಾಣಿ ಸಂಖ್ಯೆಗಳು, ಈ ಮೇಲ್ ವಿಳಾಸ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.** –ಸಂಪಾದಕ

ಸಾಹಿತ್ಯ-ಸಂಸ್ಕೃತಿ-ಸಂಶೋಧನೆ ಇತ್ಯಾದಿ

# ಎರಡು ಪುಸ್ತಕಗಳು ಮತ್ತು ಪ್ರಶಸ್ತಿಯೆಂಬ ಮುಜುಗರಗಳು!

## ಸಂಕ್ರಮಣ ಸುವರ್ಣ ಸಂಪುಟ-೧





ಚಂಪಾ ಸಂಪಾದಕತ್ವದ ದ್ವೈಮಾಸಿಕ ಸಾಹಿತ್ಯ ಪತ್ರಿಕೆ 'ಸಂಕ್ರಮಣ' ಐವತ್ತು ವರ್ಷಗಳನ್ನು ಪೂರೈಸಿದ ಐತಿಹಾಸಿಕ ಸಂದರ್ಭದಲ್ಲಿ ಅದರ ಈವರೆಗಿನ ೪೨೪ ಸಂಚಿಕೆಗಳನ್ನೂ ೨೫ ಸಂಪುಟಗಳಲ್ಲಿ ಹೊರತರುವ ಯೋಜನೆಯನ್ನು ಸಂಕ್ರಮಣ ಪ್ರಕಾಶನ ಕೈಗೆತ್ತಿಕೊಂಡಿದ್ದು ಅದರ ಮೊದಲ ಸಂಪುಟ ಬಿಡುಗಡೆಯಾಗಿದೆ. ಆಗಸ್ಟ್ ೧೯೬೪ರ ಮೊದಲ ಸಂಚಿಕೆಯಿಂದ ಹಿಡಿದು ಜೂನ್ ೧೯೬೪ರವರೆಗಿನ ಹನ್ನೆರಡು ಸಂಚಿಕೆಗಳನ್ನು ಒಳಗೊಂಡು ೭೨೦ ಪುಟಗಳಷ್ಟು ಹರಡಿರುವ ಈ ಬೃಹತ್ ಸಂಪುಟವನ್ನು ಒಮ್ಮೆ ತಿರುವಿ ಹಾಕುವುದೇ ಒಂದು ಸಂಭ್ರಮದ, ರೋಮಾಂಚನದ ಅನುಭವ. ಏಕೆಂದರೆ, ಮೊದಲ ಸಂಚಿಕೆಯ ಸಂಪಾದಕೀಯವೇ ಹೇಳುವಂತೆ, ಆಗ ಕನ್ನಡದಲ್ಲಿ ಮೂಡುತ್ತಿದ್ದ ಹೊಸ ಪ್ರಜ್ಞೆಯೊಂದಕ್ಕೆ ಸಾಕ್ಷಿಯಾಗಿ ಈ ಸಂಚಿಕೆಗಳು ರೂಪುಗೊಂಡಿವೆ.

ಆ ಕಾಲದ ಮೈಲಿಗಲ್ಲುಗಳು ಎಂದು ಕರೆಯಬಹುದಾದ ಅಡಿಗರ 'ಪ್ರಾರ್ಥನೆ', ಕೆಎಸ್‌ನ ಅವರ 'ಕುಂಕುಮ ಭೂಮಿ' ಗಂಗಾಧರ ಚಿತ್ತಾಲರ 'ಹರಿವ ನೀರಿದು', ಲಂಕೇಶರ 'ಅವ್ವ', ಎ.ಕೆ. ರಾಮಾನುಜನ್‌ರ 'ಇದೂ ಒಂದು ಕವಿತೆ', ಕಂಬಾರರ 'ಋಷ್ಯಶೃಂಗ'', ನಾಡಿಗರ 'ಕಪ್ಪುದೇವತೆ', ಎಚ್.ಎಂ. ಚೆನ್ನಯ್ಯನವರ 'ಆಮೆ', ಆಲನಹಳ್ಳಿಯ 'ಬೆಳಗು' ಮುಂತಾದ ಕವನಗಳೂ, ಯಶವಂತ ಚಿತ್ತಾಲರ 'ಸೆರೆ' ಶಾಂತಿನಾಥ ದೇಸಾಯಿಯವರ 'ಗಂಡ ಸತ್ತ ಮೇಲೆ', ಗಿರಡ್ಡಿಯವರ 'ಆ ಮುಖಾ ಈ ಮುಖಾ', ಟಿ.ಜಿ. ರಾಘವರ 'ಶ್ರಾದ್ಧ' ಮುಂತಾದ ಕಥೆಗಳೂ ಮೊದಲ ಬಾರಿಗೆ ಪ್ರಕಟವಾಗಿ ಕನ್ನಡ ಓದುಗರ ಸಂವೇದನೆ ಒಂದು ಹೊಸ ನೆಲೆಯನ್ನು ಮುಟ್ಟಿದ ಸಂದರ್ಭಗಳ ಸಂಭ್ರಮ-ರೋಮಾಂಚನಗಳ ದಟ್ಟ ವಾಸನೆ ಈ ಸಂಪುಟದ ತುಂಬ ತುಂಬಿಕೊಂಡಿದೆ. ಹಾಗೇ ಗೌರೀಶ ಕಾಯ್ಕಿಣಿ, ಶಂಕರ ಮೊಕಾಶಿ, ಗಿರೀಶ ಕಾರ್ನಾಡ, ಶಾಂತಿನಾಥ ದೇಸಾಯಿ, ರಾಜೀವ್ ತಾರಾನಾಥ ಮುಂತಾದವರು ನಡೆಸಿರುವ ಚರ್ಚೆಗಳು ಸಾಹಿತ್ಯಿಕವಾಗಿ ಒಮ್ಮೆಗೇ ತೀವ್ರವೂ, ಆತ್ಮೀಯವೂ ಆಗಿ ನಮ್ಮ ಗಮನ ಸೆಳೆದು ಇಂದಿನ ಸಾಹಿತ್ಯಿಕ ಚರ್ಚೆಗಳ ಪಾರಿಭಾಷಿಕ ಗೊಡ್ಡುತನದ ಬಗ್ಗೆ ಯೋಚನೆ ಮಾಡುವಂತೆ ಒತ್ತಾಯಿಸುತ್ತವೆ. ಚಂಪಾ ಕಥೆಯನ್ನೂ, ಕಣವಿಯವರು ಸಾಹಿತ್ಯ ವಿಮರ್ಶೆಯನ್ನೂ ಬರೆದಿರುವ ದಾಖಲೆಯೂ ಈ ಸಂಪುಟದಲ್ಲಿದ್ದು, ಅಂದಿನ ಸಾಹಿತ್ಯಿಕ ವಾತಾವರಣದ ಕಾವನ್ನು ಪರಿಚಯ ಮಾಡಿಕೊಡುವಂತಿವೆ. ಆದರೆ, ಈ ಕಾವಿನ ಮಧ್ಯೆಯೂ ಈ ಸಂಪುಟದಲ್ಲಿ, ಮುಂದೆ ದೊಡ್ಡ ಹೆಸರು ಮಾಡಿದ ಲಂಕೇಶ್, ತೇಜಸ್ವಿ, ಅನಂತಮೂರ್ತಿಯವರು ಒಂದೋ ಎರಡೋ ಕವನಗಳ ಮೂಲಕವಷ್ಟೇ ಹಣಕಿರುವುದು ಮತ್ತು ಮತ್ತೆ ಮತ್ತೆ ಪ್ರತ್ಯಕ್ಷವಾಗಿರುವ ಹಲವು ಹೆಸರುಗಳು ಈಗ ಕಾಣೆಯಾಗಿರುವುದು; ಹಾಗೇ, ಇಡೀ ಸಂಪುಟದಲ್ಲಿ ಲೇಖಕಿಯರ ಸುಳಿವೆಂಬುದೇ ಇಲ್ಲದಿರುವುದನ್ನೂ ಕುತೂಹಲದಿಂದ ಗಮನಿಸಬಹುದು.

ಕಳೆದ ಐವತ್ತು ವರ್ಷಗಳ ಕನ್ನಡ ಸಾಹಿತ್ಯದ ಹೆಜ್ಜೆ ಗುರುತುಗಳ ಅಧ್ಯಯನ ಮಾಡಬಯಸುವವರಿಗೆ ಮತ್ತು ಈ ಅವಧಿಯ ಸಾಹಿತ್ಯಿಕ ಕಿಟಕಿಗಳನ್ನು ತೆರೆದುನೋಡುವ ಕುತೂಹಲ ಇರುವವರಿಗೆ ಇದೊಂದು ಉಪಯುಕ್ತ ಆಕರ ಗ್ರಂಥ. ಈ ಸಂಪುಟಗಳನ್ನು ಕನ್ನಡ ಸಂಸ್ಕೃತಿ ಇಲಾಖೆಯ ನೆರವಿನೊಡನೆ ಪ್ರಕಟಿಸುತ್ತಿರುವ ಚಂಪಾ ಅವರು ರಕ್ಷಾಪುಟವೂ ಸೇರಿದಂತೆ ಪುಸ್ತಕ ವಿನ್ಯಾಸವನ್ನು ಸ್ವಲ್ಪ ಆಕರ್ಷಕ ಮಾಡಬಹುದಿತ್ತು. ಈ ಸಂಪುಟದ ಬೆಲೆ ರೂ. ೪೬೬/- ಎಲ್ಲ ೨೫ ಸಂಪುಟಗಳ ಒಟ್ಟು ಬೆಲೆ: ರೂ. ೮೦೦೦/- ಕಂತು ಸೌಲಭ್ಯವೂ ಉಂಟು!

## ಹಂಪನಾ ಅವರ ಪ್ರಾಕೃತ ಕಥಾ ಸಾಹಿತ್ಯ

ಹಂಪನಾ ಕನ್ನಡದ ಹಿರಿಯ ವಿದ್ವಾಂಸರಲ್ಲೊಬ್ಬರು. ವಿಶೇಷವಾಗಿ ಜೈನ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಕ್ಷೇತ್ರಗಳಲ್ಲಿ. ಅವರು ಈ ಸಂಬಂಧ ಇತ್ತೀಚೆಗೆ ಹಲವು ಉದ್ಗ್ರಂಥಗಳನ್ನು ರಚಿಸಿ ಸಹ ವಿದ್ವಾಂಸರ ಗಮನ ಸೆಳೆದಿದ್ದಾರೆ. ಈ ಸಾಲಿನ ಇತ್ತೀಚಿನ ಗ್ರಂಥ: 'ಪ್ರಾಕೃತ ಕಥಾ ಸಾಹಿತ್ಯ: ಆಕೃತಿ-ಆಶಯ-ಆಯಾಮ-ಅನನ್ಯತೆ' ಈ ಗ್ರಂಥದ ಒಂದು ವಿಶೇಷತೆ ಎಂದರೆ ಇದರ ಭಾರಿ ಉಪಶೀರ್ಷಿಕೆಯ ಹೊರತಾಗಿಯೂ ಸಾಮಾನ್ಯ ಓದುಗರೂ ಇದನ್ನು ಓದಿ ಸವಿಯಬಹುದು. 'ವಡ್ಡಾರಾಧನೆ'ಯ ಆಚೆಗೂ ಏನೆಲ್ಲ ಇದೆಯೆಂದು ನೋಡಬಹುದು.




ಭಾರತೀಯ ಪಾರಂಪರಿಕ ಕಥಾ ಸಂಪ್ರದಾಯದ ವಿಶಿಷ್ಟತೆ ಮತ್ತು ಸಮೃದ್ಧಿಗಳೆರಡಕ್ಕೂ ಬೌದ್ಧದ ಜೊತೆಗೇ ದೊಡ್ಡ ಕೊಡುಗೆ ನೀಡಿದ ಜೈನ ಕಥಾ ವಲ್ಲರಿಯನ್ನು ಸಮಗ್ರವಾಗಿ, ಪ್ರಾಕೃತ ಮೂಲಗಳಿಂದ ಹೆಕ್ಕಿ ತೆಗೆದು ಹಂಪನಾ ಅವರು ಇಲ್ಲಿ ಒಂದು ಶಾಸ್ತ್ರೀಯ ಚೌಕಟ್ಟಿನಲ್ಲಿ ವಿಂಗಡಿಸಿ ಹಲವು ನೆಲೆಗಳ ವಿಶ್ಲೇಷಣೆಗಳಿಗೆ ಒಳಪಡಿಸಿದ್ದಾರೆ. ಅಷ್ಟೇ ಅಲ್ಲದೆ, ಇತರ ಮೂಲಗಳ ಮತ್ತು ಇತರ ವಿದ್ವಾಂಸರ ಕಥೆ ಮತ್ತು ವ್ಯಾಖ್ಯಾನಗಳನ್ನು ನೀಡುವ ಒಂದು ತೌಲನಿಕ ಪ್ರಯತ್ನವೂ ಇಲ್ಲಿದೆ. ಈ ಕೃತಿಯ ಪ್ರಕಾರ, "ಜೈನ ಕಥಾ ಸ್ವರೂಪದ ಮೊದಲ ಮುಖ್ಯ ಲಕ್ಷಣವೆಂದರೆ ಅಧ್ಯಾತ್ಮಿಕ ವಿಕಾಸದ ಅನಿಶ್ಚಿತ ಸ್ಥಿತಿಗಳ ಚಿತ್ರಣ. ಜೀವಿಗಳು ಬರೀ ಊರ್ಧ್ವಗಾಮಿ ಎನ್ನುವ ಸರಳ ಅಧ್ಯಾತ್ಮಿಕ ಆಶಾವಾದಗಳನ್ನು ಜೈನಕಥೆಗಳು ಒಪ್ಪುವುದಿಲ್ಲ. ಮೇಲಕ್ಕೆ ಏರುತ್ತಾ ಹೋದವನು ಹಾಗೆಯೇ ಕೆಳಗೂ ಬೀಳಬಲ್ಲ. ಮನುಷ್ಯರ ಬಗೆಗೆ ಕಟುನಿಷ್ಠುರ ದೃಷ್ಟಿಕೋನ ಜೈನಕಥಾ ಸಂವೇದನೆಯ ಮುಖ್ಯ ಲಕ್ಷಣ"

ಇಂತಹ ಘನಗಂಭೀರ ವ್ಯಾಖ್ಯಾನದ ಹೊರತಾಗಿಯೂ ಕೆಲ ಕಥೆಗಳು ತಮ್ಮ ಸರಳತೆಯಿಂದಾಗಿಯೇ ಕುತೂಹಲ ಹುಟ್ಟಿಸುವಂತಿವೆ. ಉದಾಹರಣೆಗೆ, ವಿವಾಹಿತೆಯೊಬ್ಬಳು ಕಳ್ಳನನ್ನು ಮೋಹಿಸತೊಡಗಿದಾಗ ವೈರಾಗ್ಯ ಮೂಡುವುದು ಆಕೆಯ ಗಂಡನಿಗಲ್ಲ; ಕಳ್ಳನಿಗೆ! ಇನ್ನೊಂದು ಕಥೆಯಲ್ಲಿ, ಮಾಂಸದ ಚೂರೊಂದಕ್ಕಾಗಿ ಪರಸ್ಪರ ಕಾದಾಡುವ ಹಕ್ಕಿಗಳ ಹಿಂಡೊಂದನ್ನು ನೋಡಿದ ರಾಜನೊಬ್ಬನಿಗೆ ವೈರಾಗ್ಯ ಮೂಡಿ, ತನ್ನ ಹದಿನಾರು ಸಾವಿರ ಮಡದಿಯರನ್ನು ತ್ಯಜಿಸಿ ಕಾಡಿಗೆ ತೆರಳುತ್ತಾನೆ. ಇದಕ್ಕೆ ನನ್ನ ಟೀಕೆ: ಆ ರಾಜನಿಗೆ ಹದಿನಾರು ಸಾವಿರಕ್ಕೆ ಬದಲಾಗಿ ಒಬ್ಬಳೇ ಮಡದಿ ಇದ್ದಿದ್ದರೆ, ಅವನಿಗೆ ಕಾಡಿಗೆ ತೆರಳುವಷ್ಟು ವೈರಾಗ್ಯವೇನೂ ಮೂಡುತ್ತಿರಲಿಲ್ಲ! ನನ್ನ ಟೀಕೆ ಕೇಳಿ ಹಂಪನಾ ಜೋರಾಗಿ ನಕ್ಕರು. ಅದೇನೇ ಇರಲಿ, ಈ ಗ್ರಂಥ ವಿಶೇಷ ಪರಿಶ್ರಮದ ದುಡಿಮೆಯ ಫಲ. ಕನ್ನಡ ವಿದ್ವತ್ತಿಗೊಂದು ದೊಡ್ಡ ಕೊಡುಗೆ. ಹಂಪನಾ ಅವರಿಗೆ ಅಭಿನಂದನೆಗಳು.

ಅಂದಹಾಗೆ, ಈ ಕೃತಿಯ ಬಗ್ಗೆ ಒಂದೆರಡು ವಾರಗಳ ಹಿಂದೆ 'ಪ್ರಜಾವಾಣಿ'ಯ ಸಾಪ್ತಾಹಿಕದಲ್ಲಿ ನಟರಾಜ ಬೂದಾಳು ಅವರು ಬರೆದ ವಿಮರ್ಶೆಯನ್ನು ಓದಿ ಹೆದರಿ ಯಾರೂ ಈ ಕೃತಿಯನ್ನೂ ಓದಲು ಹಿಂಜರಿಯಬೇಕಿಲ್ಲ. ಆ ವಿಮರ್ಶೆಗೂ ಈ ಕೃತಿಗೂ ಅಂತಹ ಸಂಬಂಧವೇನಿಲ್ಲ!

## ಪ್ರಶಸ್ತಿಗಳೆಂಬ ಮುಜುಗರಗಳು

ಮಹಿಳಾ ಸಾಹಿತ್ಯಕ್ಕೆ ಸುದೀರ್ಘ ಮತ್ತು ಅನನ್ಯ ಸೇವೆ ಸಲ್ಲಿಸಿದವರಿಗೆ ಕರ್ನಾಟಕ ಸರ್ಕಾರ ನೀಡುವ ವಾರ್ಷಿಕ 'ದಾನ ಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿಯನ್ನು ಈ ಬಾರಿ ಸರಸ್ವತಿ ಗೌಡ ಎನ್ನುವವರಿಗೆ ನೀಡಲಾಗಿದೆಯಂತೆ! ಆಶ್ಚರ್ಯಪಟ್ಟ ನಾನು ಇವರ ಅನನ್ಯ ಸೇವೆಯ ವಿವರ ತಿಳಿದುಕೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಯೊಬ್ಬರಿಗೆ ಕರೆ ಮಾಡಿ ಕೇಳಿದರೆ, ಅವರು ಈ ಹಿಂದೆ ಇದೇ ಪ್ರಶಸ್ತಿ ಪಡೆದ ಸರಸ್ವತಿ ಚಿಮ್ಮಲಗಿ ಎಂಬುವವರ ಅನನ್ಯ ಸೇವೆ ಏನು, ಗೊತ್ತಿದ್ದರೆ ತಿಳಿಸಿ ಎಂದು ವ್ಯಂಗ್ಯವಾಗಿ ನನ್ನನ್ನೇ ಮರುಪ್ರಶ್ನಿಸಿದರು! ಇದು ನಮ್ಮ ಸರ್ಕಾರಿ ಪ್ರಶಸ್ತಿಗಳು ಮುಟ್ಟಿರುವ ದುಃಸ್ಥಿತಿ! ಅಂದ ಮಾತ್ರಕ್ಕೆ ಖಾಸಗಿ ಪ್ರಶಸ್ತಿಗಳು ಶ್ರೇಷ್ಠವೆಂದೇನಲ್ಲ. ಅಲ್ಲಿಯೂ ಚಮಚಾಗಿರಿ, ಜಾತಿವಾದ, ವಶೀಲಿಬಾಜಿ, ದಗಲ್ಬಾಜಿ ಎಲ್ಲವೂ ನಡೆಯುತ್ತದೆ. ಈಗ ಪ್ರಶಸ್ತಿ ಸ್ವೀಕರಿಸುವುದೇ ಒಂದು ಮಹಾ ಮುಜುಗರದ, ಹಿಂಸೆಯ ಸಂಗತಿಯಾಗಿಬಿಟ್ಟಿದೆ.


ಹಾಗಾಗಿಯೇ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರೊಬ್ಬರು ಕರೆ ಮಾಡಿ 'ನಿಮಗೆ ಪ್ರಶಸ್ತಿ ನೀಡಲು ಯೋಚಿಸಿದ್ದೇವೆ. ನೀವು ತಿರಸ್ಕರಿಸುವುದಿಲ್ಲ ತಾನೇ?' ಎಂದು ಮುನ್ನೆಚ್ಚರಿಕೆಯ ಕ್ರಮವಾಗಿ ಕೇಳಿದಾಗ 'ಬೇಡ. ನಾನು ತಿರಸ್ಕರಿಸುತ್ತೇನೆ' ಎಂದು ಹೇಳಲು ನನಗೆ ಹೆಚ್ಚು ಸಮಯವೇನೂ ಬೇಕಾಗಲಿಲ್ಲ!

**-ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: ಹಿಂದುತ್ವ ಅಥವಾ ಹಿಂದ್ ಸ್ವರಾಜ್ ಲೇ: ಯು.ಆರ್. ಅನಂತಮೂರ್ತಿ
ಪ್ರ: ಆಭಿನವ, ಬೆಂಗಳೂರು ಪು: ೮೮ ಬೆಲೆ: ರೂ. ೧೦೦/–

# ಮೋದಿ ವಿಜಯದ ಆಘಾತದಲ್ಲಿ ಗಾಂಧಿ ಸ್ಮರಣೆ




ಇದು ಡಾ. ಯು.ಆರ್. ಅನಂತಮೂರ್ತಿಯವರ ಕೊನೆಯ ಪುಸ್ತಕ. ಎಷ್ಟು ಕೊನೆಯದಾದ ಪುಸ್ತಕ ಎಂದರೆ, ಅದಕ್ಕೆ ಲೇಖಕನ ಮಾತುಗಳನ್ನು ಬರೆಯುವ ಮುನ್ನವೇ ಅವರು ಅಸು ನೀಗಿದ್ದರು. ನಮ್ಮ ಹಿರಿಯ ಸಮಾಜವಾದಿ ಚಿಂತಕರೂ ಆಗಿದ್ದ ಅನಂತಮೂರ್ತಿಯವರು ಭಾರತೀಯ ಸಮಾಜವಾದಿ ಚಿಂತನೆಗೆ ಒಂದು ತಾತ್ವಿಕ ಭಿತ್ತಿಯಂತಿದ್ದ ಗಾಂಧಿ ಚಿಂತನೆಗೆ ಮತ್ತು ಆ ಮೂಲಕ ಆ ಚಿಂತನೆ ಕಟ್ಟಿಕೊಟ್ಟಿದ್ದ ಬಹುತ್ವ ಪ್ರಧಾನವಾದ ರಾಷ್ಟ್ರದ ಪರಿಕಲ್ಪನೆಗೆ ಈಗ–ಮೋದಿಯುಗದ ಆರಂಭದಲ್ಲಿ–ತೀವ್ರ ಅಪಾಯಗಳು ಒದಗಿವೆ ಎಂಬ ಅವರ ಆತಂಕವೂ ಈ ಕೃತಿಯನ್ನು ಕಟ್ಟಿದಂತಿದೆ. ಇದರ ಭಾಗವಾಗಿ ಅವರು ತಮ್ಮ ಸಮಾಜವಾದಿ ಚಿಂತನೆಗೆ ಮೂಲ ಸ್ಫೂರ್ತಿಯಂತಿದ್ದ ಡಾ. ರಾಮಮನೋಹರ ಲೋಹಿಯಾ ಅವರ ಕೆಲ ನಿಲುವುಗಳನ್ನು ಪುನರಾವಲೋಕಕ್ಕೂ ಈಡುಮಾಡಿದ್ದಾರೆ. ಈ ದೃಷ್ಟಿಯಿಂದ ಈ ಕೃತಿಯನ್ನು ಅನಂತಮೂರ್ತಿಯವರ ಕೊನೆಯ ಕೃತಿ ಹೇಗೋ ಹಾಗೇ ಅವರ ಚಿಂತನೆಯ ಆತ್ಯಂತಿಕ ಹಂತದ ಕೃತಿ ಎಂದೂ ಗುರುತಿಸಬಹುದು.

ನಮಗೆಲ್ಲ ತಿಳಿದಂತೆ ಅನಂತಮೂರ್ತಿಯವರಿಗೆ ಅವರ ಬದುಕಿನ ಕೊನೆಯ ದಿನಗಳಲ್ಲಿ ಮೋದಿ ರಾಜಕಾರಣವೆಂಬುದು ಅವರ ಜೀವನದ ಒಂದು ವ್ಯಸನವಾಗಿಬಿಟ್ಟಿತ್ತೇನೋ–ಆತ ಪ್ರಧಾನಿಯಾದರೆ ತಾವು ಈ ದೇಶದಲ್ಲಿರಲು ಇಷ್ಟಪಡುವುದಿಲ್ಲ ಎಂದು ಅವರು ಹೇಳುವಷ್ಟರಮಟ್ಟಿಗೆ–ಅವರನ್ನು ಕಾಡಿತ್ತು. ಅದರಿಂದಾಗಿ ಅವರು ಕೆಲ ವಲಯಗಳಿಂದ ವೈಯಕ್ತಿಕ ಅವಹೇಳನವನ್ನೂ ಎದುರಿಸಬೇಕಾಯಿತು. ಕೊನೆಗೆ ಮೋದಿ ಭಾರಿ ಬಹುಮತದಿಂದ ಗೆದ್ದಾಗ ಅವರು ಆಘಾತಗೊಂಡಿದ್ದರು. ಈ ಎಲ್ಲ ನೋವು–ಆಘಾತ–ತಲ್ಲಣಗಳು ಈ ಕೃತಿಯ ವಾಸ್ತುವನ್ನು ನಿರ್ಣಯಿಸಿದೆ.

ಈ ಕೃತಿ ಮುಖ್ಯವಾಗಿ ಭಾರತವನ್ನು ಕುರಿತ ಆಧುನಿಕ ಪರಿಕಲ್ಪನೆಯು ಗಾಂಧಿ ಮತ್ತು ಸಾವರ್ಕರ್ ಚಿಂತನೆಗಳೆಂಬ ಎರಡು ಮಾದರಿಗಳ ನಿರಂತರ ಸಂಘರ್ಷದಲ್ಲಿ ಮೂಡಿದೆ ಎಂಬ ಒಂದು ಐತಿಹಾಸಿಕ ಹಿನ್ನೋಟದಲ್ಲಿ ಕಟ್ಟಲ್ಪಟ್ಟಿದೆ. ಎಲ್ಲ ನೆಲೆಗಳ ಭಿನ್ನತೆಗಳೂ ರಾಷ್ಟ್ರ ಕಲ್ಪನೆಗೆ ಅಡ್ಡಿ ಎಂದು ಭಾವಿಸುವ ಸಾವರ್ಕರ್, ಭಿನ್ನತೆಗಳೇ ಭಾರತವನ್ನು ಉಳಿಸಿರುವ, ಉಳಿಸುವ ಜೀವಾಳ ಎಂದು ನಂಬಿದ ಗಾಂಧಿ 'ರಾಷ್ಟ್ರ ಪ್ರಭುತ್ವ'ವೆಂಬ ಆಧುನಿಕ ಪರಿಕಲ್ಪನೆಯನ್ನು ಕಟ್ಟಿಕೊಂಡ ರೀತಿಗಳನ್ನು ಕ್ರಮವಾಗಿ ಇವರಿಬ್ಬರ ಮುಖ್ಯ ಕೃತಿಗಳಾದ 'Essential of Hindutva' ಮತ್ತು 'ಹಿಂದ್ ಸ್ವರಾಜ್'ಗಳನ್ನು ಈ ಕೃತಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲೆಳಸುತ್ತದೆ. ಇದರ ಭಾಗವಾಗಿ ಸಾವರ್ಕರರ ಅನುಯಾಯಿ ಹಾಗೂ ಗಾಂಧಿ ಹಂತಕ ನಾಥೂರಾಂ ಗೋಡ್ಸೆ ನ್ಯಾಯಾಲಯದಲ್ಲಿ ನೀಡಿದ ಅಂತಿಮ ಹೇಳಿಕೆಯನ್ನೂ ಸಾರಾಂಶದಲ್ಲಿ ದಾಖಲಿಸಿ ಅದನ್ನು ಪರಿಶಿಲಿಸುವ ಪ್ರಯತ್ನವನ್ನೂ ಮಾಡುತ್ತದೆ. ಈ ಎಲ್ಲ ವಿಶ್ಲೇಷಣೆ–ಪರಿಶೀಲನೆಗಳ ತಾರ್ಕಿಕ ಅಂತ್ಯವೆಂಬಂತೆ, ಅನುಬಂಧದಲ್ಲಿ ಡಗ್ಲಸ್ ಲುಮ್ಮೀಸ್ ಎಂಬ ಗಾಂಧಿ ಚಿಂತಕನ 'ಕಲ್ಪಿಸಿಕೊಳ್ಳಬಲ್ಲಷ್ಟು ಕ್ವಚಿತ್ತಾದ ಸೇನೆ' ಎಂಬ ಲೇಖನವನ್ನು ಸಂಗ್ರಹಿಸಿ ನೀಡಿ ಮೋದಿ ರಾಜಕಾರಣ ಕಟ್ಟಲೆತ್ನಿಸುತ್ತಿರುವ 'ಬಲಿಷ್ಠ ಭಾರತ'ದ ಅಪಾಯಗಳೆದುರು ಗಾಂಧೀಜಿಯ 'ಸಾತ್ವಿಕ ಭಾರತ'ದ ವ್ಯಾವಹಾರಿಕತೆ ಮತ್ತು ಮೌಲಿಕತೆಗಳನ್ನು ಎತ್ತಿ ಹಿಡಿಯುವ ಪ್ರಯತ್ನವನ್ನೂ ಈ ಕೃತಿಯಲ್ಲಿ ಮಾಡಲಾಗಿದೆ.

ಈ ಎಲ್ಲ ವಿವೇಚನೆಗೆ ಪೀಠಿಕೆಯಾಗಿ ಲೇಖಕರು ಎಲ್ಲ ಧರ್ಮಗಳಲ್ಲಿರುವ–ಮುಖ್ಯವಾಗಿ ಹಿಂದೂ ಮತ್ತು ಕ್ರಿಶ್ಚಿಯನ್–ಒಳ್ಳೆಯತನ ಮತ್ತು ಕೆಟ್ಟತನಗಳ ಬಗೆಗಿರುವ ನಂಬಿಕೆಗಳ ಪರಾಮರ್ಶೆಯನ್ನೂ–ಸಾಹಿತ್ಯ ಸಂಕಥನಗಳಲ್ಲಿನ ಈ ಸಂಬಂಧದ ಕಥೆ–ಉಪಕಥೆಗಳ ಹಿನ್ನೆಲೆಯೊಂದಿಗೆ–ಮಾಡುತ್ತಾರೆ. ಇಲ್ಲೆಲ್ಲ ಅನಂತಮೂರ್ತಿಯವರ ಅಪಾರ ಓದು ಮತ್ತು ವಿದ್ವತ್ತು ಎದ್ದು ಕಾಣುವಂತಿದೆ. ಆದರೆ, ಇದೆಲ್ಲವೂ ಸಡಿಲ ವಾಕ್ಯಗಳು ಮತ್ತು ವಿಚಾರಗಳು ಅಸ್ತವ್ಯಸ್ತವಾಗಿ ಚೆಲ್ಲಾಡಿದಂತೆ ವಿಂಗಡಿಸಲ್ಪಟ್ಟಿರುವ ಅಧ್ಯಾಯಗಳಿಂದಾಗಿ ಈ ಕೃತಿ ಒಂದು ದೃಷ್ಟಿಕೇಂದ್ರವನ್ನು ಪಡೆದುಕೊಳ್ಳುವುದಿಲ್ಲ. ಇದನ್ನು ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬಹುದಾದರೂ, ಈ ಕೃತಿ ಮಾಡುವ ವಿವೇಚನೆ ಎತ್ತುವ ಗಾಂಧಿ ಪ್ರಭಾವದಲ್ಲಿ ತನ್ನೆಲ್ಲ ಅಪಾಯಗಳ ಮುನ್ಸೂಚನೆಗಳೊಂದಿಗೆ ಹಿನ್ನೆಲೆಗೆ ಸರಿದು ಅಪ್ರಸ್ತುತವೆನಿಸಿಹೋಗಿದ್ದ ಸಾವರ್ಕರ್ ಭಾರತ ಇಂದೇಕೆ–ಅದೂ ಇದ್ದಕ್ಕಿದ್ದಂತೆ–ಮುನ್ನೆಲೆಗೆ ಬರಲು ಸಾಧ್ಯವಾಗಿದೆ ಎಂಬ ಬಹು ಮುಖ್ಯ ಪ್ರಶ್ನೆಯನ್ನು ಲೇಖಕರು ಆಳದಲ್ಲಿ ಮುಖಾಮುಖಿಯಾಗಲು ಏಕೋ ಹಿಂಜರಿದಿದ್ದಾರೆ ಎಂಬ ಸಂಗತಿ ಈ ಕೃತಿಯ ಪ್ರಾಮುಖ್ಯತೆ ಮತ್ತು ಪ್ರಸ್ತುತತೆಗಳಿಗೆ ಕುಂದುಂಟು ಮಾಡಿದೆ ಎಂದೇ ಹೇಳಬೇಕು.

ಏಕೆಂದರೆ, ಗಾಂಧಿಯ ಆದರ್ಶವಾದಿ ಸಾತ್ವಿಕ ರಾಷ್ಟ್ರ ಕಲ್ಪನೆಗೆ ಆಧುನಿಕ ಜಗತ್ತಿನ ಪರಿಪ್ರೇಕ್ಷ್ಯದಲ್ಲಿ ವ್ಯಾವಹಾರಿಕ ಬೆನ್ನುಮೂಳೆ ಒದಗಿಸಲೆತ್ನಿಸಿದ ನೆಹರೂ–ಲೋಹಿಯಾ–ಅಂಬೇಡ್ಕರರ ತ್ರಿಕೋನಾತ್ಮಕವೆಂದು ಕರೆಯಬಹುದಾದ ಪ್ರಯತ್ನಗಳನ್ನು ಗಾಂಧಿ ಅಭಿಮಾನದ ಮಂಜುಗಣ್ಣಿನಿಂದಷ್ಟೇ ಇಲ್ಲಿ ನೋಡಲಾಗಿದೆ. ಬದಲಿಗೆ, ಅವನ್ನು ಒಂದಷ್ಟು ವಿವರವಾದ ವಿಮರ್ಶೆಗೆ ಒಳಪಡಿಸಿದ್ದಲ್ಲಿ ಈ ಕೃತಿ ಮಿಡಿಯುವ ಜೀವದೊಂದಿಗೆ ಒಂದಿಷ್ಟು ಉಸಿರಾಡತೊಡಗುವ ಸಾಧ್ಯತೆ ಇರುತ್ತಿತ್ತು. ಬದಲಿಗೆ ಅನಂತಮೂರ್ತಿಯವರು ಇಲ್ಲಿ ತಾವು ಇತ್ತೀಚಿನ ದಿನಗಳಲ್ಲಿ ಸಂಭ್ರಮಪೂರ್ಣವಾಗಿ ಬೆಂಬಲಿಸುತ್ತಿದ್ದ ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರ ದೌರ್ಬಲ್ಯಗಳನ್ನು ಅಲ್ಲಲ್ಲಿ ಟೀಕಿಸುವ ಪ್ರಯತ್ನ ಮಾಡುವರಾದರೂ, ಅದು ಕೃತಿಯ ಒಟ್ಟು ತರ್ಕದ ಭಾಗವಾಗದೆ, ಕೃತಿ ಕಟ್ಟಿಕೊಡಲೆಣಿಸುವ ತಾತ್ವಿಕ ವಿಶ್ಲೇಷಣೆ ಅನುಮಾನಾಸ್ಪದವೆನಿಸುತ್ತದೆ. ಇದಕ್ಕಿಂತ ನಿರಾಶೆ ಹುಟ್ಟಿಸುವ ಸಂಗತಿಯೆಂದರೆ, ಮೋದಿ ವಿಜಯಕ್ಕೆ ಮಾಧ್ಯಮಗಳ ವರ್ತನೆಯನ್ನು ಹೊಣೆ ಮಾಡುವ ಲೇಖಕರ ಸುಲಭ ರೀತಿ ನೀತಿಗಳು.

ಒಟ್ಟಾರೆಯಾಗಿ, ಮೋದಿ ಆಗಮನ ಕೆಟ್ಟದೇ ಆಗಿರುವುದಾದರೆ, ಅದು ಈ ಕೃತಿ ಸೂಚಿಸುತ್ತಿರುವ ಹಾಗೆ ಇದ್ದಕ್ಕಿದ್ದಂತೆ ಸಂಭವಿಸಿದ್ದಲ್ಲ; ಅದು ಕಳೆದ ಅರವತ್ತು ವರ್ಷಗಳ ಕಾಲ ನಡೆದ ದೀರ್ಘ ರಾಜಕೀಯ ನಾಟಕದ ತಾರ್ಕಿಕ ಫಲವಾಗಿದ್ದು, ಇದರಲ್ಲಿ ನಮ್ಮೆಲ್ಲರ ಒಂದಲ್ಲ ಒಂದು ರೀತಿಯ ಪಾತ್ರವಿದೆ ಎಂಬ ಅರಿವಿನ ಸೂಚನೆ ಇಲ್ಲಿ ಸುತರಾಂ ಕಾಣೆಯಾಗಿ, ಕೃತಿ ರಕ್ತ ಪರಿಚಲನೆಯ ಕೊರತೆಯಿಂದಾಗಿ ತಣ್ಣಗೆ ಕೊರೆಯುತ್ತದೆ.

ಈ ಕೃತಿಯ ಬಗ್ಗೆ ದಾಖಲಿಸಬಹುದಾದ ಇನ್ನೆರಡು ಅಸಮಾಧಾನಗಳೆಂದರೆ, ಯುಗ ಚಿಂತಕನಾಗಿ ಮಹಾತ್ಮನೆನಿಸಿದ ಗಾಂಧಿಯನ್ನು ಕಾಲದ ಇಕ್ಕಟ್ಟುಗಳಿಗೆ ಸಿಲುಕಿ ಜಡನಾದಂತೆ ತೋರುವ ಸಾವರ್ಕರ್ ಎಂಬ ಸಂಕುಚಿತವಾದಿ ಚಿಂತಕನೆದುರಿಗಿಟ್ಟು ಚರ್ಚಿಸುವ ಇಲ್ಲಿನ ಪ್ರಯತ್ನ ಗಾಂಧಿಯ ಅಪಮೌಲ್ಯೀಕರಣಕ್ಕೆ ಎಡೆಮಾಡಿಕೊಟ್ಟಿದೆಯಲ್ಲದೆ, ಸಾವರ್ಕರ್‌ಗೆ ಸಲ್ಲದ ಗೌರವಾನ್ವಿತತೆಯನ್ನು ಒದಗಿಸುವಂತಿದೆ. ಇನ್ನೊಂದು, ಗೋಡ್ಸೆ ತಾನು ಗಾಂಧಿಯನ್ನು ಕೊಂದುದನ್ನು ಸಮರ್ಥಿಸುವ ಭಾವಪ್ರಚೋದಕ ಹೇಳಿಕೆಯನ್ನು ಅನಗತ್ಯವಾಗಿ ಎರಡು ಪುಟಗಳಷ್ಟು ವಿಸ್ತಾರವಾಗಿ ನಿರೂಪಿಸುವ ಈ ಕೃತಿ, ಅದರ ದೋಷಗಳನ್ನು, ಇದು ಸಾವರ್ಕರ್ ಚಿಂತನೆಯ ಫಲ ಎಂದು ಎರಡೇ ಸಾಲುಗಳಲ್ಲಿ ತಿರಸ್ಕರಿಸುವ ಮೂಲಕ ಗೊತ್ತಿದ್ದೋ ಗೊತ್ತಿಲ್ಲದೆಯೋ ಸುಪ್ತ ಗೋಡ್ಸೆವಾದವನ್ನು ಬಡಿದೆಬ್ಬಿಸಲು ಆಸ್ಪದ ನೀಡಿದೆ.

ಈ ಅನಾಹುತಗಳಿಗೆಲ್ಲ ಮುಖ್ಯ ಕಾರಣ ಈ ಕೃತಿಯ ಆರಂಭದಲ್ಲಿ ಸೂಚಿತವಾಗಿ, ಈ ಕೃತಿಯ ಹಿಂದೆ ಕೆಲಸ ಮಾಡಿದಂತಿರುವ; ಸಮಸ್ಯೆ ಏನಿದ್ದರೂ ಹಿಂದೂತ್ವದ್ದೇ ಹೊರತು ಹಿಂದೂ ಧರ್ಮದ್ದಲ್ಲ ಎಂಬ ಪ್ರದರ್ಶನಪ್ರಿಯ, ಭೋಳೆ (ಯಾರನ್ನೋ ಮೆಚ್ಚಿಸಲು ಹವಣಿಸುವ) ಪ್ರತಿಪಾದನೆಯೇ ಆಗಿದೆ. ನೀವು ಒಳ್ಳೆಯದೆಂದು ನಂಬಿ ಆಚರಿಸುವ ಧರ್ಮಕ್ಕೆ ಒಂದು ನಿರ್ದಿಷ್ಟ ಹೆಸರಿನ ಹೆಮ್ಮೆಯ ಪ್ರದರ್ಶನಪ್ರಿಯತೆ ಏಕೆ? ಧರ್ಮ ರಾಜಕಾರಣವಾಗಿ ಪರಿವರ್ತಿತವಾಗುವುದೂ, ಎಲ್ಲ ಅನಾಹುತಗಳು ಆರಂಭವಾಗುವುದೂ ಅಲ್ಲಿಯೇ.

**–ಡಿ.ಎಸ್. ನಾಗಭೂಷಣ**

'ಹೊಸ ಮನುಷ್ಯ'
ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ಮೆ। ಡಿ.ಎಂ. ಅರಳಿಕಟ್ಟಿ ಇಂಜಿನಿಯರಿಂಗ್ ವರ್ಕ್ಸ್**

(ಫ್ಯಾಬ್ರಿಕೇಶನ್ಸ್ ಕೆಲಸಗಳಲ್ಲಿ ಪರಿಣತರು)

**ಪ್ರೊ: ದವಲ್ ಸಾಬ್ ಎಂ. ಅರಳಿಕಟ್ಟಿ**

ಯಾಲಕ್ಕಿ ಶೆಟ್ಟಿ ಕಾಲೋನಿ,

**ಧಾರವಾಡ**

**ಶುಭಾಶಯಗಳೊಂದಿಗೆ,**




ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು ಸಂಪರ್ಕಿಸಿ: 080- 30 600 600

**ಸಮಾಜವಾದವನ್ನು ಪುನರುಜ್ಜೀವನಗೊಳಿಸುತ್ತಿರುವ**
**'ಹೊಸ ಮನುಷ್ಯ' ಮಾಸಿಕಕ್ಕೆ**
**ಹಾರ್ದಿಕ ಶುಭಾಶಯಗಳು**



**–ಪ್ರೊ. ಕಾಳೇಗೌಡ ನಾಗವಾರ**
**ಮತ್ತು ಕುಟುಂಬ**
**ಮೈಸೂರು**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**ತಿಂಗಳ ಸಾಲುಗಳು...**



ತನ್ನ ಕುರಿಮಂದೆಗಾಗಿ ಜೀವವನ್ನೇ ಕೊಡಬಲ್ಲವನೇ ನಿಜವಾದ ಕುರುಬಣ್ಣ.

**–ಬೈಬಲ್**

**ಪತ್ರಿಕೆಗೆ ಶುಭ ಕೋರುತ್ತಾ...**

**–ಬಿ.ಸುರೇಶ**

**ಡಾ. ವಿಜಯಾ**

**Regd. News Paper** RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)